*Pandit Teaches the Bible Series*

# Bible Characters

**Kannada Edition 2012, 2019**

**Authors: Manjappa and Viresh**

ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕಗಳ ಸರಣಿ

# ಸತ್ಯವೇದದ ವ್ಯಕ್ತಿಗಳ ಕುರಿತು ಓದೋಣ ಮತ್ತು ಬರೆಯೋಣ

***ಎರಡನೆಯ ಕನ್ನಡ ಆವೃತ್ತಿ***

ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ವೀರೇಶ್ ಮತ್ತು ಮಂಜಪ್ಪ**

**Lets Read & Write! (About Bible Characters)**

*By* **Veeresh** and **Manjappa**

Veeresh and Manjappa are graduates of Kannada Satyaveda College. Veeresh is from Gangavathi and Manjappa is from Huvinahadagali. Veeresh is assisting KSC in typing, translating and editing study materials and Manjappa is doing ministry along with his pastor (Prakash Naik) in Huvinahadagali.

Copyright © 2012 by Kannada Satyaveda College

Davangere, India

*e-mail:*ksc.ffpck@gmail.com

*Website:* www.ksc1.webs.com

*Cover design & layout*

**Genie Cliffⓓ JLF.inc**

This book has been produced in
few copies for private use.
It is not for sale.

ಎಲ್ಲಾ ಸತ್ಯವೇದ ವಚನಗಳನ್ನು
ನ್ಯೂ ಇಂಡಿಯಾ ಬೈಬಲ್ ವರ್ತನ್‌ನಿಂದ
ತೆಗೆದುಕೊಳ್ಳಲಾಗಿದೆ.

# ವಿಷಯಾನುಕ್ರಮಣಿಕೆ


| | | |
|---|---|---|
| 1. | ಆದಾಮ | 05 |
| 2. | ನೋಹ | 07 |
| 3. | ಅಬ್ರಹಾಮ | 09 |
| 4. | ಇಸಾಕ | 10 |
| 5. | ಯಾಕೋಬ | 13 |
| 6. | ಯೋಸೇಫ | 15 |
| 7. | ಮೋಶೆ | 17 |
| 8. | ಯೆಹೋಷುವ | 19 |
| 9. | ಗಿದ್ಯೋನ | 21 |
| 10. | ಸಂಸೋನ | 23 |
| 11. | ರೂತಳು | 25 |
| 12. | ಸಮುವೇಲ | 27 |
| 13. | ಸೌಲ | 29 |
| 14. | ದಾವೀದ | 31 |
| 15. | ಸೊಲೊಮೋನ | 33 |
| 16. | ರೆಹೊಬ್ಬಾಮ ಮತ್ತು ಯೆರೊಬ್ಬಾಮ | 35 |
| 17. | ಆಸ | 37 |
| 18. | ಯೆಹೋಷಾಫಾಟ | 38 |
| 19. | ಎಲೀಯ | 40 |
| 20. | ಎಲೀಷ | 42 |
| 21. | ಯೇಹು | 44 |
| 22. | ಹೋಶೇಯ | 46 |
| 23. | ಹಿಜ್ಕೀಯ | 48 |
| 24. | ಯೆಶಾಯ | 50 |
| 25. | ಯೊಷೀಯ | 52 |
| 26. | ಯೆರೆಮೀಯ | 54 |
| 27. | ಶದ್ರಕ್, ಮೇಶಕ್, ಅಬೇದ್ ನೆಗೋ | 56 |
| 28. | ದಾನಿಯೇಲ | 58 |
| 29. | ಜೆರುಬ್ಬಾಬೇಲ್ | 60 |
| 30. | ಎಜ್ರ | 62 |

| | | |
|---|---|---|
| 31. | ನೆಹೆಮೀಯ | 64 |
| 32. | ಎಸ್ತೇರಳು | 66 |
| 33. | ಯೋಬ | 68 |
| 34. | ಯೋನ | 70 |
| 35. | ಮರಿಯಳು | 72 |
| 36. | ಎಲೀಜಬೇತಳು | 74 |
| 37. | ಸ್ನಾನಿಕನಾದ ಯೋಹಾನ | 75 |
| 38. | ಯೇಸು ಕ್ರಿಸ್ತನು | 78 |
| 39. | ಲಾಜರನು | 83 |
| 40. | ಪೇತ್ರ (ಸೀಮೋನ) | 85 |
| 41. | ಮಾರ್ಥಳು | 87 |
| 42. | ಮತ್ತಾಯ | 88 |
| 43. | ಮಗ್ದಲದ ಮರಿಯಳು | 89 |
| 44. | ಸ್ತೆಫನ | 90 |
| 45. | ಬಾರ್ನಬನು | 92 |
| 46. | ಫಿಲಿಪ್ಪನು | 94 |
| 47. | ಪೌಲನು | 96 |

# ಆದಾಮ

ದೇವರು ಸೃಷ್ಠಿಕರ್ತನು. ಶೂನ್ಯದಿಂದಲೇ ಸಮಸ್ತವನ್ನು ಉಂಟುಮಾಡಿದನು. ಭೂಮ್ಯಾಕಾಶಗಳನ್ನು, ಸಾಗರ ಸಮುದ್ರಗಳನ್ನು, ಸಕಲ ಜೀವರಾಶಿಗಳನ್ನು ಉಂಟುಮಾಡಿದನು. ದೇವರಿಂದ ಉಂಟಾಗಿರುವಂತದ್ದೆಲ್ಲವು ಒಳ್ಳೆಯದಾಗಿತ್ತು. ಸತ್ಯವೇದವು ತಿಳಿಸುವಂತೆ ದೇವರು ಮನುಷ್ಯನನ್ನು ಸೃಷ್ಠಿಮಾಡುವುದಕ್ಕಿಂತ ಮುಂಚೆ ಮನುಷ್ಯನಿಗೆ ಜೀವಿಸಲು ಬೇಕಾದಂತಹ ಮೂಲಭೂತ ಅವಶ್ಯಕತೆಗಳನ್ನು ಉಂಟುಮಾಡಿದ ನಂತರವೇ ಮನುಷ್ಯನನ್ನು ಸೃಷ್ಠಿಮಾಡಿದನು. ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಸೃಷ್ಠಿಸಿದನು. ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದಾಗ ಅವನು ಬದುಕುವ ಪ್ರಾಣಿಯಾದನೆಂದು ಸತ್ಯವೇದವು ತಿಳಿಸುತ್ತದೆ.

ದೇವರು ಮನುಷ್ಯ(ಆದಾಮ)ನನ್ನು ಉಂಟುಮಾಡಿದ್ದರ ಉದ್ದೇಶವು ಒಳ್ಳೆಯದಾಗಿತ್ತು. ದೇವರು ಅವನೊಂದಿಗೆ ಉತ್ತಮವಾದ ಸಂಬಂಧವನ್ನು, ಅನ್ಯೋನ್ಯತೆಯನ್ನು ಹೊಂದಲು ಬಯಸಿದ್ದನು. ದೇವರು ಆದಾಮನಿಗೆ ಭೂಮಿಯ ಮೇಲೆ ಜೀವಿಸುವ ಪ್ರಾಣಿಗಳ ಮೇಲೆ, ಪಕ್ಷಿಗಳ ಮೇಲೆ, ಜಲಚರಗಳ ಮೇಲೆ ಹೀಗೆ ದೇವರಿಂದ ಉಂಟಾಗಿರುವಂತಹ ಸಮಸ್ತ ಸೃಷ್ಠಿಯ ಮೇಲೆ ಅಧಿಕಾರವನ್ನು ಕೊಟ್ಟಿದ್ದನು. ಆದಾಮನು ದೇವರಿಗೆ ವಿಧೇಯನಾಗುವ ಮತ್ತು ಅವಿಧೇಯನಾಗಿ ಜೀವಿಸುವ ಸ್ವಆಲೋಚನೆಯನ್ನು ಹೊಂದಿದ್ದನು.

ದೇವರು ಏದೇನ್ ತೋಟವನ್ನು ನಿರ್ಮಿಸಿ ಅದನ್ನು ಕಾಯುವುದಕ್ಕಾಗಿಯೂ ಮತ್ತು ವ್ಯವಸಾಯ ಮಾಡುವುದಕ್ಕಾಗಿಯೂ ಆದಾಮನನ್ನು ನೇಮಿಸಿದನು. ಆದಾಮನು ಒಂಟಿಯಾಗಿದ್ದನು. ಇದು ದೇವರಿಗೆ ಒಳ್ಳೆಯದಾಗಿ ಕಾಣಿಸಲಿಲ್ಲ. ಆದ್ದರಿಂದ ದೇವರು ಆದಾಮನಿಗೆ ಸರಿ ಬೀಳುವ ಸಹಕಾರಣಿಯನ್ನು ಉಂಟುಮಾಡುವುದಕ್ಕಾಗಿ ಅವನಿಗೆ ಗಾಡ ನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಅದನ್ನು ಸ್ತ್ರೀಯಾಗಿ ಮಾಡಿದನು. ಆದಾಮನು ಅವಳನ್ನು ಹವ್ವಳು ಎಂಬುದಾಗಿ ಕರೆದನು. ಮದುವೆ ದೇವರ ಯೋಜನೆಯಾಗಿದೆ ಮತ್ತು ದೇವರಿಂದಲೇ ನೇಮಿತವಾಗಿದೆ. ದೇವರು ಅವರಿಬ್ಬರನ್ನು ಆಶೀರ್ವದಿಸಿದನು.

ದೇವರು ಆದಾಮನೊಂದಿಗಿರುವ ಸಂಬಂಧವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅವನಿಗೆ ಒಂದು ಆಜ್ಞೆಯನ್ನು ನೀಡಿದನು. ಆ ಆಜ್ಞೆಯು– ಆದಾಮನು ಏದೇನ್ ತೋಟದ ಎಲ್ಲಾ ಮರಗಳ ಹಣ್ಣುಗಳನ್ನು ತಿನ್ನಬಹುದಾಗಿತ್ತು, ಆದರೆ ಒಳ್ಳೇದರ ಮತ್ತು ಕೆಟ್ಟದರ ಅರುಹನ್ನುಂಟುಮಾಡುವ ಮರದ ಹಣ್ಣನ್ನು ತಿನ್ನಬಾರದು ಮತ್ತು ತಿಂದರೆ ಸತ್ತು ಹೋಗುವನು– ಎಂಬುದಾಗಿತ್ತು. ಆದಾಮನು ದೇವರೊಂದಿಗಿನ ಈ ಅನ್ಯೋನ್ಯತೆಯಲ್ಲಿ ಮುಂದುವರಿಯಲು ಮತ್ತು ದೇವರೊಂದಿಗೆ ನಿರಂತರವಾಗಿ ಜೀವಿಸಲು ದೇವರು ಕೊಟ್ಟ ಈ ಆಜ್ಞೆಗೆ ವಿಧೇಯನಾಗಬೇಕಿತ್ತು. ಆದರೆ ಒಂದು ದಿನ ಸೈತಾನನು ಆದಾಮ ಮತ್ತು ಹವ್ವಳ ಹತ್ತಿರ ಬಂದು ದೇವರಿಂದ ನಿಷೇಧಿಸಲ್ಪಟ್ಟ ಆ ಮರದ ಹಣ್ಣನ್ನು ತಿಂದರೆ ನೀವು ದೇವರಂತೆ ಆಗುವಿರಿ ಎಂದು ಹೇಳಿ ಅವರಿಬ್ಬರನ್ನು ವಂಚಿಸಿದನು. ಅವರಿಬ್ಬರು ದೇವರ ಆಜ್ಞೆಯನ್ನು ಮೀರಿ ದೇವರಿಗೆ ವಿರೋಧವಾಗಿ ಪಾಪಮಾಡುವಂತೆ ಪ್ರೇರೇಪಿಸಿದನು. ಅವರು ಆ ಮರದ ಹಣ್ಣನ್ನು ತೆಗೆದುಕೊಂಡು ತಿಂದರು. ಆಗ ಅವರ ಕಣ್ಣುಗಳು ತೆರೆಯಲ್ಪಟ್ಟವು. ಅವರು ದೇವರಿಗೆ ಅವಿಧೇಯರಾದರು. ದೇವರೊಂದಿಗಿನ ಸಂಬಂಧವನ್ನು ಕಳೆದುಕೊಂಡರು. ಅವರು ಶಾರೀರಿಕವಾಗಿ ಸಾಯದಿದ್ದರೂ ಆತ್ಮೀಕವಾಗಿ ಸತ್ತುಹೋದರು. ಇದರ ನಿಮಿತ್ತ ಭೂಮಿಗೆ ಶಾಪ ಬಂದಿತು.



ದೇವರು ಪ್ರತಿದಿನದಂತೆ ಆ ದಿನದ ಸಂಜೆಯಲ್ಲಿ ಅವರನ್ನು ಸಂಧಿಸಲು ಬಂದಾಗ ಅವರು ತನಗೆ ಅವಿಧೇಯರಾಗಿ ಪಾಪಮಾಡಿರುವುದು ತಿಳಿದುಬಂದಿತು. ಆಗ ದೇವರು ಆದಾಮನನ್ನು ಏದೇನ್ ತೋಟದಿಂದ ಹೊರಗೆ ಹಾಕಿ ಜೀವಮಾನವೆಲ್ಲಾ ದುಡಿದು ತಿನ್ನುವಂತೆ ನೇಮಿಸಿದನು. ಇದಕ್ಕೆಲ್ಲ ಕಾರಣನಾದ ಸೈತಾನನನ್ನು ದೇವರು ಶಪಿಸಿದನು. ಆದಾಮನು ದೇವರೊಂದಿಗೆ ನಿರಂತರವಾಗಿ ಜೀವಿಸಲಿಕ್ಕೆ ಮರಣವು ಅಡ್ಡಿಯಾಯಿತು. ಆದರೂ ಕೃಪೆಯುಳ್ಳ ದೇವರು ಅವನನ್ನು ರಕ್ಷಿಸುವುದಕ್ಕಾಗಿ ರಕ್ಷಣಾ ಯೋಜನೆಯನ್ನು ಪ್ರಕಟಿಸಿದನು(ಆ.ಕಾ:3:15). ಅದು ಯೇಸುಕ್ರಿಸ್ತನ ಕುರಿತಾಗಿ ಇದೆ.

ಆದಾಮನ ಅವಿಧೇಯತೆಯು ದೇವರೊಂದಿಗಿನ ಸಂಬಂಧವನ್ನು ಮುರಿಯಿತು ಮತ್ತು ದೇವರ ಯೋಜನೆಗೆ ಅಡ್ಡಿಯಾಯಿತು. ವಿಧೇಯತೆಯು ಮಾತ್ರ ದೇವರ ಉದ್ದೇಶವನ್ನು ಪರಿಪೂರ್ಣವಾಗಿ ನೆರವೇರಿಸುತ್ತದೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಆದಿಕಾಂಡ 1–3 ಅಧ್ಯಾಯಗಳು*

## ಪ್ರಶ್ನೆಗಳು

1) ದೇವರು ಆದಾಮನನ್ನು ಹೇಗೆ ಉಂಟುಮಾಡಿದನು?

2) ದೇವರು ಆದಾಮನಿಗೆ ಯಾವ ಆಜ್ಞೆಯನ್ನು ಕೊಟ್ಟನು?

3) ದೇವರ ಆಜ್ಞೆಯು ಏದೇನ್ ತೋಟದಲ್ಲಿ ಹೇಗೆ ಮುರಿಯಲ್ಪಟ್ಟಿತು?

4) ಆದಾಮನು ಪಾಪಮಾಡಿದ್ದರಿಂದ ಉಂಟಾದ ಪರಿಣಾಮವೇನು?

5) ಆದಾಮನ ಜೀವಿತದಿಂದ ನಾವು ಕಲಿಯುವಂತಹ ಸಂಗತಿಗಳೇನು?

# ನೋಹ

ನೋಹನು ದೇವರಿಗೆ ವಿಧೇಯನಾಗಿ ನಡೆದು ದೇವರ ಯೋಜನೆಯನ್ನು ನೆರವೇರಿಸಿದಂತಹ ದೈವಭಕ್ತನಾಗಿದ್ದಾನೆ. ಈತನು ತಾನು ವಾಸಿಸುವ ಕಾಲದವರಲ್ಲಿ ತಪ್ಪಿಲ್ಲದವನಾಗಿದ್ದನು. ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಂಡು ದೇವರಿಗೆ ಮೆಚ್ಚುಗೆಯುಳ್ಳವನಾಗಿದ್ದನು.

ಭೂಮಿಯ ಮೇಲೆ ಜನರು ಬಹಳವಾಗಿ ಹೆಚ್ಚಿದರು. ಪಾಪದ ಸ್ವಭಾವವುಳ್ಳಂತಹ ಮನುಷ್ಯರು ಹೆಚ್ಚಿದಂತೆಲ್ಲಾ ಅವರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾಯಿತು. ಜನರು ಯೋಚಿಸುವಂತದ್ದೆಲ್ಲಾ ಕೆಟ್ಟದ್ದಾಗಿತ್ತು. ಪರಿಶುದ್ಧನಾದ ದೇವರು ಪಾಪದಲ್ಲಿ ಜೀವಿಸುತ್ತಿರುವ ಜನರನ್ನು ನೋಡಿ ತಾನು ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದಕ್ಕೆ ಪಶ್ಚತ್ತಾಪ ಪಟ್ಟು ತನ್ನ ಹೃದಯದಲ್ಲಿ ನೊಂದುಕೊಂಡನು. ಆದ್ದರಿಂದ ದೇವರು ಭೂಮಿಯ ಮೇಲೆ ಜೀವಿಸುವಂತಹ ಎಲ್ಲಾ ಮನುಷ್ಯರನ್ನು ಮತ್ತು ಸಕಲ ಪ್ರಾಣಿ ಪಕ್ಷಿಗಳನ್ನು, ಕ್ರಿಮಿಕೀಟಗಳನ್ನು ನಾಶಮಾಡಲು ತೀರ್ಮಾನಿಸಿದನು. ಆದರೆ ಪರಿಶುದ್ಧನಾಗಿ, ಯಾವುದೇ ತಪ್ಪಿಲ್ಲದವನಾಗಿ ಜೀವಿಸುತಿದ್ದ ನೋಹನ ಮೇಲೆ ದೇವರ ದಯೆ ಉಂಟಾಯಿತು. ಪಾಪದಲ್ಲಿ ಜೀವಿಸುತ್ತಿರುವ ಎಲ್ಲಾ ಜನರನ್ನು ನಾಶಮಾಡಿ ನೋಹನ ಮೂಲಕ ಹೊಸ ಪರಿಶುದ್ಧವಾದ ಸಂತತಿಯನ್ನು ಉಂಟುಮಾಡಲು ದೇವರು ನಿರ್ಧರಿಸಿದನು.



ದೇವರು ತನ್ನ ಆಲೋಚನೆಯನ್ನು, ತಾನು ಜನರನ್ನು ನಾಶಮಾಡುವ ಕಾರ್ಯವನ್ನು ನೋಹನಿಗೆ ತಿಳಿಸಿದನು. ಭೂಲೋಕದ ಎಲ್ಲಾ ಜನರು ಕೆಟ್ಟುಹೋಗಿದ್ದಾರೆ. ಆದ್ದರಿಂದ ಭೂಮಿಯ ಮೇಲೆ ಜಲಪ್ರಳಯವನ್ನು ಉಂಟುಮಾಡಿ ಆಕಾಶದ ಕೆಳಗಿರುವ ಸಕಲ ಜನರನ್ನು ಪ್ರಾಣಿಪಕ್ಷಿಗಳನ್ನು ನಾಶಮಾಡುವೆನು. ಅದದರಿಂದ ನೀನು ಒಂದು ನಾವೆಯನ್ನು ಕಟ್ಟಿಕೊಂಡು ಅದರಲ್ಲಿ ನೀನು ಹೆಂಡತಿ ಮಕ್ಕಳು ಸೊಸೆಯರ ಸಹಿತವಾಗಿ ಸೇರಬೇಕು. ಇದಲ್ಲದೆ ಜೀವಿಗಳ ಪ್ರತಿ ಜಾತಿಯಲ್ಲಿಯೂ ಒಂದು ಗಂಡು ಒಂದು ಹೆಣ್ಣು ಹೀಗೆ ಎರಡೆರಡನ್ನು ನಾವೆಯಲ್ಲಿ ಸೇರಿಸಿ ನಿನ್ನೊಂದಿಗೆ ಉಳಿಸಿ ಕಾಪಾಡಬೇಕು ಎಂದು ದೇವರು ನೋಹನಿಗೆ ಹೇಳಿದನು. ನೋಹನು ದೇವರು ಹೇಳಿದಂತೆ ಮಾಡಿದನು. ಆದರೆ ಜನರು ತಿನ್ನುವುದರಲ್ಲಿಯೂ ಕುಡಿಯುವುದರಲ್ಲಿಯೂ ಪಾಪಮಾಡುವುದರಲ್ಲಿಯೂ ಮುಂದುವರೆದರು.

ದೇವರು ತಾನು ಹೇಳಿದಂತೆ ಜನರನ್ನು ನಾಶಮಾಡಲು ಜಲಪ್ರಳಯವನ್ನು ಉಂಟುಮಾಡಿದನು. ಭೂಮಿಯ ಕೆಳಗಿರುವ ಸಾಗರದ ಸೆಲೆಗಳು ಒಡೆದವು. ಆಕಾಶದ ತೂಬುಗಳು ತೆರೆದವು. 40 ದಿನವೂ ಹಗಲಿರಳು ಭೂಮಿಯ ಮೇಲೆ ದೊಡ್ಡ ಮಳೆ ಸುರಿಯಿತು. ನೀರು ಪ್ರಬಲವಾಗಿ ಹೆಚ್ಚಿದ್ದರಿಂದ ಆಕಾಶದ ಕೆಳಗಿರುವ ಎಲ್ಲಾ ದೊಡ್ಡ ಬೆಟ್ಟಗಳು ನೀರಿನಲ್ಲಿ ಮುಳುಗಿಹೋದವು. ಇದರಿಂದ ಮನುಷ್ಯರು ಪ್ರಾಣಿ ಪಕ್ಷಿಗಳು ಅಂತೂ ಭೂಮಿಯ ಮೇಲೆ ಸಂಚರಿಸುವ ಎಲ್ಲಾ ಜೀವಿಗಳು ನಾಶವಾದವು. ಆದರೆ ನೋಹನು ಮತ್ತು ಅವನ ಹೆಂಡತಿ ಮಕ್ಕಳು ಸೊಸೆಯರು ಮತ್ತು ನಾವೆಯೊಳಗಿದ್ದ ಪ್ರಾಣಿಪಕ್ಷಿಗಳು ಮಾತ್ರ ಬದುಕುಳಿದವು.

ಜಲಪ್ರಳಯದ ನೀರು 150 ದಿನ ಪ್ರಬಲವಾಗಿದ್ದ ನಂತರ ದೇವರು ಭೂಮಿಯ ಮೇಲೆ ಗಾಳಿಯನ್ನು ಬೀಸುವಂತೆ ಮಾಡಿ ನೀರನ್ನು ತಗ್ಗಿಸಿದನು. ಆಗ ದೇವರು ನೋಹನಿಗೆ ಮತ್ತು ಅವನೊಂದಿಗಿದ್ದ ಜೀವಿಗಳು ನಾವೆಯಿಂದ ಹೊರಬರುವಂತೆ ತಿಳಿಸಿದನು. ನೋಹನು ಮತ್ತು ಅವನೊಂದಿಗಿದ್ದ ಎಲ್ಲಾ ಜೀವಿಗಳು ನಾವೆಯಿಂದ ಹೊರಬಂದವು. ದೇವರು ಅವುಗಳನ್ನು ಅಭಿವೃದ್ಧಿಯಾಗಿ ಹೆಚ್ಚಲಿ ಎಂದು ಆಶೀರ್ವದಿಸಿದನು. ನೋಹನು ದೇವರಿಗೆ ಯಜ್ಞವೇದಿಯನ್ನು ಮಾಡಿ ಅದರ ಮೇಲೆ ಶುದ್ಧವಾದ ಎಲ್ಲಾ ಪಶುಪಕ್ಷಿಗಳನ್ನು ಸರ್ವಾಂಗಹೋಮಮಾಡಿದನು. ಅದರ ಸುವಾಸನೆಯು ಗಮಗಮಿಸಿತು. ದೇವರು ನೋಹನಿಗೆ ಮತ್ತು ಅವನ ಮಕ್ಕಳಿಗೆ ಬಹುಸಂತಾನವುಳ್ಳವರಾಗಿ ಹೆಚ್ಚಿರಿ, ಭೂಮಿಯ ಮೇಲೆ ದೊರೆತನ ಮಾಡಿರಿ, ಇನ್ನು ಮುಂದೆ ಭೂಮಿಯನ್ನು ಜಲಪ್ರಳಯದಿಂದ ನಾಶಮಾಡುವುದಿಲ್ಲ ಎಂದು ಒಡಂಬಡಿಕೆಯನ್ನು ಮಾಡಿದನು. ಅದರ ಗುರುತಿಗಾಗಿ ಮುಗಿಲುಬಿಲ್ಲನ್ನು ಇಟ್ಟನು.

ನೋಹನ ವಿಧೆಯತೆಯು ಅವನನ್ನು ಮತ್ತು ಅವನ ಕುಟುಂಬವನ್ನು ರಕ್ಷಿಸಿಕೊಳ್ಳಲು ಸಹಾಯಮಾಡಿತು. ಹೊಸ ಜನಾಂಗವು ಉತ್ಪತ್ತಿಯಾಗಲು ಕಾರಣವಾಯಿತು ಮತ್ತು ದೇವರ ಆಶೀರ್ವಾದವನ್ನು ತಂದಿತು. ವಿಧೇಯತೆಯು ದೇವರ ಕೋಪಕ್ಕೆ ಗುರಿಯಾಗದಂತೆ ತಡೆಯುತ್ತದೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ:ಆದಿಕಾಂಡ: 6–9 ಅಧ್ಯಾಯಗಳು*

## ಪ್ರಶ್ನೆಗಳು

1) ನೋಹನ ಸ್ವಭಾವವನ್ನು ವಿವರಿಸಿ.

2) ದೇವರು ಯಾಕೆ ಜಲಪ್ರಳಯವನ್ನು ಉಂಟುಮಾಡಿದನು?

3) ಜಲಪ್ರಳಯವನ್ನು ವಿವರಿಸಿ.

4) ನೋಹನ ಜೀವನ ನಮ್ಮ ಮೇಲೆ ಯಾವರೀತಿಯ ಪ್ರಭಾವ ಬೀರುತ್ತದೆ?

# ಅಬ್ರಹಾಮ

ಅಬ್ರಹಾಮನು ನಂಬಿಕೆಯ ಮೂಲಪುರುಷನಾಗಿದ್ದಾನೆ. ಅವನು ದೇವರ ಸ್ನೇಹಿತ ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಅಬ್ರಹಾಮನು ಸಮರ್ಪಣೆಯುಳ್ಳಂತಹ ವ್ಯಕ್ತಿಯಾಗಿದ್ದನು. ದೇವರ ಮಾತಿಗೆ ನಂಬಿಕೆಯಿಂದ ವಿಧೇಯನಾಗುತ್ತಿದ್ದನು. ಎಲ್ಲಾದಕ್ಕಿಂತ ಹೆಚ್ಚಾಗಿ ದೇವರನ್ನು ಪ್ರೀತಿಸುವವನಾಗಿದ್ದನು. ಎಂತಹ ಪರಿಸ್ಥಿತಿಯಲ್ಲಿಯೂ ನಂಬಿಕೆಯನ್ನು ಕಳಕೊಳ್ಳದೆ ದೇವರ ಮೆಲೆ ನಿರೀಕ್ಷೆಯುಳ್ಳವನಾಗಿ ಜೀವಿಸುತ್ತಿದ್ದನು. 'ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವಂತೆ ಕರೆಯುವವನಾಗಿದ್ದಾನೆಂದು' ಅಬ್ರಹಾಮನು ದೇವರನ್ನು ನಂಬಿದನು. ಅವನ ನಂಬಿಕೆಯು ಅವನನ್ನು ನೀತಿವಂತನನ್ನಾಗಿಸಿತು.

ಅಬ್ರಹಾಮನು ಮೆಸಪೊಟೋಮಿಯದ ಊರ್ ಎಂಬ ಪಟ್ಟಣದನಾಗಿದ್ದನು. ಈತನು ಖಾರಾನಿನಲ್ಲಿ ವಾಸವಾಗಿದ್ದಾಗ ದೇವರು ಅಬ್ರಹಾಮನಿಗೆ 'ನೀನು ಸ್ವದೇಶವನ್ನು ಬಂಧುಬಳಗವನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು, ನಾನು ನಿನ್ನನ್ನು ದೊಡ್ಡ ಜಾನಾಂಗವಾಗುವಂತೆ ಮಾಡುವೆನು, ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು, ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೆ ಆಶೀರ್ವಾದವುಂಟಾಗುವದು' ಎಂದು ಹೇಳಿದನು. ಅಬ್ರಹಾಮನು ದೇವರಿಗೆ ವಿಧೇಯನಾಗಿ ತಾನು ಹೋಗಬೇಕಿದ್ದ ದೇಶವು ಯಾವುದೆಂದು ತಿಳಿಯದೆ ತನ್ನ ಹೆಂಡತಿ ಸಾರಾಳನ್ನು ಮತ್ತು ತನ್ನ ತಮ್ಮನ ಮಗನಾದ ಲೋಟನನ್ನು ಕರೆದುಕೊಂಡು ಹೋದನು. ಸಾರಾಳು ಬಂಜೆಯಾಗಿದ್ದರಿಂದ ಅವರಿಗೆ ಮಕ್ಕಳಿರಲಿಲ್ಲ. ದೇವರು ಅಬ್ರಹಾಮನನ್ನು ಕರೆದಾಗ ಅವನಿಗೆ 75 ವರ್ಷ ವಯಸ್ಸಾಗಿತ್ತು.



ಅಬ್ರಹಾಮನು ದೇವರು ಮಾಡಿದ್ದ ವಾಗ್ದಾನ ದೇಶವಾದ ಕಾನಾನಗೆ ಬಂದಾಗ ದೇವರು ಅವನನ್ನು ಆಶೀರ್ವದಿಸಿ ಅಭಿವೃದ್ಧಿ ಪಡಿಸಿದನು. ಆದರೆ ಅಬ್ರಹಾಮನಿಗೆ ಎಲ್ಲಾ ಇದ್ದರೂ ತನಗೆ ಒಬ್ಬ ಮಗನಿಲ್ಲವಲ್ಲ ಎಂಬ ಚಿಂತೆ ಅವನನ್ನು ಕಾಡುತ್ತಿತ್ತು. ದೇವರು ಅವನಿಗೆ ಆಕಾಶದಲ್ಲಿರುವ ನಕ್ಷತ್ರಗಳನ್ನು ತೋರಿಸಿ ನಿನ್ನ ಸಂತಾನವು ಅಷ್ಟಾಗಿ ಹೆಚ್ಚುವುದುಮತ್ತು ನಿನ್ನ ಸಂತತಿಯು ಅನ್ಯದೇಶದಲ್ಲಿ 400 ವರ್ಷಗಳ ಕಾಲ ದಾಸತ್ವದಲ್ಲಿರುವುದು, ನಾನು ಅವರನ್ನು ಬಿಡಿಸಿ ಈ ದೇಶಕ್ಕೆ ಬರಮಾಡುವೆನು ಎಂದು ಹೇಳಿದನು. (ಈ ವಾಗ್ದಾನವು ಯಾಕೋಬ, ಯೋಸೇಫ, ಮೋಶೆ ಮತ್ತು ಯೆಹೋಶುವರ ಕಾಲದಲ್ಲಿ ನೆರವೇರಿತು). ಆದರೆ ಅಬ್ರಹಾಮನು ಸಾರಾಳ ಮಾತನ್ನು ಕೇಳಿ ಹಾಗರಳನ್ನು ಕೂಡಿದಾಗ ಇಷ್ಮಾಯೇಲನ ಸಂತತಿ ಉಂಟಾಯಿತು.

ಅಬ್ರಹಾಮನು 100 ವರ್ಷದವನಾಗಿದ್ದಾಗ ದೇವರು ಅವನಿಗೆ ಇಸಾಕ ಎಂಬ ಗಂಡು ಮಗುವನ್ನು ಕೊಟ್ಟನು. ಅಬ್ರಹಾಮನು ಇಸಾಕನನ್ನು ಬಹಳವಾಗಿ ಪ್ರೀತಿಸಿದನು. ದೇವರು ಅಬ್ರಹಾಮನ ನಂಬಿಕೆಯನ್ನು ಪರಿಶೋಧಿಸಿದನು. ಅಬ್ರಹಾಮನಿಗೆ ಪ್ರಿಯನಾಗಿರುವ ಇಸಾಕನನ್ನು ಬಲಿಕೊಡುವಂತೆ ಹೇಳಿದನು. ಅಬ್ರಹಾಮನು ದೇವರು ಹೇಳಿದಂತೆ ಮೋರಿಯ ಬೆಟ್ಟಕ್ಕೆ ಹೋಗಿ ತನ್ನ ಮಗನನ್ನು ಬಲಿಕೊಡಲು ಕತ್ತಿಯನ್ನು ಚಾಚಿದಾಗ ದೇವದೂತನು ಅವನನ್ನು ತಡೆದು ದೇವರ ಮೇಲಿದ್ದ ಅಬ್ರಹಾಮನ ನಂಬಿಕೆ, ಪ್ರೀತಿ, ಗೌರವ, ಭಯಭಕ್ತಿಯನ್ನು ನೋಡಿ ದೇವರು ತಾನೇ ಒಂದು ಟಗರನ್ನು ತೋರಿಸಿ ಅದನ್ನು ಬಲಿಕೊಡಲು ತಿಳಿಸಿದನು.

ಅಬ್ರಹಾಮನು ದೇವರನ್ನು ಅಪಾರವಾಗಿ ಪ್ರೀತಿಸಿದ್ದರಿಂದ ಅವನು ತನಗಿರುವ ಒಬ್ಬನೇ ಮಗನನ್ನು ಬಲಿಕೊಡಲು ಮುಂದಾದನು. ದೇವರು ನಮ್ಮನ್ನು ಪ್ರೀತಿಸಿ ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ನಮಗಾಗಿ ಬಲಿಕೊಟ್ಟನು. ನಿಜವಾದ ಪ್ರೀತಿಯು ತ್ಯಾಗಮಾಡಲು ಮುಂದಾಗುತ್ತದೆ. ತ್ಯಾಗವಿಲ್ಲದೆ ಆಶೀರ್ವಾದವನ್ನು, ಗೌರವವನ್ನು ಹೊಂದಿಕೊಳ್ಳಲು ಸಾಧ್ಯವಿಲ್ಲ. ಪ್ರೀತಿ ಮತ್ತು ತ್ಯಾಗಗಳು ನಮ್ಮನ್ನು ದೇವರಿಗೆ ಹತ್ತಿರವಾಗುವಂತೆ ಮಾಡುತ್ತವೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಆದಿಕಾಂಡ: 11–25, ರೋಮಾ: 4, ಇಬ್ರಿಯ 11 ಅಧ್ಯಾಯಗಳು.*

## ಪ್ರಶ್ನೆಗಳು

1) ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಅಂಶಗಳೇನು?

2) ಅಬ್ರಹಾಮನು ಇಸಾಕನನ್ನು ಬಲಿಕೊಡುವ ಸಂದರ್ಭವನ್ನು ವಿವರಿಸಿ.

3) ಅಬ್ರಹಾಮನ ವ್ಯಕ್ತಿತ್ವವನ್ನು ವಿವರಿಸಿ.

4) ಅಬ್ರಹಾಮನು ನಮ್ಮ ಜೀವಿತದ ಮೇಲೆ ಹೇಗೆ ಪ್ರಭಾವ ಬೀರುತ್ತಾನೆ?

# ಇಸಾಕ

ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕನುಸಾರವಾಗಿ ಹುಟ್ಟಿದ ಮಗನೇ ಇಸಾಕನಾಗಿದ್ದಾನೆ. ದೇವರ ಯೋಜನೆಯು ನೆರವೇರುವುದರಲ್ಲಿ ಇಸಾಕನು ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತಾನೆ. ದೇವರು ಅಬ್ರಹಾಮನಿಗೆ ನಿನ್ನ ಮಗನಾದ ಇಸಾಕನನ್ನು ಬಲಿಕೊಡು ಎಂದು ಕೇಳಿದಾಗ ಚಿಕ್ಕಪ್ರಾಯವುಳ್ಳ ಇಸಾಕನು ತನ್ನನ್ನು ತಾನು ಬಲಿಯಾಗಿ ಕೊಡಲು ಸಂಪೂರ್ಣವಾಗಿ ಸಮರ್ಪಿಸಿದನು.



ಅಬ್ರಹಾಮನು ತೀರಿಹೋದ ನಂತರ ದೇವರ ಅನುಗ್ರಹವು ಇಸಾಕನ ಮೇಲೆ ಉಂಟಾಯಿತು. ಇಸಾಕನಿಗೆ ರೆಬೆಕ್ಕಳು ಎಂಬ ಹೆಂಡತಿ ಇದ್ದಳು. ಏಸಾವ ಮತ್ತು ಯಾಕೋಬ ಎಂಬ ಮಕ್ಕಳಿದ್ದರು. ಕಾನಾನ ದೇಶದಲ್ಲಿ ಬರಗಾಲ ಬಂದಾಗ ಇಸಾಕನು ಫಿಲಿಷ್ಟಿಯರ ಅರಸನಾದ ಅಭಿಮೆಲೇಕನ ಬಳಿಗೆ ಗೇರಾರಿಗೆ ಹೋದನು. ಅಲ್ಲಿ ದೇವರು ಇಸಾಕನಿಗೆ ದರ್ಶನ ಕೊಟ್ಟು– ನಿನ್ನ ತಂದೆಯಾದ ಅಬ್ರಹಾಮನು ನನ್ನ ಮಾತನ್ನು ಕೇಳಿ ನಾನು ಹೇಳಿದಂತೆ ಮಾಡಿ ಆಜ್ಞಾವಿಧಿಗಳನ್ನು ಕೈಗೊಂಡು ನಡೆದದ್ದರಿಂದ ನಾನು ಅವನಿಗೆ ಮಾಡಿದ ಪ್ರಮಾಣವನ್ನು ನೆರವೇರಿಸಿ ನಿನ್ನ ಸಂತತಿಯನ್ನು ಆಕಾಶದಲ್ಲಿರುವ ನಕ್ಷತ್ರಗಳಷ್ಟಾಗಿ ಮಾಡಿ ಅವರಿಗೆ ಈ ಪ್ರದೇಶಗಳನ್ನೆಲ್ಲಾ ಕೊಡುವೆನು, ಭೂಮಿಯ ಮೇಲಿನ ಎಲ್ಲಾ ಕುಲಗಳಿಗೆ ನಿನ್ನ ಸಂತತಿಯ ಮೂಲಕ ಆಶೀರ್ವಾದ ಉಂಟಾಗುವುದು– ಎಂದು ಹೇಳಿದನು.

ಇಸಾಕನು ಆ ಫಿಲಿಷ್ಟಿಯರ ದೇಶದಲ್ಲಿ ಬೀಜಬಿತ್ತಿ ಅದೇ ವರ್ಷದಲ್ಲಿ ನೂರರಷ್ಟು ಬೆಳೆಯನ್ನು ಪಡೆದುಕೊಂಡನು. ದೇವರು ಅವನನ್ನು ಅಭಿವೃದ್ಧಿ ಪಡಿಸಿದನು. ಅವನ ಐಶ್ವರ್ಯ ದಿನೆ ದಿನೆ ಹೆಚ್ಚಾಗಿದ್ದರಿಂದ ಬಹು ಧನವಂತನಾದನು. ಅವನಿಗೆ ದನಕುರಿಗಳ ಸಂಪತ್ತೂ ಅನೇಕ ದಾಸದಾಸಿಯರಿದ್ದರು. ಇದರಿಂದ ಫಿಲಿಷ್ಟಿಯರು ಹೊಟ್ಟೆಕಿಚ್ಚುಪಟ್ಟರು. ಹೀಗಿರಲಾಗಿ ಅಭಿಮೆಲೇಕನು ಇಸಾಕಾನಿಗೆ– ನೀನು ನಮಗಿಂತ ಬಲಿಷ್ಠನಾಗಿದ್ದೀ, ಆದದರಿಂದ ನಮ್ಮ ಬಳಿಯಿಂದ ಹೊರಟು ಹೋಗಬೇಕೆಂದು ಹೇಳಿದಾಗ ಇಸಾಕನು ಅಲ್ಲಿಂದ ಹೊರಟು ಗೆರಾರ್ ತಗ್ಗಿನ ಬಯಲಿನಲ್ಲಿ ಬಿಡಾರಮಾಡಿಕೊಂಡು ಅಲ್ಲಿ ವಾಸಿಸಿದನು. ಅಬ್ರಹಾಮನು ತೋಡಿಸಿದ್ದ ಬಾವಿಗಳನ್ನು ಅವನು ಸತ್ತ ಮೇಲೆ ಫಿಲಿಷ್ಟಿಯರು ಅವುಗಳನ್ನು ಮುಚ್ಚಿದ್ದರು. ಇಸಾಕನು ತಿರುಗಿ ಅವುಗಳನ್ನು ತೆಗೆಸಿ ತಂದೆ ಇಟ್ಟಿದ್ದ ಹೆಸರುಗಳನ್ನೇ ಇಟ್ಟನು. ಇಸಾಕನ ಸೇವಕರು ತಗ್ಗಿನಲ್ಲಿ ಅಗಿಯುವಾಗ ಗೆರಾರಿನ ದನಕಾಯುವವರು ಬಂದು ಆ ನೀರು ತಮ್ಮದು ಎಂದುಜಗಳವಾಡಿದ್ದರಿಂದ ಇಸಾಕನು ಆ ಬಾವಿಗೆ ಏಸೆಕ್ ಎಂದು ಹೆಸರಿಟ್ಟನು. ತರುವಾಯ ಅವನ ಜನರು ಬೇರೊಂದು ಬಾವಿಯನ್ನು ತೋಡಿದಾಗ ಆ ದೇಶದವರು ಅದಕ್ಕಾಗಿಯೂ ಜಗಳವಾಡಿದ್ದರಿಂದ ಅವನು ಅದಕ್ಕೆ ಸಿಟ್ನಾ ಎಂದು ಹೆಸರಿಟ್ಟನು. ಅವನು ಅಲ್ಲಿಂದ ಹೊರಟು ಮತ್ತೊಂದು ಬಾವಿಯನ್ನು ಅಗಿಸಿದಾಗ ಅದರ ವಿಷಯದಲ್ಲಿ ಯಾರೂ ಜಗಳವಾಡದೆ ಹೋದದರಿಂದ ಅವನು– ದೇವರು ನಮಗಾಗಿ ಸ್ಥಳವನ್ನು ಸಿದ್ಧಮಾಡಿದ್ದಾನೆ, ಆದದರಿಂದ ನಾವು ಅಭಿವೃದ್ಧಿಯಾಗುವೆವು ಎಂದು ಹೇಳಿ ಅದಕ್ಕೆ ರೆಹೊಬೋತ್ ಎಂದು ಹೆಸರಿಟ್ಟನು.

ಇಸಾಕನು ಅಲ್ಲಿಂದ ಹೊರಟು ಬೇರ್ಷೆಬಕ್ಕೆ ಬಂದಾಗ ದೇವರು ಆ ರಾತ್ರಿಯಲ್ಲಿ ಕಾಣಿಸಿಕೊಂಡು– ನಾನು ನಿನ್ನ ಬಳಿಯಲ್ಲಿದ್ದೇನೆ, ಅಬ್ರಹಾಮನ ನಿಮಿತ್ತ ನಿಮ್ಮನ್ನು ಆಶೀರ್ವಧಿಸುವೆನು ಮತ್ತು ನಿನ್ನ ಸಂತತಿಯನ್ನು ಹೆಚ್ಚಿಸುವೆನು ಎಂದು ಹೇಳಿದಾಗ ಅವನು ಯಜ್ಞವೇದಿಯನ್ನು ಕಟ್ಟಿಸಿ ಯೆಹೋವ ಹೆಸರನ್ನು ಹೇಳಿಕೊಂಡು ಆರಾಧಿಸಿ ಅಲ್ಲಿ ತನ್ನ ಗುಢಾರವನ್ನು ಹಾಕಿ ವಾಸಮಾಡಿದನು.

ದೇವಾರು ವಾಗ್ದನಗಳಿಗೆ ನಂಬಿಗಸ್ಥನಾಗಿದ್ದಾನೆ. ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನಗಳನ್ನು ಇಸಾಕನ ಜೀವಿತದಲ್ಲಿ ನೆರವೇರಿಸಿದನು. ದೇವರು ಅಬ್ರಹಾಮನ ನಿಮಿತ್ತ ಇಸಾಕನನ್ನು ಆಶೀರ್ವಧಿಸಿ ಅಭಿವೃದ್ಧಿಪಡಿಸಿದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಆದಿಕಾಂಡ: 22, 24, 25–27 ಅಧ್ಯಾಯಗಳು*

## ಪ್ರಶ್ನೆಗಳು

1) ದೇವರು ಇಸಾಕನಿಗೆ ಮಾಡಿದ ವಾಗ್ದಾನದ ಅಂಶಗಳೇನು?

2) ಇಸಾಕನು ತೋಡಿಸಿದ ಬಾವಿಗಳ ಹೆಸರುಗಳನ್ನು ತಿಳಿಸಿ.

3) ಇಸಾಕನ ವ್ಯಕ್ತಿತ್ವವನ್ನು ವಿವರಿಸಿ.

# ಯಾಕೋಬ

ದೇವರು ತನ್ನ ಸಂಕಲ್ಪವನ್ನು ನೆರವೇರಿಸದ ಹೊರತು ಹಾಗೆ ಬಿಡುವುದಿಲ್ಲ ಎನ್ನುವುದಕ್ಕೆ ಯಾಕೋಬನು ನಮಗೆ ಒಂದು ಸ್ಪಷ್ಟವಾದ ಮಾದರಿಯಾಗಿದ್ದಾನೆ(ಉದಾಹರಣೆಯಗಿದ್ದಾನೆ). ದೇವರು ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವಧಿಸುವುದಕ್ಕಾಗಿ ತಾನು ಆರಿಸಿಕೊಂಡ ಇಸ್ರಾಯೇಲ್ ಜನಾಂಗವು ಯಾಕೋಬನಿಂದ ಬಂದದ್ದಾಗಿದೆ. ಯಾಕೋಬನು ದೇವರ ಸಂಗಡ ಹೋರಾಡಿ ಗೆದ್ದು ಇಸ್ರಾಯೇಲ್ ಎಂಬ ಹೆಸರನ್ನು ಪಡೆದವನಗಿದ್ದಾನೆ.

ಇಸಾಕನ ಹೆಂಡತಿಯಾದ ರೆಬೆಕ್ಕಳು ಗರ್ಭಿಣಿಯಾಗಿದ್ದಾಗ ಆಕೆಯ ಗರ್ಭದಲ್ಲಿ ಶಿಶುಗಳು ಒಂದಕ್ಕೊಂದು ನೂಕಿಕೊಂಡವು. ರೆಬೆಕ್ಕಳು ಅದರ ಕುರಿತು ದೇವರ ಸನ್ನಿಧಿಯಲ್ಲಿ ವಿಚಾರಿಸಿದಳು. ಆಗ ದೇವರು ಹಿರಿಯವನು ಕಿರಿಯವನ ಸೇವೆ ಮಾಡುವವನು ಎಂದು ತಿಳಿಸಿದನು. ದೇವರ ಕರೆಯುವಿಕೆಯು ನಮ್ಮ ಕ್ರಿಯೆಗಳಿಗುಣವಾಗಿ ಇರುವುದಿಲ್ಲ. ಬದಲಾಗಿ ತಾಯಿ ಗರ್ಭದಲ್ಲಿರುವಾಗಲೇ, ಭೂಮ್ಯಾಕಾಶಗಳನ್ನು ಉಂಟುಮಾಡುವುದಕ್ಕಿಂತ ಮುಂಚೆಯೇ ದೇವರು ಆರಿಸಿಕೊಂಡಿರುತ್ತಾನೆ.



ಒಂದು ದಿನ ಯಾಕೋಬನು ಅಡುಗೆ ಮಾಡುತ್ತಿರುವಾಗ ಅವನ ಅಣ್ಣನಾದ ಏಸಾವನು ಕಾಡಿನಿಂದ ದಣಿದು ಬಂದು ಅವನಲ್ಲಿ ಆಹಾರವನ್ನು ಕೇಳಿದನು. ಆಗ ಯಾಕೋಬನು ಈ ಸಂದರ್ಭವನ್ನು ಜಾಣತನದಿಂದ ಉಪಯೋಗಿಸಿಕೊಂಡು ಏಸಾವನ ಚೊಚ್ಚಲುತನದ ಹಕ್ಕನ್ನು ನನಗೆ ಮಾರಿದರೆ ನಾನು ಆಹಾರವನ್ನು ನಿನಗೆ ಕೊಡುವೆನು ಎಂದು ಹೇಳಿ ಆಹಾರವನ್ನು ಕೊಟ್ಟು ಅವನ ಚೊಚ್ಚುಲುತನದ ಹಕ್ಕನ್ನು ವಂಚನೆಯಿಂದ ಪಡೆದುಕೊಂಡನು.

ಇಸಾಕನಿಗೆ ಮುಪ್ಪಿನಿಂದ ಕಣ್ಣು ಕಾಣುತ್ತಿರಲಿಲ್ಲ. ಇಸಾಕನಿಗೆ ಏಸಾವನನ್ನು ಕಂಡರೆ ಬಹಳ ಪ್ರೀತಿ ಇತ್ತು. ಏಸಾವನು ಬೇಟೆಗಾರನಾಗಿದ್ದನು. ಯಾಕೋಬನು ಸಾಧು ಮನುಷ್ಯನಾಗಿದ್ದನು. ಇಸಾಕನು ಏಸಾವನನ್ನು ಆಶೀರ್ವದಿಸುವುದಕ್ಕಾಗಿ ಅವನನ್ನು ಕರೆದು ತನಗೆ ಸಾವು ಬರುವುದಕ್ಕಿಂತ ಮುಂಚೆ ಬೇಟೆಯಾಡಿ ಮಾಂಸದಿಂದ ತನಗೆ ಇಷ್ಟವಾದ ರುಚಿ ಪದಾರ್ಥವನ್ನು ಊಟಕ್ಕೆ ಮಾಡಲು ತಿಳಿಸಿದನು. ಏಸಾವನು ಕಾಡಿಗೆ ಹೋದಾಗ ಯಕೋಬನು ತನ್ನ ತಾಯಿಯ ಮಾತಿನಂತೆ ಆ ಆಶೀರ್ವಾದವನ್ನು ತಾನು ಹೊಂದಿಕೊಳ್ಳುವುದಕ್ಕಾಗಿ ತನ್ನ ತಂದೆಗೆ ಇಷ್ಟವಾದ ಆಹಾರವನ್ನು ಮಾಡಿದನು. ಏಸಾವನು ಮೈತುಂಬ ರೋಮವುಳ್ಳವನಾಗಿದ್ದನು. ಆಗ ಅವನ ತಾಯಿಯು ಯಾಕೋಬನಿಗೆ ಏಸಾವನ ವಸ್ತ್ರಗಳನ್ನು ಹಾಕಿ ಆಡಿನ ಚರ್ಮವನ್ನು ಅವನ ಕೊರಳಿಗೆ ಮತ್ತು ಕೈಗೆ ಸುತ್ತಿ ಕಳುಹಿಸಿದಳು. ಇಸಾಕನು ಯಾಕೋಬನನ್ನು ಏಸಾವನೆಂದು ತಿಳಿದು ಆಶೀರ್ವದಿಸಿದನು. ನಂತರ ಕಾಡಿನಿಂದ ಬಂದ ಏಸಾವನಿಗೆ ಆಶೀರ್ವಾದ ಸಿಗಲಿಲ್ಲ.

ಏಸಾವನು ಯಾಕೋಬನನ್ನು ಕೊಲ್ಲಲು ನಿರ್ಧರಿಸಿದಾಗ ಯಾಕೋಬನು ತಾಯಿಯ ಮಾತಿನಂತೆ ಪದ್ದನ್ ಆರಾಮಿನಲ್ಲಿರುವ ತನ್ನ ತಾಯಿಯ ಅಣ್ಣನಾದ ಲಾಬಾನನ ಬಳಿಗೆ ಹೋದನು. ಯಾಕೋಬನು ಲಾಬಾನನ ಮಗಳಾದ ರಾಹೇಲಳನ್ನು ಬಹಳವಾಗಿ ಪ್ರೀತಿಸಿದನು. ಅವಳಿಗಾಗಿ ಲಾಬಾನ ಬಳಿಯಲ್ಲಿ 7 ವರ್ಷ ಕೆಲಸಮಾಡಿದನು. ಆದರೆ ಮೋಸದಿಂದ ಲಾಬಾನು ತನ್ನ ಹಿರಿಯ ಮಗಳಾದ ಲೇಯಳನ್ನು ಮದುವೆ ಮಾಡಿಸಿದನು. ಯಾಕೋಬನು ರಾಹೇಲಳಿಗಾಗಿ ಮತ್ತೆ ತಿರುಗಿ 7 ವರ್ಷ ಕೆಲಸಮಾಡಿದನು. ಯಾಕೋಬನಿಗೆ 12 ಜನ ಮಕ್ಕಳಾದರು. ಇವರಿಂದ ಇಸ್ರಾಯೇಲಿನ 12 ಕುಲಗಳು ಉಂಟಾದವು. ಇವರು ಕಾನಾನ್ ದೇಶದಲ್ಲಿ ವಾಸಿಸುತ್ತಿದ್ದರು.

ಕಾನಾನ್ ದೇಶದಲ್ಲಿ ಬರಗಾಲ ಉಂಟಾಯಿತು. ಐಗುಪ್ತದಲ್ಲಿ ಮಾತ್ರ ಆಹಾರ ದೊರಕುತಿತ್ತು. ಬೇರೆ ಎಲ್ಲೂ ಸಿಗುತ್ತಿರಲಿಲ್ಲ. ಯಾಕೋಬನ ಮಗನಾದ ಯೋಸೆಫನು ಆ ದೇಶದ ಪ್ರಧಾನಮಂತ್ರಿಯಾಗಿದ್ದನು. ಯೋಸೇಫನು ತನ್ನ ತಂದೆ, ಅಣ್ಣ ತಮ್ಮಂದಿರನ್ನು ಐಗುಪ್ತ ದೇಶಕ್ಕೆ ಕರೆಯಿಸಿಕೊಂಡನು. ಇಸ್ರಾಯೇಲರು ಐಗುಪ್ತದಲ್ಲಿ ವಾಸಿಸುತ್ತಿದ್ದರು. (ದೇವರು ಅಬ್ರಹಾಮನಿಗೆ ನಿನ್ನ ಸಂತತಿಯು ಬೇರೆ ದೇಶದಲ್ಲಿ ದಾಸರಾಗಿರುವರು ಎಂದು ಹೇಳಿದ ಮಾತು ಇಲ್ಲಿ ನೆರವೇರುವುದನ್ನು ಕಾಣುತ್ತೇವೆ).

ಯಾಕೋಬನು ದೇವರಿಂದ ಒಂದು ವಿಷೇಶವಾದ ಉದ್ದೇಶಕ್ಕಾಗಿ ಆರಿಸಲ್ಪಟ್ಟಿದ್ದನು. ಅವನು ತನ್ನ ಅಣ್ಣನಿಗೆ ಎರಡು ಸಾರಿ ಮೋಸ ಮಾಡಿದರೂ ಅವನು ತನ್ನನ್ನು ದೇವರ ಮುಂದೆ ತಗ್ಗಿಸಿಕೊಂಡದ್ದರಿಂದ ದೇವರು ಅವನನ್ನು ಆಶೀರ್ವದಿಸಿದನು. ಅವನಿಂದ ದೊಡ್ಡ ಜನಾಂಗ ಉಂಟಾಯಿತು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಆದಿಕಾಂಡ: 25–49 ಅಧ್ಯಾಯಗಳು.*

## ಪ್ರಶ್ನೆಗಳು

1) ಯಾಕೋಬನು ಏಸಾವನನ್ನು ವಂಚಿಸಿದ ಸಂದರ್ಭಗಳನ್ನು ವಿವರಿಸಿರಿ.

2) ಯಾಕೋಬನ 12 ಮಕ್ಕಳ ಹೆಸರುಗಳನ್ನು ತಿಳಿಸಿರಿ.

3) ಯಾಕೋಬನು ಐಗುಪ್ತ ದೇಶಕ್ಕೆ ಯಾಕೆ ಹೋದನು?

4) ಯಾಕೋಬನ ವ್ಯಕ್ತಿತ್ವವು ನಮ್ಮ ಮೇಲೆ ಹೇಗೆ ಪ್ರಭಾವ ಬೀರುತ್ತದೆ?

# ಯೋಸೇಫ

ಯೋಸೇಫನು ತನ್ನ ಜನರಾದ ಇಸ್ರಾಯೇಲರನ್ನು ರಕ್ಷಿಸಲು ದೇವರಿಂದ ಆರಿಸಲ್ಪಟ್ಟಂತಹ ಸಾಧನವಾಗಿದ್ದಾನೆ. ಈತನು ಸ್ವಂತ ಜನರಿಂದ ತಿರಸ್ಕರಿಸಲ್ಪಟ್ಟನು, ಬೇರೆ ದೇಶಕ್ಕೆ ಮಾರಲ್ಪಟ್ಟನು, ಸೆರೆಮನೆಗೆ ಹಾಕಲ್ಪಟ್ಟನು, ಕೊನೆಗೆ ದೇವರ ಹಸ್ತದಿಂದ ಐಗುಪ್ತ ದೇಶಕ್ಕೆ ಪ್ರಧಾನಮಂತ್ರಿಯಾದನು. ಯೋಸೇಫನು ಚಿಕ್ಕಂದಿನಿಂದಲೂ ದೇವರಲ್ಲಿ ಭಯಭಕ್ತಿಯುಳ್ಳವನಾಗಿದ್ದನು. ಕೆಟ್ಟದ್ದನ್ನು ಖಂಡಿಸುತ್ತಾ ಪರಿಶುದ್ಧನಾಗಿ ಜೀವಿಸಿದನು.

ಯೋಸೇಫನು ರಾಹೇಲಳಲ್ಲಿ ಯಾಕೋಬನಿಗೆ ಹುಟ್ಟಿದ ಮಗನಾಗಿದ್ದನು. ಇವನನ್ನು ಯಾಕೋಬನು ಬಹಳವಾಗಿ ಪ್ರೀತಿ ಮಡುತ್ತಿದ್ದನು. ಯೋಸೇಫನು ಅವನ ಅಣ್ಣಂದಿರು ಮಾಡುವ ಕೆಟ್ಟಕಾರ್ಯಗಳನ್ನು ತಂದೆಗೆ ತಿಳಿಸುತ್ತಿದ್ದನು. ಹಿಗಾಗಿ ಅವರು ಇವನನ್ನು ದ್ವೇಷಿಸುತ್ತಿದ್ದರು. ದೇವರು ಯೋಸೇಫನಿಗೆ ಕನಸಿನ ಮೂಲಕ ತನ್ನ ಯೋಜನೆಯನ್ನು ಪ್ರಕಟಿಸಿದನು. ಆ ಕನಸ್ಸುಗಳನ್ನು ಅವನ ಅಣ್ಣಂದಿರಿಗೆ ತಿಳಿಸಿದಾಗ ಅವರು ಇನ್ನೂ ಹೆಚ್ಚಾಗಿ ದ್ವೇಷಿಸಿದರು.

ಒಂದು ದಿನ ಕುರಿಗಳನ್ನು ಕಾಯಲು ಹೋದ ಅಣ್ಣಂದಿರ ಯೋಗಕ್ಷೇಮವನ್ನು ವಿಚಾರಿಸಲು ತಂದೆಯು ಯೋಸೇಫನನ್ನು ಕಳುಹಿಸಿದಾಗ ಅವನು ಬರುವುದನ್ನು ಕಂಡ ಅವನ ಅಣ್ಣಂದಿರು ಅವನನ್ನು ಕೊಲ್ಲಲು ತೀರ್ಮಾನಿಸಿದರು. ಅವನನ್ನು ಹಿಡಿದು ಒಂದು ಗುಂಡಿಯಲ್ಲಿ ಹಾಕಿದರು, ನಂತರ ಅವನನ್ನು ಐಗುಪ್ತ ದೇಶದವರಿಗೆ ಮಾರಿದರು. ಯೋಸೇಫನನ್ನು ಕಾಡಿನಲ್ಲಿ ದೃಷ್ಟಮೃಗವು ತಿಂದುಹಾಕಿದೆ ಎಂದು ತಮ್ಮ ತಂದೆಗೆ ತಿಳಿಸಿದರು.

ಯೋಸೇಫನು ಐಗುಪ್ತದ ಫರೋಹನನ ಮೈಗಾವಲಿನವರ ದಳವಾಯಿಯಾದ ಫೋಟಿಫರನ ಮನೆಯಲ್ಲಿ ಗುಲಾಮನಾದನು. ದೇವರು ಅವನ ಸಂಗಡ ಇದ್ದದ್ದರಿಂದ ಫೋಟಿಫರನು ಅವನನ್ನು ಸ್ವಂತ ಸೇವಕನನ್ನಾಗಿ ನೇಮಿಸಿ ತನ್ನ ಎಲ್ಲಾ ಆಸ್ತಿಯನ್ನು ಅವನ ವಶಕ್ಕೆ ಕೊಟ್ಟನು. ಫೋಟಿಫರನ ಹೆಂಡತಿಯು ಅವನ ಮೇಲೆ ಕಣ್ಣುಹಾಕಿ ಅವನನ್ನು ಸಂಗಮಕ್ಕೆ ಕರೆದಾಗ ಅವನು ದೇವರಿಗೆ ಭಯಪಟ್ಟು ಅಲ್ಲಿಂದ ಓಡಿಹೋದನು. ಆದರೆ ಅವಳು ಯೋಸೇಫನ ಮೇಲೆ ಅಪರಾಧವನ್ನು ಹೋರಿಸಿ ಅವನನ್ನು ಸೆರೆಮನೆಗೆ ಹಾಕಿಸಿದಳು.



ಯೋಸೇಫನು ದೇವರ ದಯೆಯಿಂದ ಕನಸುಗಳ ಅರ್ಥವನ್ನು ಹೇಳುವವನಾಗಿದ್ದನು. ಫರೋಹನನು ಸೆರೆಗೆ ಹಾಕಿಸಿದ್ದ ಪಾನದಾಯಕನಿಗೂ ಮತ್ತು ದಳವಾಯಿಗೂ ಒಂದೇ ರಾತ್ರಿಯಲ್ಲಿ ಕನಸುಗಳು ಬಿದ್ದವು. ಯೋಸೇಫನು ಅವುಗಳ ಅರ್ಥವನ್ನು ಹೇಳಿದನು. ಅವನು ಹೇಳಿದಂತೆ ಪಾನದಾಯಕನು ತಿರುಗಿ ಉದ್ಯೋಗಕ್ಕೆ ಸೇರಿಕೊಂಡನು ಮತ್ತು ದಳವಾಯಿಯು ಗಲ್ಲಿಗೇರಿಸಲ್ಪಟ್ಟನು.

ಒಂದು ದಿನ ಫರೋಹನನಿಗೆ ಕನಸುಗಳು ಬಿದ್ದವು. ಅವುಗಳ ಅರ್ಥವನ್ನು ಯಾರಿಂದಲೂ ಹೇಳಲು ಆಗಲಿಲ್ಲ. ಯೋಸೇಫನು ಆ ಕನಸುಗಳ ಅರ್ಥವನ್ನು ತಿಳಿಸಿದನು. ಏಳು ವರ್ಷ ಸಂಮೃದ್ಧಿಕಾಲ ಮತ್ತು ಏಳು ವರ್ಷ ಬೀಕರ ಬರಗಾಲ ಬರುತ್ತವೆ ಎಂದು ತಿಳಿಸಿದನು. ಆಗ ಫರೋಹನನು ಅವನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಿದನು. ಸಮೃದ್ಧಿಯ ಕಾಲದಲ್ಲಿ ಭೂಮಿಯು ಹೇರಳವಾಗಿ ಫಲಕೊಟ್ಟಿತು. ಆಗ ಯೋಸೇಫನು ಬೆಳೆಯನ್ನು ಕೂಡಿಸಿಟ್ಟನು. ನಂತರ ಬರಗಾಲ ಉಂಟಾಯಿತು. ಎಲ್ಲಿಯೂ ಆಹಾರ ಸಿಗುತ್ತಿರಲಿಲ್ಲ. ಯಾಕೋಬನಿದ್ದ ಕಾನಾನ್ ದೇಶಕ್ಕೂ ಬರಗಾಲ ಬಂದಿತ್ತು. ಯಾಕೋಬನು ಆಹಾರವನ್ನು ಕೊಂಡುಕೊಳ್ಳುವುದಕ್ಕಾಗಿ ತನ್ನ ಮಕ್ಕಳನ್ನು ಕಳುಹಿಸಿದನು. ಯೋಸೇಫನು ಅವರು ತನ್ನ ಅಣ್ಣಂದಿರೆಂದು ಗುರುತಿಸಿ ತಾನು ಅವರ ತಮ್ಮನೆಂದು ತಿಳಿಸಲಿಲ್ಲ. ಅವರಿಗೆ ಬೇಕಾದಷ್ಟು ಆಹಾರವನ್ನು ಕೊಟ್ಟು ಕಳುಹಿಸಿದನು. ಅವರು ತಿರುಗಿ ಎರಡನೆ ಸಾರಿ ಬಂದಾಗ ತಾನು ಅವರ ತಮ್ಮನೆಂದು ಹೇಳಿದನು. ಅವನು ತನ್ನ ತಂದೆ ಮತ್ತು ಸಹೋದರರನ್ನು ಐಗುಪ್ತಕ್ಕೆ ಕರೆಕಳುಹಿಸಿದನು. ಅವರೆಲ್ಲರೂ ಐಗುಪ್ತದಲ್ಲಿ ವಾಸಿಸಿದರು.

ಯೋಸೇಫನು ತನಗೆ ಬಂದ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡನು. ಆ ಕಷ್ಟಗಳೆ ಅವನನ್ನು ಎತ್ತರಕ್ಕೆ ಬೆಳೆಯುವಂತೆ ಮಾಡಿದವು. ಅವನು ತನ್ನ ಸಹೋದರರು ಮಾಡಿದ ಎಲ್ಲಾ ದ್ರೋಹಗಳನ್ನು ಕ್ಷಮಿಸಿ ಪ್ರೀತಿಸಿದನು. ದೀನರ ಸಂಗಡ ದೇವರು ಇರುತ್ತಾನೆ, ಇದಕ್ಕೆ ಯೋಸೇಫನೇ ಸಾಕ್ಷಿಯಾಗಿದ್ದಾನೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಆದಿಕಾಂಡ: 37–50 ಅಧ್ಯಾಯಗಳು.*

## ಪ್ರಶ್ನೆಗಳು

1) ಯೋಸೇಫನಿಗೆ ಬಿದ್ದ ಕನಸುಗಳನ್ನು ತಿಳಿಸಿರಿ.


2) ಯೋಸೇಫನು ಮಾರಲ್ಪಟ್ಟ ರೀತಿಯನ್ನು ವಿವರಿಸಿರಿ.

3) ಯೋಸೇಫನು ಯಾಕೆ ಸೆರೆಮನೆಗೆ ಹಾಕಲ್ಪಟ್ಟನು?

4) ಯೋಸೇಫನು ಫರೋಹನಿಗೆ ಬಿದ್ದ ಕನಸುಗಳನ್ನು ಹೇಗೆ ವಿವರಿಸಿದನು?

5) ಯೋಸೇಫನ ಜೀವಿತದಿಂದ ನಾವು ಕಲಿಯಬಹುದಾದ ಅಂಶಗಳೇನು?

# ಮೋಶೆ



ಇಸ್ರಾಯೇಲರು ಐಗುಪ್ತದಲ್ಲಿ ಬಹಳವಾಗಿ ವೃದ್ಧಿಯಾಗುವಂತೆ ದೇವರು ಮಾಡಿದನು. ಯೋಸೇಫನ ಮರಣದ ನಂತರ ಅವನನ್ನು ಅರಿಯದ ಬೇರೊಬ್ಬ ಫರೋಹನನು ಮತ್ತು ಆ ದೇಶದವರು ಹೆದರಿ ಇಸ್ರಾಯೇಲರನ್ನು ಕಠೋರವಾಗಿ ದುಡಿಸಿಕೊಂಡರು. ಫರೋಹನನು ಇಸ್ರಾಯೇಲರಿಗೆ ತಮ್ಮ ಗಂಡು ಮಕ್ಕಳನ್ನು ನೈಲ್ ನದಿಗೆ ಹಾಕಬೇಕು ಮತ್ತು ಹೆಣ್ಣು ಮಕ್ಕಳನ್ನು ಉಳಿಸಬೇಕು ಎಂದು ಆಜ್ಞಾಪಿಸಿದನು. ಇದೇ ಸಮಯದಲ್ಲಿ ಮೋಶೆ ಹುಟ್ಟಿದನು. ಮೋಶೆಯ ತಾಯಿಯು ಆ ಕೂಸನ್ನು ಮೂರು ತಿಂಗಳು ಮನೆಯಲ್ಲಿ ಮುಚ್ಚಿಟ್ಟು ನಂತರ ಒಂದು ಪೆಟ್ಟಿಗೆಯೊಳಗೆ ಇಟ್ಟು ನೈಲ್ ನದಿಗೆ ಬಿಟ್ಟಳು. ಅಷ್ಟರಲ್ಲಿ ಫರೋಹನನ ಕುಮಾರ್ತೆಯು ಸ್ನಾನಕ್ಕಾಗಿ ನದಿಗೆ ಬಂದಳು. ಆಕೆಯು ಆ ಕೂಸನ್ನು ತೆಗೆದುಕೊಂಡು ಹೋಗಿ ತನ್ನ ಮಗನಾಗಿ ಬೆಳೆಸಿದಳು.

ಮೋಶೆ ದೊಡ್ಡವನಾದಾಗ ಒಂದು ದಿನ ಸ್ವಜನರ(ಇಬ್ರಿಯರು) ಬಳಿಗೆ ಹೋದನು. ಒಬ್ಬ ಐಗುಪ್ತನು ಇಬ್ರಿಯರಲ್ಲಿನ ಒಬ್ಬನನ್ನು ಹೊಡೆಯುತ್ತಿದ್ದದ್ದನ್ನು ನೋಡಿ ಮೋಶೆ ಐಗುಪ್ತದವನನ್ನು ಕೊಂದುಹಾಕಿದನು. ಈ ವಿಷಯ ಫರೋಹನನಿಗೆ ತಿಳಿದು ಅವನನ್ನು ಕೊಲ್ಲಬೇಕೆಂದಿರುವಾಗ ಮೋಶೆಯು ಮಿದ್ಯಾನ್ ದೇಶಕ್ಕೆ ಓಡಿಹೋದನು. ಅಲ್ಲಿ ಇತ್ರೋನನ ಬಳಿಯಲ್ಲಿದ್ದು ಅವನ ಮಗಳಾದ ಚಿಪ್ಪೋರಳನ್ನು ಮದುವೆಮಾಡಿಕೊಂಡು 40 ವರ್ಷ ಜೀವಿಸಿದನು.

ಮೋಶೆಯು ಹೋರೇಬ್ ಬೆಟ್ಟದ (ದೇವರ ಬೆಟ್ಟ) ಹತ್ತಿರ ಕುರಿಗಳನ್ನು ಮೇಯಿಸುತ್ತಿರುವಾಗ ದೇವರು ಉರಿಯುವ ಪೊದೆಯೊಳಗಿಂದ ಮಾತನಾಡಿದನು. ಐಗುಪ್ತದಲ್ಲಿ ಇಸ್ರಾಯೇಲರು ಬಿಟ್ಟಿ ಕೆಲಸದಿಂದ ಗೋಳಾಡುತ್ತಿರುವುದನ್ನು ತಪ್ಪಿಸುವುದಕ್ಕಾಗಿ ಮತ್ತು ಅವರನ್ನು ಬಿಡಿಸಿ ವಾಗ್ದಾನ್ ಮಾಡಿದ ಕಾನಾನ್ ದೇಶಕ್ಕೆನಡೆಸುವಂತೆ ದೇವರು ಮೋಶೆಗೆ ಹೇಳಿದನು. ಮೋಶೆಯು ತಾನು ಈ ಕಾರ್ಯಕ್ಕೆ ಯೋಗ್ಯನಲ್ಲ ಎಂದು ಅನೇಕ ನೆವಗಳನ್ನು ಹೇಳಿದರೂ ದೇವರು ಅವನನ್ನು ಬಲಪಡಿಸಿ ನಡೆಸಿದನು.

ಮೋಶೆಯು ಫರೋಹನನಿಗೆ ತನ್ನ ಜನರನ್ನು ಬಿಡುವಂತೆ ಕೇಳಿದರೂ ಫರೋಹನನು ಕಳುಹಿಸಲು ಒಪ್ಪದೆ ತನ್ನ ಹೃದಯವನ್ನು ಕಠಿಣಮಾಡಿಕೊಂಡನು. ಆಗ ದೇವರ ಬಲದಿಂದ ಅನೇಕ ಉಪದ್ರವಗಳ ಮೂಲಕ ಐಗುಪ್ತರನ್ನು ಬಾಧಿಸಿದನು. ಕೊನೆಗೆ ಫರೋಹನನು ಇಸ್ರಾಯೇಲರ ಬಿಡುಗಡೆಗೆ ಒಪ್ಪಿದನು. ಇಸ್ರಾಯೇಲರು ಮೋಶೆಯ ನಾಯಕತ್ವದಲ್ಲಿ ಐಗುಪ್ತದಿಂದ ಬಿಡುಗಡೆ ಹೊಂದಿ ಹೊರಬಂದರು. ಅವರು ಕೆಂಪು ಸಮುದ್ರದ ಬಳಿಗೆ ಬಂದಾಗ ಮತ್ತೆ ಫರೋಹನನ ಸೈನ್ಯವು ಅವರನ್ನು ಮುತ್ತಿಕೊಂಡಿತು. ಆಗ ದೇವರ ಮಾತಿನಂತೆ ಮೋಶೆಯು ಸಮುದ್ರಕ್ಕೆ ಕೋಲಿನಿಂದ ಹೊಡೆದನು. ಕೆಂಪುಸಮುದ್ರವು ವಿಭಾಗವಾಗಿ ಇಸ್ರಾಯೇಲರು ಅದರ ಮಧ್ಯದಲ್ಲಿ ನಡೆದು ಆಚೆ ದಡವನ್ನು ಸೇರಿದರು. ಐಗುಪ್ತರು ಸಹ ಸಮುದ್ರದಲ್ಲಿ ನಡೆದುಕೊಂಡು ಹೋಗಲು ಪ್ರಯತ್ನಿಸಿದಾಗ ದೇವರು ಅವರನ್ನು ನಾಶಮಾಡಿದನು.

ದೇವರು ಪರಲೋಕದ ಮನ್ನವನ್ನು ಸುರಿಸಿ ಮತ್ತು ಬಂಡೆಯಿಂದ ನೀರನ್ನು ಹರಿಸಿ ಅವರ ಹಸಿವು ಮತ್ತು ದಾಹವನ್ನು ನೀಗಿಸಿದನು.

ಮೋಶೆಯು ಸಿನಾಯ್ ಬೆಟ್ಟವನ್ನು ಹತ್ತಿ 40 ದಿನ ಏನನ್ನೂ ತಿನ್ನದೆ ಕುಡಿಯದೆ ದೇವರ ಸನ್ನಿಧಿಯಲ್ಲಿ ಇದ್ದನು. ಆ ಸಮಯದಲ್ಲಿ ದೇವರು ಅವನೊಂದಿಗೆ ಮಾತನಾಡಿ ದಶಾಜ್ಞೆಗಳುಳ್ಳ ಎರಡು ಕಲ್ಲಿನ ಹಲಗೆಗಳನ್ನು ಕೊಟ್ಟನು. ಮೋಶೆ ಅವುಗಳನ್ನು ಇಸ್ರಾಯೇಲರಿಗೆ ತಿಳಿಸಿದನು. ದೇವರ ಮಾರ್ಗದರ್ಶನದಂತೆ ದೇವದರ್ಶನ ಗುಡಾರವನ್ನು ಸ್ಥಾಪಿಸಿದನು.

ಮನುಷ್ಯರೊಳಗೆ ಒಬ್ಬನು ತನ್ನ ಸ್ನೇಹಿತನೊಡನೆ ಹೇಗೆ ಮಾತನಾಡುವನೋ ಹಾಗೆಯೇ ದೇವರು ಮೋಶೆಯ ಸಂಗಡ ಮಾತನಾಡುತ್ತಿದ್ದನು. ದೇವರ ಮಾರ್ಗದರ್ಶನದಂತೆ ಮೋಶೆಯು 40 ವರ್ಷಗಳಕಾಲ ಇಸ್ರಾಯೇಲರನ್ನು ನಡೆಸಿದನು.

ಮೋಶೆಯು ಸಾಯುವಾಗ ಅವನ ಕಣ್ಣುಗಳು ಮೊಬ್ಬಾಗಿರಲಿಲ್ಲ, ಅವನ ಜೀವಕಳೆ ಕುಂದಿರಲಿಲ್ಲ, ಕಾರಣ ಅವನು ದೇವರ ಮಹಿಮೆಯನ್ನು ನೋಡಿದ್ದನು. ಅವನು ನಂಬಿಗಸ್ಥ ಸೇವಕನಾಗಿದ್ದನು. ಅವನು ತನ್ನ ಜನರಿಗಾಗಿ ಗೋಳಾಡಿ ಪ್ರಾರ್ಥಿಸುವವನಾಗಿದ್ದನು. ದೇವರಿಗೂ ಮತ್ತು ಜನರಿಗೂ ಮಧ್ಯಸ್ಥಗಾರನಾಗಿದ್ದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ವಿಮೋಚನಾಕಾಂಡ, ಯಾಜಕಕಾಂಡ, ಅರಣ್ಯಕಾಂಡ, ಧರ್ಮೋಪದೇಶಕಾಂಡ.*

## ಪ್ರಶ್ನೆಗಳು

1) ಐಗುಪ್ತದಲ್ಲಿ ಇಸ್ರಾಯೇಲರ ಪರಿಸ್ಥಿತಿ ಹೇಗಿತ್ತು?

2) ಮೋಶೆ ಮಿದ್ಯಾನ್ ದೇಶಕ್ಕೆ ಯಾಕೆ ಹೋದನು?

3) ದೇವರು ಮೋಶೆಯನ್ನು ತನ್ನ ಸೇವೆಗೆ ಕರೆದದ್ದನ್ನು ವಿವರಿಸಿರಿ.

4) ಐಗುಪ್ತದವರಿಗೆ ಉಂಟಾದ 10 ಉಪದ್ರವಗಳನ್ನು ತಿಳಿಸಿರಿ.

5) ಮೋಶೆಯ ಜೀವಿತದಿಂದ ನಾವು ಕಲಿಯಬಹುದಾದ ಅಂಶಗಳೇನು?

## ಯೆಹೋಶುವ

ದೇವರು ತನ್ನ ಸೇವಕನಾದ ಮೋಶೆಯ ಮರಣದ ನಂತರ ಇಸ್ರಾಯೇಲರನ್ನು ವಾಗ್ದಾನ ಮಾಡಿದ್ದ ಕಾನಾನ್ ದೇಶಕ್ಕೆ ನಡೆಸಲು ಯೆಹೋಶುವನನ್ನು ಆರಿಸಿಕೊಂಡು ಉಪಯೋಗಿಸಿದನು. ಈತನು ಒಬ್ಬ ಸಮರ್ಥ ನಾಯಕನಾಗಿದ್ದಾನೆ. ಮೋಶೆಯ ಶಿಷ್ಯನಾಗಿದ್ದ ಯೆಹೋಶುವನು ಮೋಶೆಯು ದೇವರೊಂದಿಗೆ ನಡೆದಂತೆ ಈತನೂ ಸಹ ನಡೆದುಕೊಂಡನು.

ದೇವರು ಮೋಶೆಯು ಸತ್ತಮೇಲೆ ಯೆಹೋಶುವನನ್ನು ಕರೆದು ಇಸ್ರಾಯೇಲರಿಗೆ ನಾಯಕನನ್ನಾಗಿ ನೇಮಿಸಿ– ನೀನು ಕಾಲಿಡುವ ಸ್ಥಳವೆಲ್ಲಾ ನಿನಗೆ ಸ್ವಂತವಾಗಿ ಕೊಡುತ್ತೇನೆ ಎಂದು ಅವನೊಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡನು.

ಯೆಹೋಶುವನು ಯೆರಿಕೋ ಪಟ್ಟಣವನ್ನು ನೋಡುವುದಕ್ಕೋಸ್ಕರ ಗೂಡಚಾರರನ್ನು ಕಳುಹಿಸಿದನು. ಗೂಡಚಾರರು ಆ ಪಟ್ಟಣದ ಕುರಿತಾಗಿ ಮಾಹಿತಿಯನ್ನು ತಂದು ಯೆಹೋಶುವನಿಗೆ ತಿಳಿಸಿದರು. ಇಸ್ರಾಯೇಲರು ಯೆರಿಕೋವಿಗೆ ಹೋಗಬೇಕಾದರೆ ಯೋರ್ದಾನ್ ನದಿಯನ್ನು ದಾಟಬೇಕಾಗಿತ್ತು. ಈ ನದಿಯು ಸುಗ್ಗಿಕಾಲದಲ್ಲಿ ದಡಮೀರಿ ಹರಿಯುತಿತ್ತು. ದೇವರು ಯೆಹೋಶುವನಿಗೆ– ಒಡಂಬಡಿಕೆಯಮಂಜೂಷವನ್ನು ಹೊತ್ತುಕೊಂಡು ಜನರ ಮುಂದಾಗಿ ನಡೆದು ನದಿಯನ್ನು ದಾಟಿರಿ ಎಂದು



ಆಜ್ಞಾಪಿಸಿದನು. ಅದರಂತೆ ಯಾಜಕರು ಮಂಜೂಷವನ್ನು ಹೊತ್ತುಕೊಂಡು ನದಿಯಲ್ಲಿ ಕಾಲಿಟ್ಟಾಗ ನದಿಯು ಎರಡು ಭಾಗವಾಯಿತು. ಜನರು ನೀರಿನ ಮಧ್ಯೆ ಒಣನೆಲದಲ್ಲಿ ನಡೆದು ನದಿಯನ್ನು ದಾಟಿದರು.

ಯೆರಿಕೋವಿನ ಜನರು ಇಸ್ರಾಯೇಲರಿಗೆ ಹೆದರಿ ತಮ್ಮ ಪಟ್ಟಣದ ಕೋಟೆಯ ಬಾಗಿಲನ್ನು ಭದ್ರವಾಗಿ ಮುಚ್ಚಿಕೊಂಡರು. ಯಾರೂ ಒಳಗೆ ಹೋಗಲು ಆಗಲಿಲ್ಲ. ಆ ಕೋಟೆಯು ತುಂಬಾ ದೊಡ್ಡದಾಗಿತ್ತು. ದೇವರು ಯೆಹೋಶುವನಿಗೆ– ನೀವು ಆರು ದಿವಸಗಳ ವರೆಗೆ ದಿನಕ್ಕೆ ಒಂದು ಸಾರಿ ಪಟ್ಟಣವನ್ನು ಸುತ್ತಿರಿ, ಏಳನೇ ದಿನದಲ್ಲಿ ಏಳು ಸಾರಿ ಸುತ್ತಿರಿ, ಎಲ್ಲರೂ ಕೊಂಬುಗಳನ್ನು ಊದುತ್ತಾ ಆರ್ಭಟಿಸಿರಿ, ಆಗ ಪಟ್ಟಣದ ಗೋಡೆಯು ಬಿದ್ದುಹೋಗುವುದು ಎಂದು ತಿಳಿಸಿದನು. ಯೆಹೋಶುವನು ದೇವರು ಹೇಳಿದಂತೆ ಜನರಿಗೆ ತಿಳಿಸಿದಾಗ ಜನರು ಹಾಗೆಯೆ ಮಾಡಿದರು, ಆಗ ಕೋಟೆಯು ಬಿದ್ದುಹೋಯಿತು. ಪಟ್ಟಣದಲ್ಲಿದ್ದ ಎಲ್ಲಾ ಜನರನ್ನು ಮತ್ತು ದನಕುರಿಗಳನ್ನು ಸಂಹರಿಸಿದರು.

ದೇವರು ಯೆಹೋಶುವನ ಸಂಗಡವಿದ್ದದ್ದರಿಂದ ಅವನು ದೇಶದಲ್ಲೆಲ್ಲಾ ಕೀರ್ತಿಗೊಂಡನು. ಅವನ ಜೀವಮಾನದಲ್ಲೆಲ್ಲಾ ಒಬ್ಬನೂ ಅವನ ಮುಂದೆ ನಿಂತುಕೊಳ್ಳಲಿಲ್ಲ. ಅವನು ಮಾಡಿದ ಎಲ್ಲಾ ಯುದ್ದಗಳಲ್ಲಿ ದೇವರು ಅವನಿಗೆ ಜಯವನ್ನು ಕೊಟ್ಟನು. ಆದರೆ ಅಯಿ ಎಂಬ ಪಟ್ಟಣದವರನ್ನು ಸೋಲಿಸಲು ಆಗಲಿಲ್ಲ, ಕಾರಣವೇನೆಂದರೆ ಆಕಾನನು ದೇವರಿಗೆ ಮೀಸಲಾಗಿಟ್ಟಿದ್ದ ವಸ್ತುಗಳಲ್ಲಿ ಕೆಲವೊಂದನ್ನು ಕದ್ದುಕೊಂಡಿದ್ದನು. ಹಾಗಾಗಿ ದೇವರು ಆ ಯುದ್ದದಲ್ಲಿ ಸಹಾಯ ಮಾಡಲಿಲ್ಲ. ದೇವರ ಆಜ್ಞೆಯಂತೆ ಯೆಹೋಶುವನು ಆಕಾನನನ್ನು ಕೊಲ್ಲಿಸಿ ಅವನಿಗಿದ್ದದ್ದನ್ನು ಸಂಹರಿಸಿದನು. ನಂತರ ಯೆಹೋಶುವನು ಆಯಿ ಪಟ್ಟಣದ ಮೇಲೆ ದಾಳಿ ಮಾಡಿದಾಗ ದೇವರ ಸಹಾಯದಿಂದ ಜಯವುಂಟಾಯಿತು.

ದೇವರು ಅವನೊಂದಿಗೆ ಇದ್ದದ್ದರಿಂದ ಅವನು ತನಗೆ ಎದುರಾಗಿ ಬಂದ ಎಲ್ಲಾ ಅರಸರನ್ನು ಸೋಲಿಸಿ ಕಾನಾನ್ ದೇಶವನ್ನು ವಶಪಡಿಸಿಕೊಂಡನು. ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ದೇಶವನ್ನು ಅವನ ಸಂತತಿಗೆ ನೀಡಿದನು. ಯೆಹೋಶುವನು ದೇವರ ಮಾರ್ಗದರ್ಶನದಂತೆ ಇಸ್ರಾಯೇಲಿನ 12 ಕುಲಗಳಿಗೆ ಆ ದೇಶವನ್ನು ಹಂಚಿಕೊಟ್ಟನು. ದೇವರು ತನ್ನ ವಾಗ್ದಾನಗಳಿಗೆ ನಂಬಿಗಸ್ಥನಾಗಿದ್ದಾನೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಯೆಹೋಶುವ ಪುಸ್ತಕ*



## ಪ್ರಶ್ನೆಗಳು

1) ದೇವರು ಯೆಹೋಶುವನೊಂದಿಗೆ ಮಾಡಿಕೊಂಡ ಒಡಂಬಡಿಕೆ ಏನು?
2) ಇಸ್ರಾಯೇಲರು ಯೋರ್ದಾನ್ ನದಿಯನ್ನು ಹೇಗೆ ದಾಟಿದರು?
3) ಇಸ್ರಾಯೇಲರು ಯೆರಿಕೋ ಗೋಡೆಯನ್ನು ಕೆಡವಿದ ರೀತಿಯನ್ನು ವಿವರಿಸಿರಿ.
4) ಇಸ್ರಾಯೇಲರಿಗೆ ಆಯಿ ಪಟ್ಟಣವು ಯಾಕೆ ವಶವಾಗಲಿಲ್ಲ?
5) ಯೆಹೋಶುವನ ನಾಯಕತ್ವದಿಂದ ನಾವು ಏನನ್ನು ಕಲಿಯುತ್ತೇವೆ?

# ಗಿದ್ಯೋನ

ಯೆಹೋಶುವನು ಮರಣ ಹೊಂದಿದ ಮೇಲೆ ಅವನ ನಂತರದ ಸಂತತಿಯು ದೇವರ ದೃಷ್ಟಿಯಲ್ಲಿ ದ್ರೋಹಿಗಳಾದರು. ತಮ್ಮ ಪಿತೃಗಳನ್ನು ಐಗುಪ್ತದಿಂದ ಕರೆತಂದ ದೇವರಾದ ಯೆಹೋವನನ್ನು ಬಿಟ್ಟು ಅನ್ಯ ದೇವರುಗಳನ್ನು ಪೂಜಿಸಿದರು. ಇದರಿಂದ ದೇವರು ಅವರ ಮೇಲೆ ಕೋಪಗೊಂಡು ಅವರನ್ನು ವೈರಿಗಳಿಗೆ ಒಪ್ಪಿಸಿದನು. ವೈರಿಗಳು ಇಸ್ರಾಯೇಲರನ್ನು ಬಹು ಸಂಕಟಕ್ಕೆ ಒಳಪಡಿಸಿದರು. ದೇವರು ಇಸ್ರಾಯೇಲರ ಗೋಳಾಟವನ್ನು ನೋಡಿ ಕನಿಕರಪಟ್ಟು ಅವರನ್ನು ಬಿಡಿಸುವುದಕ್ಕಾಗಿ ನ್ಯಾಯಸ್ಥಾಪಕರನ್ನು ನೇಮಿಸಿದನು. ಅವರಲ್ಲಿ ಗಿದ್ಯೋನನು ಒಬ್ಬನಾಗಿದ್ದಾನೆ.

ದೇವರು ಗಿದ್ಯೋನನ್ನು ಕರೆದಾಗ ಮಿದ್ಯಾನರು ಇಸ್ರಾಯೇಲರನ್ನು ಬಾಧಿಸುತ್ತಿದ್ದರು. ಇಸ್ರಾಯೇಲರು ಬೀಜಬಿತ್ತಿದಾಗ ಮಿದ್ಯಾನರು ಬಂದು ಭೂಮಿಯ ಹುಟ್ಟುವಳಿಯನ್ನು ಹಾಳು ಮಾಡುತ್ತಿದ್ದರು. ಗಿದ್ಯೋನನು ಮಿದ್ಯಾನರಿಗೆ ತಿಳಿಯದ ಹಾಗೆ ಗೋದಿಯನ್ನು ಬಡಿಯುತ್ತಿದ್ದನು. ಆಗ ಯೆಹೋವನ ದೂತನು ಬಂದು ಗಿದ್ಯೋನನನ್ನು ಮಿದ್ಯಾನರ ಇಸ್ರಾಯೇಲರನ್ನು ಕೈಯಿಂದ ಬಿಡಿಸಲು ಕರೆದನು. ಆದರೆ ಗಿದ್ಯೋನನು ತನ್ನ ಬಲಹೀನತೆಯನ್ನು, ತನ್ನ ಕುಲ, ಕುಟುಂಬದ ಕನಿಷ್ಠತೆಯ ನೆವವನ್ನು ತಿಳಿಸಿದನು. ಆಗ ದೇವರು ಅವನೊಂದಿಗೆ ಇರುವುದಾಗಿ ತಿಳಿಸಿ ಬಲಪಡಿಸಿದನು.

ದೇವರು ಗಿದ್ಯೋನನಿಗೆ– ನೀನು 2 ಹೋರಿಗಳನ್ನು ತೆಗೆದುಕೊಡು ಹೋಗಿ ಬಾಳಾನ ಯಜ್ಞವೇದಿಯನ್ನು ಕೆಡವಿ ಅದರ ಬಳಿಯಲ್ಲಿರುವ ಅಶೇರವೆಂಬ ವಿಗ್ರಹ ಸ್ತಂಭವನ್ನು ಕಡಿದುಹಾಕಿ ಯಜ್ಞವೇದಿಯನ್ನು ಕಟ್ಟಿ ಹೋರಿಯನ್ನು ಸರ್ವಾಂಗ ಹೋಮವಾಗಿ ಸಮರ್ಪಿಸು ಎಂದು ಹೇಳಿದಾಗ ಗಿದ್ಯೋನನು ಹಾಗೆಯೆ ಮಾಡಿದನು. ಇದರಿಂದ ಅವನಿಗೆ ಯೆರುಬ್ಬಾಳ ಎಂಬ ಹೆಸರು ಬಂದಿತು.



ಗಿದ್ಯೋನನು ಸೈನ್ಯ ಸಮೇತವಾಗಿ ಮಿದ್ಯಾನರ ವಿರುದ್ಧ ಯುದ್ಧಕ್ಕೆ ಹೊರಟನು. ಆಗ ದೇವರು ಗಿದ್ಯೋನನಿಗೆ– ನಿನ್ನ ಸಂಗಡ ಇರುವ ಜನರು ಹೆಚ್ಚಾಗಿದ್ದಾರೆ, ಇವರ ಕೈಗೆ ಮಿದ್ಯಾನರನ್ನು ಒಪ್ಪಿಸಿದರೆ ಇವರು ಸ್ವಬಲದಿಂದಲೇ ನಮಗೆ ರಕ್ಷಣೆ ಉಂಟಾಯಿತೆಂದು ಹೆಚ್ಚಳ ಪಟ್ಟು ನನ್ನನ್ನು ಅಲಕ್ಷಮಾಡುವರು, ಅದ್ದರಿಂದ ಧೈರ್ಯವಿಲ್ಲದವರನ್ನು ಮನೆಗೆ ಕಳುಹಿಸು ಎಂಬುದಾಗಿ ತಿಳಿಸಿದಾಗ 22,000 ಜನರು ಹಿಂದಿರುಗಿದರು. 10,000 ಸೈನಿಕರು ಉಳಿದರು.

ದೇವರು ಗಿದ್ಯೋನನಿಗೆ ತಿರುಗಿ– ನಿನ್ನ ಬಳಿಯಲ್ಲಿರುವ ಜನರು ಇನ್ನೂ ಹೆಚ್ಚಾಗಿದ್ದಾರೆ, ನೀನು ಅವರನ್ನು ಹಳ್ಳಕ್ಕೆ ಕರೆದುಕೊಂಡು ಹೋಗಿ ಪರೀಕ್ಷಿಸು, ನಾಯಿಯಂತೆ ನೀರನ್ನು ನೆಕ್ಕುವವರನ್ನು ಮತ್ತು ಮೊಣಕಾಲೂರಿ ನೀರನ್ನು ಕುಡಿಯುವವರನ್ನು ಬೇರೆ ಬೇರೆಯಾಗಿ ನಿಲ್ಲಿಸು ಎಂದು ಹೇಳಿದನು. ಅದರಂತೆ ಗಿದ್ಯೋನನು ನಿಲ್ಲಿಸಿದಾಗ ನಾಯಿಯಂತೆ ನೆಕ್ಕಿದವರ ಸಂಖ್ಯೆ 300. ಆಗ ದೇವರು ಆ 300 ಜನರಿಂದಲೇ ಯುದ್ಧಕ್ಕೆ ಹೋಗಲು ತಿಳಿಸಿದನು.

ಗಿದ್ಯೋನನು ಮಿದ್ಯಾನರ ಸೈನ್ಯದ ಹತ್ತಿರ ಬಂದಾಗ ತನ್ನ 300 ಜನರ ಗುಂಪನ್ನು ಮೂರು ಗುಂಪಾಗಿ ಮಾಡಿ ಅವರಿಗೆ– ನೀವು ಮಿದ್ಯಾನರ ಪಾಳಯದ ಅಂಚಿಗೆ ಬಂದಾಗ ಕೊಂಬುಗಳನ್ನು ಊದಿ ಯಹೋವನಿಗೆ ಜಯ, ಗಿದ್ಯೋನನಿಗೆ ಜಯ ಎಂದು ಕೂಗಲು ತಿಳಿಸಿದನು. ಆಗ ಅವರು ಕೊಂಬುಗಳನ್ನು ಊದಿ ಯೆಹೋವನ ಕತ್ತಿ, ಗಿದ್ಯೋನನ ಕತ್ತಿ ಎಂದು ಕೂಗಲು ಮಿದ್ಯಾನರು ಹೆದರಿ ಓಡಲಾರಂಭಿಸಿದರು. ದೇವರು ಮಿದ್ಯಾನರಲ್ಲಿ ತಾವೇ ಒಬ್ಬರಿಗೊಬ್ಬರು ಹತ ಮಾಡಿಕೊಳ್ಳುವಂತೆ ಮಾಡಿದನು. ಇಸ್ರಾಯೇಲರು ಜಯ ಹೊಂದಿದರು. ಗಿದ್ಯೋನನ ಜೀವಮಾನದಲ್ಲಿ 40 ವರ್ಷ ಆ ದೇಶದಲ್ಲಿ ಸಮಾದಾನವು ನೆಲೆಸಿತು.

ದೇವರು ಜ್ಞಾನ, ಬಲ, ಸಾಮರ್ಥ್ಯ, ಜೀವನದ ಹಿನ್ನಲೆಯನ್ನು ನೋಡಿ ಸೇವೆಗೆ ಕರೆಯುವುದಿಲ್ಲ ಎನ್ನುವುದಕ್ಕೆ ಗಿದ್ಯೋನನು ಒಂದು ಸ್ಪಷ್ಟ ಉದಾಹರಣೆಯಾಗಿದೆ. ದೇವರು ಬಲಿಷ್ಠರನ್ನು ನಾಚಿಕೆ ಪಡಿಸುವುದಕ್ಕಾಗಿ ಬಲಹೀನರನ್ನು, ಜ್ಞಾನಿಗಳನ್ನು ನಾಚಿಕೆ ಪಡಿಸುವುದಕ್ಕಾಗಿ ಜ್ಞಾನಹೀನರನ್ನು ಆರಿಸಿಕೊಳ್ಳುತ್ತಾನೆ.

ಹೆಚ್ಚಿನ ವಿವರಗಳಿಗಾಗಿ ಓದಿರಿ: ನ್ಯಾಯಸ್ಥಾಪಕರು: 6–8 ಅಧ್ಯಾಯಗಳು




## ಪ್ರಶ್ನೆಗಳು

1) ದೇವರು ಯಾಕೆ ಇಸ್ರಾಯೇಲರನ್ನು ಮಿದ್ಯಾನರಿಗೆ ಒಪ್ಪಿಸಿದನು?
2) ದೇವರು ಗಿದ್ಯೋನನನ್ನು ಕರೆದಾಗ ಅವನು ಯಾವ ರೀತಿಯಾಗಿ ಪ್ರತಿಕ್ರಿಯಿಸಿದನು?
3) ದೇವರು ನಿನ್ನನ್ನು ಸೇವೆಗೆ ಕರೆದಾಗ ನೀನು ಯಾವರೀತಿಯಾಗಿ ಪ್ರತಿಕ್ರೀಯಿಸಿದೆ?
4) ಗಿದ್ಯೋನನನು ಮಿದ್ಯಾನರನ್ನು ಸೋಲಿಸಿದ ರೀತಿಯನ್ನು ವಿವರಿಸಿರಿ.
5) ಗಿದ್ಯೋನನ ಜೀವಿತದಿಂದ ನಾವು ಕಲಿಯುವ ಸಂಗತಿಗಳೇನು?

# ಸಂಸೋನ

ಇಸ್ರಾಯೇಲರು ತಿರುಗಿ ದೇವರ ದೃಷ್ಠಿಯಲ್ಲಿ ದ್ರೋಹಿಗಳಾಗಿದ್ದರಿಂದ ಅವರನ್ನು ದೇವರು ಪಿಲಿಷ್ಠಿಯರ ಕೈಗೆ ಒಪ್ಪಿಸಿದನು. ಅವರು ಇಸ್ರಾಯೇಲರನ್ನು 40 ವರ್ಷಗಳವರೆಗೆ ಆಳಿದರು. ಇಸ್ರಾಯೇಲರನ್ನು ಪಿಲಿಷ್ಠಿಯರ ಕೈಯಿಂದ ಬಿಡಿಸುವುದಕ್ಕಾಗಿ ದೇವರು ಸಂಸೋನನನ್ನು ನೇಮಿಸಿದನು.

ಚೊರ್ಗಾ ಎಂಬ ಊರಿನಲ್ಲಿ ಮನೋಹ ಎಂಬ ಮನುಷ್ಯನಿದ್ದನು. ಅವನ ಹೆಂಡತಿಯು ಬಂಜೆಯಾಗಿದ್ದಳು. ಒಂದು ದಿನ ದೇವದೂತನು ಅವಳಿಗೆ– ನೀನು ಗರ್ಭವತಿಯಾಗಿ ಮಗನನ್ನು ಹೆರುವಿ, ಅವನ ತಲೆಯ ಮೇಲೆ ಕ್ಷೌರದ ಕತ್ತಿಯನ್ನು ಉಪಯೋಗಿಸಲೇಬಾರದು, ಅವನು ಹುಟ್ಟಿದಂದಿನಿಂದ ದೇವರಿಗೆ ಪ್ರತಿಷ್ಠನಾಗಿರುವನು, ಇಸ್ರಾಯೇಲರನ್ನು ಪಿಲಿಷ್ಟಿಯರಿಂದ ಬಿಡಿಸುವನು ಎಂದು ಹೇಳಿದನು. ಅದರಂತೆಯೇ ಸಂಸೋನನು ಜನಿಸಿದನು. ಯೆಹೋವನ ಆತ್ಮವು ಅವನನ್ನು ಪ್ರವೇಶಿಸಿತು.



ಸಂಸೋನನು ದೊಡ್ಡವನಾದ ಮೇಲೆ ತಿಮ್ನಾ ಎಂಬ ಊರಿನ ಪಿಲಿಷ್ಠಿಯರ ಒಬ್ಬ ಹೆಣ್ಣನ್ನು ಮದುವೆಯಾಗಲು ಬಯಸಿದನು. ಅವನು ತಿಮ್ನಾ ಊರಿಗೆ ಹೋಗುವಾಗ ಒಂದು ಸಿಂಹವು ಎದುರಾಯಿತು. ದೇವರಾತ್ಮನಿಂದ ಬಲಹೊಂದಿ ಸಿಂಹವನ್ನು ಸೀಳಿ ಹಾಕಿದನು. ಕೆಲವು ದಿವಸದ ನಂತರ ತಿರುಗಿ ಆ ಊರಿಗೆ ಹೋಗುವಾಗ ಸಿಂಹದ ಹೆಣವನ್ನು ನೋಡಿ ಅದರೊಳಗಿದ್ದ ಜೇನನ್ನು ತಿಂದನು. ಸಂಸೋನನು ಆ ಹೆಣ್ಣಿನ ಮನೆಗೆ ಬಂದಾಗ ಅಲ್ಲಿನ ಔತಣ ಕೂಟಕ್ಕೆ ಸೇರಿ ಬಂದಿದ್ದ 30 ಜನರಿಗೆ ಒಂದು ಒಗಟನ್ನು ತಿಳಿಸಿದನು. ಆ ಒಗಟು– ತಿಂದು ಬಿಡುವಂಥದ್ದರಿಂದ ತಿನ್ನತಕ್ಕದ್ದು ದೊರಕಿತು, ಕ್ರೂರವಾದದ್ದರಿಂದ ಮಧುರವಾದದ್ದು ಸಿಕ್ಕಿತು ಎಂಬುದಾಗಿತ್ತು. ಆ ಒಗಟಿನ ಅರ್ಥವನ್ನು ಹೇಳಲು ಅವರಿಗೆ ಆಗಲಿಲ್ಲ. ಕೊನೆಗೆ ಅವರು ಅವನ ಹೆಂಡತಿಯನ್ನು– ಅವನಿಂದ ಅರ್ಥವನ್ನು ತಿಳಿದಿಕೊ, ಇಲ್ಲದಿದ್ದರೆ ನಿನ್ನ ಕುಟುಂಬವನ್ನು ಸುಟ್ಟುಬಿಡುವೆವು ಎಂದು ಹೆದರಿಸಿದರು. ಅವನು ತನ್ನ ಹೆಂಡತಿಗೆ ಅರ್ಥವನ್ನು ಹೇಳಿದ್ದರಿಂದ ಅವರು ಅವಳಿಂದ ಉತ್ತರವನ್ನು ಪಡೆದುಕೊಂಡರು. ಆಗ ಸಂಸೋನನು ಆ 30 ಮಂದಿಯನ್ನು ಹೊಡೆದು ಅವರ ವಸ್ತ್ರಗಳನ್ನು ಕಿತ್ತುಕೊಂಡನು. ಮತ್ತು ಹೆಂಡತಿಯ ಮೇಲೆ ರೇಗಿ ತನ್ನ ಮನೆಗೆ ಹೋದನು. ಅವನ ಹೆಂಡತಿಯನ್ನು ಬೇರೆಯವರಿಗೆ ಮದುವೆ ಮಾಡಿಕೊಟ್ಟರು.

ಕೆಲವು ದಿವಸಗಳ ನಂತರ ಸಂಸೋನನು ಹೆಂಡತಿಯನ್ನು ನೋಡಲು ಹೋದಾಗ ಅವಳನ್ನು ಬೇರೆಯವರಿಗೆ ಮದುವೆ ಮಾಡಿಕೊಟ್ಟಿದ್ದು ತಿಳಿಯಿತು. ಸಂಸೋನನು ಕೋಪಗೊಂಡು 300 ನರಿಗಳನ್ನು ಹಿಡಿದು ಅವುಗಳ ಬಾಲಗಳಿಗೆ ಬೆಂಕಿಯ ಪಂಜುಗಳನ್ನು ಕಟ್ಟಿ ಪಿಲಿಷ್ಠಿಯರ ಪೈರುಗಳನ್ನು ನಾಶಮಾಡಿದನು. ಈ ವಿಷಯ ಪಿಲಿಷ್ಠಿಯರಿಗೆ ತಿಳಿದಾಗ ಅವರು ಅವನ ಮಾವನನ್ನು ಸುಟ್ಟುಬಿಟ್ಟರು. ಇದರಿಂದ ಸಂಸೋನನು ಅವರನ್ನು ಸಂಹರಿಸಿದನು. ಆಗ ಪಿಲಿಷ್ಠಿಯರು ಒಟ್ಟಾಗಿ ಯೆಹೂದ್ಯರ ವಿರುದ್ದ ಯುದ್ದಕ್ಕೆ ಬಂದರು. ಅವರು ಯೆಹೂದ್ಯರಿಗೆ ಸಂಸೋನನನ್ನು ಒಪ್ಪಿಸುವಂತೆ ತಿಳಿಸಿದರು. ಯೆಹೂದ್ಯರು ಅವನನ್ನು ಹಗ್ಗಗಳಿಂದ ಕಟ್ಟಿ ಪಿಲಿಷ್ಠಿಯರ ಬಳಿಗೆ ಕರೆತಂದರು. ಯೆಹೋವನ ಆತ್ಮವು ಸಂಸೋನನ ಮೇಲೆ ಬಂದಾಗ ಅವನು ಕತ್ತೆಯ ದವಡೆ ಎಲುಬಿನಿಂದ 1000 ಜನರನ್ನು ನಾಶಮಾಡಿದನು.

ಆನಂತರ ಸಂಸೋಸನನು ದೆಲೀಲಾ ಎಂಬ ಸ್ತ್ರೀಯಲ್ಲಿ ಮೋಹಿತನಾದನು. ಪಿಲಿಷ್ಠಿಯರು ಅವನ ಶಕ್ತಿಯ ರಹಸ್ಯವನ್ನು ತಿಳಿದುಕೊಳ್ಳುವಂತೆ ಅವಳಿಗೆ ಹೇಳಿದರು. ಅವಳು ಅವನ ಶಕ್ತಿಯ ರಹಸ್ಯವನ್ನು ತಿಳಿಸುವಂತೆ ಒತ್ತಾಯಿಸಿದಳು. ಆಗ ಸಂಸೋನನು ತನ್ನ ಮೇಲೆ ಕ್ಷೌರಕತ್ತಿಯನ್ನು ಬರಮಾಡಿಲ್ಲ, ಕ್ಷೌರಮಾಡಿದರೆ ಬಲಹೀನನಾಗುತ್ತೇನೆ ಎಂದು ಹೇಳಿದನು. ಅವಳು ಪಿಲಿಷ್ಠಿಯರಿಗೆ ತಿಳಿಸಿದಳು. ಅವನು ಮಲಗಿರುವಾಗ ಕ್ಷೌರವನ್ನು ಮಾಡಿದರು. ಯೆಹೋವನ ಆತ್ಮವು ಅವನನ್ನು ಬಿಟ್ಟುಹೋಯಿತು. ಪಿಲಿಷ್ಠಿಯರು ಅವನನ್ನು ಹಿಡಿದು ಕಣ್ಣನ್ನು ಕಿತ್ತು ತಮ್ಮ ದೇಶಕ್ಕೆ ಕರೆದೊಯ್ದರು.



ಪಿಲಿಷ್ಠಿಯರು ಸಂಸೋನನನ್ನು ಹಿಡಿದಿದ್ದಕ್ಕಾಗಿ ಅವರು ತಮ್ಮ ದೇವರುಗಳಿಗೆ ಯಜ್ಞವನ್ನು ಅರ್ಪಿಸುವಾಗ ಅವರು ವಿನೋದಕ್ಕಾಗಿ ಸಂಸೋನನನ್ನು ಕರೆತಂದರು. ಸಂಸೋನನು ದೇವರನ್ನು ಪ್ರಾರ್ಥಿಸಿದಾಗ ಅವನಿಗೆ ದೇವರಬಲ ಬಂದಿತು.

ಅವನು ಅಸ್ತಿವಾರದ ಕಂಬಗಳನ್ನು ಕಿತ್ತಿದಾಗ 3000 ಜನರು ನಾಶವಾದರು. ಅವನು ಜೀವದಿಂದಿದ್ದಾಗ ಕೊಂದದ್ದಕ್ಕಿಂತ ಹೆಚ್ಚಾಗಿ ಸಾಯುವಾಗ ಬಹಳ ಜನರನ್ನು ಹತಿಸಿದನು.

ಹೆಚ್ಚಿನ ವಿವರಗಳಿಗಾಗಿ ಓದಿರಿ: ನ್ಯಾಯಸ್ಥಾಪಕರು: 13–16 ಅಧ್ಯಾಯಗಳು

## ಪ್ರಶ್ನೆಗಳು


1) ಸಂಸೋನನ ಶಕ್ತಿಯ ರಹಸ್ಯ ಏನಾಗಿತ್ತು?

2) ಸಂಸೋನನು ಫಿಲಿಷ್ಟಿಯರಿಗೆ ಹೇಗೆ ವೈರಿಯಾದನು?

3) ಸಂಸೋನನ ಪತನಕ್ಕೆ ದೆಲೀಲಾಳು ಹೇಗೆ ಕಾರಣಳಾದಳು?


4) ಸಂಸೋನನ ಅಂತ್ಯ ಸ್ಥಿತಿ ಹೇಗಿತ್ತು?

5) ಸಂಸೋನನ ಜೀವಿತದಿಂದ ನಾವು ಏನನ್ನು ಕಲಿಯುತ್ತೇವೆ?



# ರೂತಳು

ನ್ಯಾಯಸ್ಥಾಪಕರ ಆಳ್ವಿಕೆಯ ಕಾಲದಲ್ಲಿ ಕಾನಾನ್ ದೇಶದಲ್ಲಿ ಬರಗಾಲ ಬಂದದ್ದರಿಂದ ಬೆತ್ಲೆಹೇಮಿನಲ್ಲಿ ವಾಸಿಸುತ್ತಿದ್ದ ನವೋಮಿ ಎಂಬ ಸ್ತ್ರೀಯು ತನ್ನ ಗಂಡ ಮತ್ತು ಇಬ್ಬರು ಮಕ್ಕಳನ್ನು ಕರೆದುಕೊಂಡು ಮೋವಾಬ್ ದೇಶಕ್ಕೆ ಹೋದಳು. ಅಲ್ಲಿ ತನ್ನ ಇಬ್ಬರು ಗಂಡುಮಕ್ಕಳಿಗೆ ಮದುವೆಮಾಡಿಸಿದಳು. ಆದರೆ ಆಕೆಯ ಗಂಡ ಮತ್ತು ಇಬ್ಬರು ಮಕ್ಕಳು ಸತ್ತುಹೋದರು. ಆಗ ನವೋಮಿಯು ತನ್ನ ಸ್ವದೇಶಕ್ಕೆ ಹಿಂದಿರುಗಲು ನಿರ್ಧರಿಸಿದಳು. ಆಕೆಯ ದೊಡ್ಡ ಸೊಸೆಯು ತವರಿಗೆ ಹಿಂದಿರುಗಿದಳು. ಆದರೆ ರೂತಳು ಅತ್ತೆಯ ಜೊತೆಗೆ ಬೆತ್ಲೆಹೇಮಿಗೆ ಬಂದಳು.



ಆ ಊರಿನಲ್ಲಿ ಬೋವಜನೆಂಬ ಒಬ್ಬ ಶ್ರೀಮಂತನಿದ್ದನು. ಅವನು ನವೋಮಿಯ ಸಂಬಧಿಕನಾಗಿದ್ದನು. ಗೋದಿಯ ಸುಗ್ಗಿಕಾಲದಲ್ಲಿ ರೂತಳು ತಾನು ಹಕ್ಕಲುತೆನೆ ಕೂಡಿಸಿಕೊಂಡು ಬರುವುದಾಗಿ ಅತ್ತೆಗೆ ತಿಳಿಸಿದಳು. ದೇವರ ಸಂಕಲ್ಪದಂತೆ ಅವಳು ಬೋವಜನ ಹೊಲಕ್ಕೆ ಹೋದಳು. ರೂತಳು ಹಕ್ಕಲಾಯುತ್ತಿದ್ದಾಗ ಬೋವಜನು ನೋಡಿ ತನ್ನ ಸೇವಕರನ್ನು ಕರೆದು ಆಕೆಯ ಕುರಿತಾಗಿ ವಿಚಾರಿಸಿದನು. ಅವರು ನವೋಮಿಯೊಂದಿಗೆ ಬಂದ ಮೊವಾಬ್ ದೇಶದ ಸ್ತ್ರೀ ಎಂದು ತಿಳಿಸಿದಾಗ ಅವನು ಆಕೆಗೆ– ನೀನು ನನ್ನ ಹೊಲವನ್ನು ಬಿಟ್ಟು ಬೇರೆಯವರ ಹೊಲಕ್ಕೆ ಹೋಗಬೇಡ, ನನ್ನ ಹೆಣ್ಣಾಳುಗಳ ಜೊತೆಯಲ್ಲಿದ್ದು ಅವರು ಹೋಗುವ ಎಲ್ಲಾ ಹೊಲಗಳಿಗೆ ನೀನು ಹೋಗಿ ಹಕ್ಕಲಾಯಿ ಎಂದು ಹೇಳಿದನು. ಮತ್ತು ಊಟದ ಸಮಯದಲ್ಲಿ ರೊಟ್ಟಿಯನ್ನು ಮತ್ತು ಹುಳಿರಸವನ್ನು ಕೊಟ್ಟನು.

ರೂತಳು ಸಾಯಂಕಾಲ ಮನೆಗೆ ಬಂದಾಗ ತಾನು ಬೋವಜನ ಹೊಲಕ್ಕೆ ಹೋಗಿದ್ದು ಮತ್ತು ಅವನು ಹೇಳಿದ ಮಾತುಗಳನ್ನು ನವೋಮಿಗೆ ತಿಳಿಸಿದಳು. ನವೋಮಿಯು ತನ್ನ ಸೊಸೆಯು ಗೃಹಿಣಿಯಾಗಿ ಸುಖದಿಂದಿರಬೇಕೆಂದು ಬಯಸಿ ರೂತಳಿಗೆ– ಬೋವಜನು ನಮ್ಮ ಸಂಬಂಧಿಕನಾಗಿದ್ದಾನೆ, ಈ ದಿನ ರಾತ್ರಿಯಲ್ಲಿ ಅವನು ಗೋದಿಯನ್ನು ತೂರುತ್ತಾನೆ, ನೀನು ಹೋಗಿ ಅವನು ಅನ್ನ ಪಾನಗಳನ್ನು ತೆಗೆದುಕೊಂಡು ಮಲಗಿದ ಮೇಲೆ ನೀನು ಅವನಕಾಲುಗಳ ಮೇಲಿನ ಹೊದಿಕೆಯನ್ನು ತೆಗೆದು ಅಲ್ಲೇ ಮಲಗಿರು, ಮುಂದಿನ ಕೆಲಸವನ್ನು ಅವನು ತಿಳಿಸುವನು ಎಂದು ಹೇಳಿದಳು. ರೂತಳು ಅತ್ತೆಯು ಹೇಳಿದಂತೆ ಬೋವಜನ ಕಾಲುಗಳ ಬಳಿಯಲ್ಲಿ ಮಲಗಿದಳು. ಆಗ ಬೋವಜನು ಎದ್ದು ಆಕೆಯನ್ನು ವಿಚಾರಿಸಿದನು. ಅಕೆಯು– ನಾನು ರೂತಳು, ನೀನು ಸಮೀಪ ಬಂಧುವಾಗಿದ್ದರಿಂದ ನಿನ್ನ ಹೊದಿಕೆಯ ಅಂಚನ್ನು ನನ್ನ ಮೇಲೆ ಹಾಕು ಎಂದಳು. ಬೋವಜನು ಆಕೆಯು ಗುಣವಂತೆ ಎಂಬುದಾಗಿ ತಿಳಿದಿದ್ದರಿಂದ ಅವಳು ಹೇಳಿದ್ದೆನ್ನೆಲ್ಲವನ್ನು ಮಾಡುವೆನು ಎಂದನು. ಆದರೆ ತನಗಿಂತ ಇನ್ನೊಬ್ಬ ವ್ಯಕ್ತಿಯು ನವೋಮಿಗೆ ಸಮೀಪ ಬಂಧು ಇರುವುದರಿಂದ ಅವನನ್ನು ವಿಚಾರಿಸಿ ತನ್ನನ್ನು ವಿವಾಹವಾಗುವುದಾಗಿ ತಿಳಿಸಿದನು.

ಮರುದಿನ ಬೋವಜನು ತಾನು ಹೇಳಿದ್ದ ಸಮೀಪ ಬಂಧುವಿಗೆ– ನವೋಮಿಯು ತನ್ನ ಪಾಲಿನ ಹೊಲವನ್ನು ಮಾರಬೇಕೆಂದಿದ್ದಾಳೆ, ನೀನು ಆ ಹೊಲವನ್ನು ತಗೆದುಕೊಳ್ಳುವುದಾದರೆ ಆಕೆಯ ಸೊಸೆಯಾದ ರೂತಳನ್ನೂ ಸಹಿತವಾಗಿ ತೆಗೆದುಕೊಳ್ಳಬೇಕೆಂದು ತಿಳಿಸಿದಾಗ ಆ ಸಮೀಪ ಬಂಧುವು ನೀನೇ ತೆಗೆದುಕೋ ಎಂದು ಬೋವಜನಿಗೆ ಹೇಳಿದನು. ಬೋವಜನು ಜನರ ಸಾಕ್ಷಿಗಳ ಎದುರಿನಲ್ಲಿ ಅವಳನ್ನು ವಿವಾಹವಾದನು.

ದೇವರು ತನ್ನ ಯೋಜನೆಯನ್ನು ನೆರವೇರಿಸುವುದಕ್ಕಾಗಿ ಅನ್ಯರನ್ನೂ ಸಹ ಉಪಯೋಗಿಸಿಕೊಳ್ಳುತ್ತಾನೆ ಎಂಬುದಕ್ಕೆ ರೂತಳು ಸ್ಪಷ್ಟವಾದ ನಿದರ್ಶನವಾಗಿದ್ದಾಳೆ. ರೂತಳಿಂದ ಓಬೇದನು, ಓಬೇದನಿಂದ ಇಷಯನು, ಇಷಯನಿಂದ ದಾವೀದನು ಹುಟ್ಟಿದನು. ಈ ದಾವೀದನ ವಂಶದಲ್ಲಿಯೇ ಯೇಸುಕ್ರಿಸ್ತನು ಲೋಕರಕ್ಷಕನಾಗಿ ಬಂದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ರೂತಳು ಪುಸ್ತಕ*

## ಪ್ರಶ್ನೆಗಳು

1) ನವೋಮಿಗೆ ಮೊವಾಬ್ ದೇಶದಲ್ಲಿ ಉಂಟಾದ ಸ್ಥಿತಿಯನ್ನು ವಿವರಿಸಿರಿ.

2) ಸ್ವದೇಶಕ್ಕೆ ಬರುವ ವಿಚಾರದಲ್ಲಿ ನವೋಮಿ ಮತ್ತು ರೂತಳ ನಡುವೆ ನಡೆದ ಸಂಭಾಷಣೆಯನ್ನು ತಿಳಿಸಿರಿ.

3) ರೂತಳನ್ನು ಭೋವಜನು ವಿವಾಹವಾದ ರೀತಿಯನ್ನು ವಿವರಿಸಿರಿ.


4) ರೂತಳು ದೇವರ ಯೋಜನೆಯನ್ನು ನೆರವೇರಿಸುವುದರಲ್ಲಿ ಹೇಗೆ ತನ್ನ ಪಾತ್ರವನ್ನು ವಹಿಸಿದ್ದಾಳೆ?

5) ರೂತಳ ಜೀವಿತದಿಂದ ನಾವು ಏನನ್ನು ಕಲಿಯಬಹುದು?

# ಸಮುವೇಲ

ಸಮುವೇಲನು ಇಸ್ರಾಯೇಲರಿಗೆ ದೇವರು ನೇಮಿಸಿದ ನ್ಯಾಯಸ್ಥಾಪಕನು ಮತ್ತು ಪ್ರವಾದಿಯೂ ಆಗಿದ್ದನು. ಈತನು ಮಗುವಾಗಿರುವಾಗಲೇ ದೇವರ ಸೇವೆಗೆ ಪ್ರತಿಷ್ಠಿಸಲ್ಪಟ್ಟಿದ್ದನು. ಚಿಕ್ಕವಯಸ್ಸಿನಿಂದಲೆ ದೇವರ ಆಲಯದಲ್ಲಿ ಜೀವಿಸಿದನು. ದೇವರು ಈತನ ಸಂಗಡವಿದ್ದದ್ದರಿಂದ ಈತನು ಹೇಳಿದ ಪ್ರವಾದನೆಗಳಲ್ಲಿ ಯಾವುದೊಂದೂ ಬಿದ್ದು ಹೋಗಲಿಲ್ಲ. ಸಮುವೇಲನು ದೇವರ ಆಜ್ಞೆಯಂತೆ ಇಬ್ಬರು ಅರಸರನ್ನು (ಸೌಲ ಮತ್ತು ದಾವೀದ) ಅಭಿಷೇಕಿಸಿದನು.

ಸಮುವೇಲನ ತಂದೆ ಎಲ್ಕಾನನು ಮತ್ತು ತಾಯಿ ಹನ್ನಳಾಗಿದ್ದಳು. ಹನ್ನಳಿಗೆ ಮಕ್ಕಳಿರಲಿಲ್ಲ. ಹನ್ನಳು ದೇವರಿಗೆ ಮೊರೆಯಿಟ್ಟು ಸಮುವೇಲನನ್ನು ಮಗುವಾಗಿ ಪಡೆದಳು ಮತ್ತು ತಿರುಗಿ ಅವನನ್ನು ದೇವರ ಸೇವೆಗೆ ಪ್ರತಿಷ್ಠಿಸಿದಳು. ಹಾಗಾಗಿ ಸಮುವೇಲನು ಏಲಿಯನ ಶಿಷ್ಯನಾಗಿ ದೇವರ ಸಮ್ಮುಖದಲ್ಲಿ(ಆಲಯ) ಬೆಳೆದನು.



ಒಂದು ದಿನ ರಾತ್ರಿಯಲ್ಲಿ ಸಮುವೇಲನು ದೇವರ ಮಂದಿರದಲ್ಲಿ ದೇವರ ಮಂಜೂಷವಿದ್ದ ಸ್ಥಳದಲ್ಲಿ ಮಲಗಿದ್ದಾಗ ದೇವರು ಸಮುವೇಲನನ್ನು ಕರೆದನು. ಆಗ ಸಮುವೇಲನು ಬಂದೆನೆಂದು ಉತ್ತರ ಕೊಟ್ಟು ಏಲಿಯನ ಬಳಿಗೆ ಹೋಗಿ– ಇಗೋ ಬಂದಿದ್ದೇನೆ, ನೀನು ನನ್ನನ್ನು ಕರೆದೆಯಲ್ಲ ಎಂದನು. ಆಗ ಏಲಿಯು– ನಾನು ನಿನ್ನನ್ನು ಕರೆಯಲಿಲ್ಲ, ಹೋಗಿ ಮಲಗಿಕೊ ಎಂದನು. ಆ ಸಮಯದಲ್ಲಿ ಸಮುವೇಲನಿಗೆ ಎಂದೂ ದೇವರ ಅನುಭವ ಆಗಿರಲಿಲ್ಲ. ದೇವರು ತಿರುಗಿ ಸಮುವೇಲನನ್ನು ಕರೆದಾಗ ಅವನು ಏಲಿಯನ ಬಳಿಗೆ ಹೋದನು. ಏಲಿಯನು ನಾನು ಕರೆಯಲಿಲ್ಲ ಎಂದನು. ದೇವರು ಮತ್ತೆ ತಿರುಗಿ ಕರೆದನು. ಸಮುವೇಲನು ಎದ್ದು ಏಲಿಯನ ಬಳಿಗೆ ಬಂದಾಗ ಏಲಿಯು ಸಮುವೇಲನನ್ನು ದೇವರು ಕರೆದಿದ್ದಾನೆಂದು ತಿಳಿದು ಅವನಿಗೆ ಈ ಸಾರಿ ನಿನ್ನನ್ನು ಕರೆದರೆ ಅಪ್ಪಣೆಯಾಗಲಿ ಎಂದು ಹೇಳೆಂಬುದಾಗಿ ತಿಳಿಸಿದನು. ದೇವರು ತಿರುಗಿ ಸಮುವೇಲನನ್ನು ಕರೆದಾಗ ಅವನು ಅಪ್ಪಣೆಯಾಗಲಿ ಎಂದನು. ದೇವರು ಸಮುವೇಲನನ್ನು ಇಸ್ರಾಯೇಲರಿಗೆ ಪ್ರವಾದಿಯನ್ನಾಗಿ ನೇಮಿಸಿದನು. ಸಮುವೇಲನು ಇಸ್ರಾಯೇಲರಿಗೆ ದೈವೋತ್ತರಗಳನ್ನು ತಿಳಿಸುತ್ತಿದ್ದನು.

ಇಸ್ರಾಯೇಲರಿಗೆ ವಿರುದ್ದವಾಗಿ ಫಿಲಿಷ್ಠಿಯರು ಯುದ್ದಕ್ಕೆ ಬಂದಾಗ ಇಸ್ರಾಯೇಲರು ಬಹಳವಾಗಿ ಭಯಪಟ್ಟು ಸಮುವೇಲನ ಬಳಿಗೆ ಬಂದು ದೇವರಲ್ಲಿ ಪ್ರಾರ್ಥಿಸುವಂತೆ ಬೇಡಿಕೊಂಡರು. ಅದರಂತೆ ಅವನು ದೇವರಲ್ಲಿ ಮೊರೆಯಿಟ್ಟಾಗ ದೇವರು ದೊಡ್ಡ ಗುಡಿಗಿನಿಂದ ವೈರಿಗಳನ್ನು ಕಳವಳಗೊಳಿಸಿ ಇಸ್ರಾಯೇಲರಿಗೆ ಸೋತು ಹೋಗುವಂತೆ ಮಾಡಿದನು. ಸಮುವೇಲನ ಜೀವಮಾನದೆಲ್ಲೆಲ್ಲಾ ದೇವರ ಹಸ್ತವು ಫಿಲಿಷ್ಠಿಯರಿಗೆ ವಿರೋದವಾಗಿತ್ತು.

ಸಮುವೇಲನು ಮುದುಕನಾದ ಮೇಲೆ ತನ್ನ ಮಕ್ಕಳನ್ನು ನ್ಯಾಯಸ್ಥಾಪಕರನ್ನಾಗಿ ನೇಮಿಸಿದನು. ಆದರೆ ಇವರು ದ್ರವ್ಯಾಶೆಯಿಂದ ಲಂಚವನ್ನು ತೆಗೆದುಕೊಂಡು ನ್ಯಾಯ ವಿರುದ್ದವಾಗಿ ತೀರ್ಪು ಮಾಡುತ್ತಿದ್ದರು. ಇದರಿಂದ ಇಸ್ರಾಯೇಲರು ಸಮುವೇಲನನ್ನು ಇತರ ದೇಶಗಳ ಜನರಿಗಿರುವಂತೆ ತಮಗೆ ಒಬ್ಬ ಅರಸನನ್ನು ಕೊಡು ಎಂದು ಕೇಳಿದರು. ಇದನ್ನು ಕೇಳಿದ ಸಮುವೇಲನು ದುಃಖಪಟ್ಟು ದೇವರನ್ನು ಪ್ರಾರ್ಥಿಸಿದನು. ಆಗ ದೇವರು ಸಮುವೇಲನಿಗೆ– ಈ ಜನರು ನಿನ್ನನ್ನು ಅಷ್ಟೆ ಅಲ್ಲ, ನನ್ನನ್ನೂ ಸಹ ತಿರಸ್ಕರಿಸಿದ್ದಾರೆ. ನೀನು ಅವರು ಕೇಳಿದಂತೆ ಮಾಡು ಎಂದು ಹೇಳಿದನು. ದೇವರು ತನಗೆ ಆಜ್ಞಾಪಿಸಿದಂತೆ ಸಮುವೇಲನು ಸೌಲನನ್ನು ಇಸ್ರಾಯೇಲರ ಅರಸನನ್ನಾಗಿ ಅಭಿಷೇಕಿಸಿ ನೇಮಿಸಿದನು. ಆದರೆ ಸೌಲನು ದೇವರಿಗೆ ಅವಿಧೇಯನಾಗಿದ್ದದ್ದರಿಂದ ದೇವರು ಅವನನ್ನು ಅರಸುತನದಿಂದ ತೆಗೆದುಹಾಕಿದನು. ದೇವರು ಸಮುವೇಲನಿಗೆ ದಾವೀದನನ್ನು ಇಸ್ರಾಯೇಲರ ಅರಸನನ್ನಾಗಿ ಅಭಿಷೇಕಿಸಲು ತಿಳಿಸಿದಾಗ ಅವನು ದಾವೀದನನ್ನು ಅಭಿಷೇಕಿಸಿದನು.

ಹೆಚ್ಚಿನ ವಿವರಗಳಿಗಾಗಿ ಓದಿರಿ: 1 ಸಮುವೇಲ: 1–16 ಅಧ್ಯಾಯಗಳು.

## ಪ್ರಶ್ನೆಗಳು

1) ದೇವರು ಸಮುವೇಲನನ್ನು ಕರೆದ ಸನ್ನಿವೇಶವನ್ನು ವಿವರಿಸಿರಿ.

2) ತಮಗೆ ಅರಸನನ್ನು ಕೊಡು ಎಂದು ಜನರು ಕೇಳಿದಾಗ ಸಮುವೇಲನು ಯಾಕೆ ದುಃಖಪಟ್ಟನು?

3) ಸಮುವೇಲನು ಸೌಲನನ್ನು ಅರಸನನ್ನಾಗಿ ನೇಮಿಸಿದ ಸಂದರ್ಭವನ್ನು ವಿವರಿಸಿ.

4) ಸಮುವೇಲನ ಜೀವಿತದಿಂದ ನಾವು ಏನನ್ನು ಕಲಿಯುತ್ತೇವೆ?

# ಸೌಲ

ಇಸ್ರಾಯೇಲರು ದೇವರ ಆಳ್ವಿಕೆಯನ್ನು ತಿರಸ್ಕರಿಸಿ ಇತರ ದೇಶಗಳಿಗೆ ಇರುವಂತೆ ತಮಗೊಬ್ಬ ಅರಸನನ್ನು ನೇಮಿಸು ಎಂಬುದಾಗಿ ಸಮುವೇಲನನ್ನು ಕೇಳಿಕೊಂಡಿದ್ದರಿಂದ ದೇವರ ಅನುಮತಿಯಂತೆಯೇ ಸೌಲನು ಇಸ್ರಾಯೇಲರ ಅರಸನಾದನು. ಈತನು ಇಸ್ರಾಯೇಲರ ಇತಿಹಾಸದಲ್ಲಿ ಪ್ರಥಮ ಅರಸನಾಗಿದ್ದಾನೆ.

ಸೌಲನು ಅರಸನಾಗುವುದಕ್ಕಿಂತ ಮುಂಚೆ ಒಂದು ದಿನ ಅವನ ಕತ್ತೆಗಳು ಕಳೆದುಹೋಗಿದ್ದವು. ಸೌಲನು ಮತ್ತು ಅವನ ಆಳು ಕತ್ತೆಗಳನ್ನು ಹುಡುಕಲು ಹೋದರು. ಅವರು ಹುಡುಕುತ್ತಾ ಚೂಫ್ ದೇಶಕ್ಕೆ ಬಂದಾಗ ಅವನ ಆಳು ಅವನಿಗೆ– ಈ ಪಟ್ಟಣದಲ್ಲಿ ಒಬ್ಬ ದೇವರ ಮನುಷ್ಯನಿದ್ದಾನೆ, ಅವನ ಬಳಿಗೆ ಹೋದರೆ ನಾವು ಹೋಗತಕ್ಕ ಮಾರ್ಗವನ್ನು ತಿಳಿಸುವನೆಂದು ಹೇಳಿದಾಗ ಅವರು ಸಮುವೇಲನ ಬಳಿಗೆ ಹೋದರು. ಸೌಲನು ಬರುವುದಕ್ಕಿಂತ ಒಂದು ದಿನ ಮುಂದಾಗಿ ದೇವರು ಸಮುವೇಲನಿಗೆ ಸೌಲನ ಬರೋಣದ ಕುರಿತಾಗಿ ತಿಳಿಸಿ ಅವನನ್ನು ಅರಸನನ್ನಾಗಿ ಅಭಿಷೇಕಿಸು ಎಂದು ಹೇಳಿದ್ದನು. ಅದರಂತೆ ಸಮುವೇಲನು ಸೌಲನನ್ನು ಅಭಿಷೇಕಿಸಿ ಅರಸನನ್ನಾಗಿ ನೇಮಿಸಿದನು. ಸೌಲನ ಮೇಲೆ ದೇವರಾತ್ಮ ಬಂದಾಗ ಅವನು ಪ್ರವಾದಿಸಿದನು.

ಸೌಲನು ಅರಸನಾದ ಮೇಲೆ ಫಿಲಿಷ್ಟಿಯರ ವಿರೋದವಾಗಿ ಯುದ್ದಕ್ಕೆ ಹೋದಾಗ ಗಿಲ್ಗಾಲಿನಲ್ಲಿ ಸಮುವೇಲನು ಬರಲು ತಡವಾದಾಗ ಸೌಲನೇ ದೇವರಿಗೆ ಸರ್ವಾಂಗ ಹೋಮವನ್ನು ಅರ್ಪಿಸಿದನು. ಸೌಲನ ಅವಿಧೇಯತೆಯ ನಿಮಿತ್ತ ಅವನ ರಾಜ್ಯವು ಬೇರೆಯವರ ಪಾಲಾಗಿದೆ ಎಂದು ಸಮುವೇಲನು ತಿಳಿಸಿದನು. ಸೌಲನು ಮತ್ತೊಮ್ಮೆ ದೇವರಿಗೆ ಅವಿಧೇಯನಾದನು. ಹೇಗೆಂದರೆ– ಸಮುವೇಲನು ಅಮಾಲೇಕ್ಯರನ್ನು ಸಂಪೂರ್ಣವಾಗಿ ನಾಶಮಾಡುವಂತೆ ದೇವರು ಆಜ್ಞಾಪಿಸಿದ್ದಾನೆಂದು ಸೌಲನಿಗೆ ತಿಳಿಸಿದಾಗ ಸೌಲನು ಯುದ್ದದಲ್ಲಿ ಅವರನ್ನು ಸಂಪೂರ್ಣವಾಗಿ ನಾಶಮಾಡದೆ ಮೆಲ್ತರದ ದನಕುರಿಗಳನ್ನು ಕೊಬ್ಬಿದ ಪಶುಗಳನ್ನು ಶ್ರೇಷ್ಠವಾದ ಪದಾರ್ಥಗಳನ್ನು ಉಳಿಸಿಕೊಂಡನು. ಇದರಿಂದ ದೇವರು ಅವನನ್ನು ಅರಸನನ್ನಾಗಿ ಮಾಡಿದ್ದಕ್ಕಾಗಿ ದುಃಖಪಟ್ಟು ಅರಸುತನದಿಂದ ತಳ್ಳಿಬಿಟ್ಟನು. ಸಮುವೇಲನು ರಾಮಕ್ಕೆ ಹೋದನು ಮತ್ತು ತನ್ನ ಜೀವಮಾನದೆಲ್ಲೆಲ್ಲಾ ಸೌಲನನ್ನು ನೋಡಲಿಲ್ಲ.

ಸೌಲನನ್ನು ದೇವರಾತ್ಮವು ಬಿಟ್ಟು ಹೋಗಿದ್ದರಿಂದ ದೇವರು ಕಳುಹಿಸಿದ ದುರಾತ್ಮವು ಬಂದು ಅವನನ್ನು ಪೀಡಿಸುತ್ತಿತ್ತು. ದಾವೀದನೇಂಬ ಚಿಕ್ಕ ಹುಡುಗನು ಕಿನ್ನರಿಯನ್ನು ಬಾರಿಸುತ್ತಿದ್ದಾಗ ಆ ದುರಾತ್ಮವು ಅವನನ್ನು ಬಿಟ್ಟು ಹೋಗುತಿತ್ತು.

ಫಿಲಿಷ್ಟಿಯರು ಇಸ್ರಾಯೇಲರಿಗೆ ವಿರುದ್ದವಾಗಿ ಯುದ್ದಕ್ಕೆ ಬಂದರು. ಅವರಲ್ಲಿ ದೈತ್ಯಕಾರದ ಮನುಷ್ಯನು ಬಂದು ಸೌಲನ ಸೈನ್ಯವನ್ನು ಹೆದರಿಸುತ್ತಿದ್ದನು. ಇಸ್ರಾಯೇಲರು ಅವನಿಗೆ ಭಯಪಟ್ಟಿದ್ದರು. ಆಗ ಕುರಿಕಾಯುತ್ತಿದ್ದ ದಾವೀದನೆಂಬ ಹುಡುಗನು ರಣರಂಗಕ್ಕೆ ಬಂದಾಗ ಅವನು ಆ ಗೋಲಾತ್ಯನನ್ನು ಕೊಂದುಹಾಕಿದನು. ಇದರಿಂದ ದಾವೀದನನ್ನು ಜನರು ಹಾಡಿ ಹೊಗಳುತ್ತಿದ್ದರು. ಇದನ್ನು ಕೇಳಿದ ಸೌಲನು ದಾವೀದನನ್ನು ದ್ವೇಷಿಸಿದನು. ಅವನನ್ನು ಕೊಲ್ಲಬೇಕೆಂದು ಅನೇಕ ಸಾರಿ ಈಟಿಯನ್ನು ಒಗೆದನು. ದೇವರ ಕೃಪೆಯಿಂದ ದಾವೀದನು ತಪ್ಪಿಸಿಕೊಂಡನು. ದಾವೀದನನ್ನು ಕೊಲ್ಲುವುದೇ ಸೌಲನ ಗುರಿಯಾಗಿತ್ತು. ದಾವೀದನಿಗೆ ಸೌಲನನ್ನು ಕೊಲ್ಲುವ ಅವಕಾಶ ಸಿಕ್ಕಿದ್ದರೂ ಅವನನ್ನು ಕೊಲ್ಲಲಿಲ್ಲ. ಕೊನೆಗೆದೇವರು ಹೇಳಿದಂತೆ ಸೌಲನ ರಾಜ್ಯವು ಬೇರೆಯವರಿಗೆ (ದಾವೀದ) ಪಾಲಾಗುವ ಸಮಯ ಬಂದಾಗ ಸೌಲನು ಒಂದು ದಿನ ಯುದ್ದದಲ್ಲಿ ತನ್ನ ಕತ್ತಿಯನ್ನು ತಾನೇ ತಿವಿದುಕೊಂಡು ಆತ್ಮಾಹತ್ಯೆಯನ್ನು ಮಾಡಿಕೊಂಡನು.



ದೇವರು ಯಜ್ಞ ಹೋಮಗಳಿಗಿಂತ ವಿಧೇಯತೆಯನ್ನು ಮೆಚ್ಚುತ್ತಾನೆ. ಸೌಲನ ಅವಿಧೇಯತೆಯು ಅವನ ಪತನಕ್ಕೆ ಕಾರಣವಾಯಿತು. ದೇವರು ಹೊಟ್ಟೆಕಿಚ್ಚನ್ನು ದ್ವೇಷಿಸುತ್ತಾನೆ. ಸೌಲನು ದಾವೀದನ ಮೇಲೆ ಹೊಟ್ಟೆಕಿಚ್ಚುಪಟ್ಟು ಅವನನ್ನು ದ್ವೇಷಿಸಿದನು. ದ್ವೇಷಿಸುತ್ತಿದ್ದ ಸೌಲನೇ ನಾಶವಾದನು, ದಾವೀದನು ಅರಸನಾದನು. ದ್ವೇಷವು ನಾಶನಕ್ಕೆ ನಡೆಸುತ್ತದೆ.

*ಹೆಚ್ಚಿನ ವಿವರಗಳಿಗಾಗಿ: 1 ಸಮುವೇಲ: 8–31 ಅಧ್ಯಾಯಗಳು*

## ಪ್ರಶ್ನೆಗಳು

1) ಸಮುವೇಲನು ಸೌಲನನ್ನು ಅರಸನನ್ನಾಗಿ ನೇಮಿಸಿದ ಸಂದರ್ಭವನ್ನು ವಿವರಿಸಿರಿ.

2) ಸೌಲನು ದೇವರಿಗೆ ಹೇಗೆ ಅವಿಧೇಯನಾದನು?

3) ಸೌಲನು ಯಾಕೆ ದಾವೀದನನ್ನು ದ್ವೇಷಿಸುತ್ತಿದ್ದನು?

4) ಸೌಲನ ಅಂತ್ಯ ಸ್ಥಿತಿ ಹೇಗಿತ್ತು?

5) ಸೌಲನ ಜೀವಿತದಿಂದ ನಾವು ಏನನ್ನು ಕಲಿಯುತ್ತೇವೆ?

# ದಾವೀದ



ದಾವೀದನು ಇಸ್ರಾಯೇಲರ ಎರಡನೇ ಅರಸನಾಗಿದ್ದನು. ಕಾಡಿನಲ್ಲಿ ಕೆಲವು ಕುರಿಗಳನ್ನು ಕಾಯುತ್ತಿದ್ದ ದಾವೀದನನ್ನು ದೇವರು ಇಸ್ರಾಯೇಲರಿಗೆ ಅರಸನನ್ನಾಗಿ ಮಾಡಿದ ಚರಿತ್ರೆ ಅಮೋಘವಾದದ್ದು. ದಾವೀದನು ಚಿಕ್ಕ ಪ್ರಾಯದಿಂದಲೇ ದೇವರನ್ನು ಅತಿ ಹೆಚ್ಚಾಗಿ ಪ್ರೀತಿಸುವವನಾಗಿದ್ದನು. ಆತನು ದಿನಕ್ಕೆ 7 ಸಾರಿ ದೇವರನ್ನು ಸ್ತುತಿಸಿ ಪ್ರಾರ್ಥಿಸುತ್ತಿದ್ದನು. ಈತನು ನೂರಾರು ಕೀರ್ತನೆಗಳನ್ನು ರಚಿಸಿದ್ದಾನೆ. ಅವೆಲ್ಲವುಗಳು ಆತನ ಜೀವಿತದ ಅನುಭಗಳಿಂದ ಕೂಡಿವೆ.

ದೇವರು ಕೊಟ್ಟ ಆಜ್ಞೆಯಂತೆ ಸಮುವೇಲನು ದಾವೀದನನ್ನು ಅರಸನನ್ನಾಗಿ ನೇಮಿಸಲು ಇಷಯನ ಮನೆಗೆ ಬಂದಾಗ ದಾವೀದನು ಎಲ್ಲರಿಂದ ತಿರಸ್ಕರಿಸಲ್ಪಟ್ಟವನಾಗಿ ಕಾಡಿನಲ್ಲಿ ಕುರಿಗಳನ್ನು ಮೇಯಿಸುತ್ತಾ ಜೀವಿಸುತ್ತಿದ್ದನು. ಸಮುವೇಲನು ಅವನನ್ನು ಕರೆಯಿಸಿ ಅರಸನನ್ನಾಗಿ ಅಭಿಷೇಕಿಸಿದನು. ಸೌಲನನ್ನು ದೇವರಾತ್ಮವು ಬಿಟ್ಟು ಹೋಗಿದ್ದರಿಂದ ದುರಾತ್ಮವು ಬಂದು ಪೀಡಿಸುತ್ತಿತ್ತು. ದಾವೀದನು ಕಿನ್ನರಿಯನ್ನು ಬಾರಿಸುತ್ತಿದ್ದಾಗ ಆ ದುರಾತ್ಮವು ಬಿಟ್ಟು ಹೋಗುತಿತ್ತು. ಹೀಗೆ ದಾವೀದನು ಸೌಲನ ಸನ್ನಿಧಿಯಲ್ಲಿ ಸೇವೆಮಾಡುತ್ತಿದ್ದನು.

ಫಿಲಿಷ್ಟಿಯರು ಇಸ್ರಾಯೇಲರ ವಿರುದ್ದ ಯುದ್ದಕ್ಕೆ ಬಂದಾಗ ಗೊಲ್ಯಾತನೆಂಬ ರಣಶೂರನು ಇಸ್ರಾಯೇಲರನ್ನು ಹಿಯಾಳಿಸುತ್ತಿದ್ದರಿಂದ ಸೌಲನು ಮತ್ತು ಸೈನಿಕರು ಅವನಿಗೆ ಹೆದರಿದರು. ಹೀಗೆ 40 ದಿನಗಳು ಕಳೆದ ನಂತರ ದಾವೀದನು ತನ್ನ ಸಹೋದರರ ಯೋಗಕ್ಷೇಮವನ್ನು ವಿಚಾರಿಸಲು ಹೋದಾಗ ಆ ಗೊಲ್ಯಾತನು ತಿರುಗಿ ಅದೇ ರೀತಿಯಲ್ಲಿ ಹೀಯಾಳಿಸಿದನು. ಆಗ ದಾವೀದನು ಅರಸನ ಅನುಮತಿಯನ್ನು ಪಡೆದು ಕೇವಲ ಕವಣೆಯನ್ನು ಬೀಸಿ ಒಂದೇ ಕಲ್ಲಿನಿಂದ ಅವನ ತಲೆಗೆ ಹೊಡೆದು ಕೊಂದುಹಾಕಿದನು. ಇಸ್ರಾಯೇಲರಿಗೆ ಜಯವನ್ನು ತಂದನು.



ಸೌಲನು ದಾವೀದನನ್ನು ಸೇನಾಪತಿಯನ್ನಾಗಿ ನೇಮಿಸಿದನು. ದಾವೀದನು ಬರುವಾಗ ಸ್ತ್ರೀಯರು ಹಾಡುತ್ತಾ ಕುಣಿಯುತ್ತಾ– ಸೌಲನು ಸಾವಿರಗಟ್ಟಳೆಯಾಗಿ ಕೊಂದನು, ದಾವೀದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನು ಎಂಬುದಾಗಿ ಹಾಡಿದರು. ಇದರಿಂದ ಸೌಲನು ದಾವೀದನನ್ನು ದ್ವೇಷಿಸಿದನು. ಸೌಲನು ಅವನನ್ನು ಕೊಲ್ಲಲು ಎರಡು ಬಾರಿ ಈಟಿಯನ್ನು ಎಸೆದನು ಆದರೆ ದಾವೀದನು ತಪ್ಪಿಸಿಕೊಂಡನು. ನಂತರ ದಾವೀದನು ಸೌಲನ ಮಗಳಾದ ಮೀಕಳನ್ನು ಮದುವೆಯಾದನು. ದಾವೀದನ ಹೆಸರು ಪ್ರಸಿದ್ದವಾಗಿದ್ದರಿಂದ ಸೌಲನು ಅವನನ್ನು ಕೊಲ್ಲಲ್ಲು ಆಜ್ಞಾಪಿಸಿದನು. ಆದರೆ ದಾವೀದನು ಯೋನಾತನನ ಮೂಲಕ ತಪ್ಪಿಸಿಕೊಂಡು ಹೋದನು. ಸೌಲನ ದೆಸೆಯಿಂದ ದಾವೀದನು ಒಂದು ನಿರ್ಧಿಷ್ಟವಾದ ನೆಲೆಯಿಲ್ಲದೆ ಎಲ್ಲೆಲ್ಲೋ ಅಲೆದಾಡಿದನು. ಕಾಡಿನಲ್ಲಿ ಅಡಗಿಕೊಂಡು ಜೀವಿಸಿದನು. ಒಂದು ಸಾರಿ ಸೌಲನು ದಾವೀದನನ್ನು ಕೊಲ್ಲಲು ಕಾಡಿಗೆ ಬಂದು ಶೌಚಕ್ಕಾಗಿ ಗುಹೆಯೊಳಗೆ ಹೋದಾಗ ದಾವೀದನು ಆ ಗುಹೆಯಲ್ಲಿ ಅಡಗಿಕೊಂಡಿದ್ದನು. ಆಗ ದಾವೀದನಿಗೆ ಅವನ ಸೈನಿಕರು ಸೌಲನ್ನು ಕೊಲ್ಲಲ್ಲು ಹೇಳಿದಾಗ ಅವನು ದೇವರ ಅಭಿಷಕ್ತನನ್ನು ಕೊಲ್ಲುವುದಿಲ್ಲ ಎಂದನು. ಹೀಗೆ ಎರಡು ಸಾರಿ ಸೌಲನನ್ನು ಕೊಲ್ಲುವ ಅವಕಾಶ ಸಿಕ್ಕಿದ್ದರೂ ದಾವೀದನು ಅವನನ್ನು ಕೊಲ್ಲಲಿಲ್ಲ. ಆದರೆ ಸೌಲನು ಫಿಲಿಷ್ಟಿಯರೊಂದಿಗೆ ಯುದ್ದಮಾಡುತ್ತಿರುವಾಗ ತಾನೇ ಆತ್ಮಾಹತ್ಯೆ ಮಾಡಿಕೊಂಡನು.

ಇಸ್ರಾಯೇಲರು ದಾವೀದನನ್ನು ಅರಸನನ್ನಾಗಿ ನೇಮಿಸಿದರು. ದೇವರ ಕೃಪೆಯಿಂದ ಸುತ್ತಲಿನ ವೈರಿಗಳ ಭಯ ತಪ್ಪಿಹೋಯಿತು. ದಾವೀದನು ಫಿಲಿಷ್ಟಿಯರ ವಶದಲ್ಲಿದ್ದ ದೇವರ ಮಂಜೂಷವನ್ನು ಇಸ್ರಾಯೇಲ ದೇಶಕ್ಕೆ ತಂದನು. ದೇವರು ದಾವೀದನ ಸಿಂಹಾಸನವು ಶಾಶ್ವತವಾಗಿ ನಿಲ್ಲುತದೆಂದು ವಾಗ್ದಾನ ಮಾಡಿದನು.

ದಾವೀದನು ಉರಿಯನ ಹೆಂಡತಿಯಾದ ಬೆತ್ಶೆಬಳೊಂದಿಗೆ ಪಾಪಮಾಡಿ ಉರಿಯನನ್ನು ಕೊಲ್ಲಿಸಿದನು. ದೇವರು ಈ ಪಾಪವನ್ನು ನಾತಾನನ ಮೂಲಕ ಬಹಿರಂಗ ಪಡಿಸಿದಾಗ ದಾವೀದನು ಪಶ್ಚತ್ತಾಫ ಪಟ್ಟು ಗೋಳಾಡಿದನು. ದೇವರು ಅವನನ್ನು ಕ್ಷಮಿಸಿ ಸೋಲೊಮೋನನೆಂಬ ಮಗನನ್ನು ಕೊಟ್ಟನು.

ದೀನರ ಸಂಗಡ ದೇವರು ಇರುತ್ತಾನೆ. ದಾವೀದನು ತನ್ನ ಕುಟುಂಬದವರಿಂದ ತಿರಸ್ಕರಿಸಲ್ಪಟ್ಟಿದ್ದನು, ಸೌಲನಿಂದ ದ್ವೇಷಿಸಲ್ಪಟ್ಟಿದ್ದನು, ಆದರೆ ದೇವರನ್ನು ಹುಡುಕುತ್ತಾ ದೀನನಾಗಿ ಜೀವಿಸಿದ್ದರಿಂದ ದೇವರು ಅವನನ್ನು ಮೇಲಕ್ಕೆ ತಂದನು. ದಾವೀದನು ದೇವರ ಹೃದಯಕ್ಕೊಪ್ಪುವ ಮನುಷ್ಯನಾಗಿದ್ದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 1 ಸಮು: 16–31, 2 ಸಮು: 1–14, 1 ಅರಸು: 1–2, 1 ಪೂರ್ವ: 10–29 ಅಧ್ಯಾಯಗಳು.*

## ಪ್ರಶ್ನೆಗಳು

1) ದಾವೀದನ ಬಾಲ್ಯ ಜೀವನವನ್ನು ವಿವರಿಸಿರಿ.

2) ದಾವೀದ ಮತ್ತು ಗೊಲ್ಯಾತರ ನಡುವಿನ ಯುದ್ದದ ಚಿತ್ರಣವನ್ನು ವಿವರಿಸಿರಿ.


3) ಸೌಲನ ಬಗ್ಗೆ ದಾವೀದನ ಅಭಿಪ್ರಾಯ ಏನಾಗಿತ್ತು?

4) ದಾವೀದನ ಜೀವಿತದಿಂದ ನಾವು ಏನನ್ನು ಕಲಿಯುತ್ತೇವೆ?

# ಸೊಲೋಮೋನ

ಸೊಲೊಮೋನನು ಇಸ್ರಾಯೇಲರ ಅರಸರಲ್ಲಿಯೇ ಅತ್ಯಂತ ಜ್ಞಾನಿಯಾದ ಅರಸನಾಗಿದ್ದಾನೆ. ಈತನು ಬಹಳ ವೈಭವವಾಗಿ ಜೀವಿಸಿದನು. ಈತನು ದೇವರ ಆಲಯವನ್ನು ಕಟ್ಟಿದನು. ಸೊಲೊಮೋನನು ದಾವೀದನಿಗೆ ಊರಿಯನಹೆಂಡತಿಯಾದ ಬೆತ್ಶೆಬಳಲ್ಲಿ ಹುಟ್ಟಿದ ಮಗನಾಗಿದ್ದಾನೆ. ಈತನ ಮೂಲಕ ಇಸ್ರಾಯೇಲ ದೇಶವು ಬಹಳ ಸಂಮೃದ್ಧಿಯಾಗಿ ಸಮಾದಾನವಾಗಿತ್ತು.

ದಾವೀದನು ಮುದುಕನಾಗಿ ಅವಸಾನಕಾಲ ಹತ್ತಿರವಾಗಿದ್ದಾಗ ಸೊಲೊಮೋನನಿಗೆ– ನೀನು ದೇವರ ಆಜ್ಞೆಗಳನ್ನು ಕೈಗೊಂಡು ನಡೆ, ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದಿರುವ ಕಟ್ಟಳೆಗಳನ್ನು ಪಾಲಿಸು, ಆಗ ನೀನು ಏನೇ ಮಾಡಿದರೂ, ಎಲ್ಲಿಗೆ ಹೋದರೂ, ಕೃತಾರ್ಥನಾಗುವಿ ಎಂದು ಹೇಳಿ ಆಶೀರ್ವಧಿಸಿದನು ಮತ್ತು ಮರಣ ಹೊಂದಿದನು. ನಂತರ ಸೊಲೊಮೋನನು ರಾಜ್ಯಾಧಿಕಾರವನ್ನು ವಹಿಸಿಕೊಂಡನು. ಅವನ ರಾಜ್ಯವು ಬಹಳವಾಗಿ ಬಲಗೊಂಡಿತು. ಅವನು ಮೊದಲು ತನ್ನ ರಾಜ್ಯದಲ್ಲಿರುವ ರಾಜಕಂಟಕರನ್ನು ಶಿಕ್ಷಿಸಿದನು. ಅವನ ಅಣ್ಣನಾದ ಅದೋನಿಯನನ್ನು ಮತ್ತು ಅವನ ಪಕ್ಷವನ್ನು ಹಿಡಿದಿದ್ದ ಯೊವಾಬನನ್ನು ಕೊಲ್ಲಿಸಿದನು. ಇದರಿಂದ ಸೊಲೊಮೋನನ ರಾಜ್ಯ ಸ್ಥಿರವಾಯಿತು.



ಸೊಲೊಮೋನನು ದೇವರಿಗೆ ಯಜ್ಞಗಳನ್ನು ಸಮರ್ಪಿಸಿದಾಗ ದೇವರು ಅವನ ಕನಿಸಿನಲ್ಲಿ ಕಾಣಿಸಿಕೊಂಡು– ನಿನಗೆ ಯಾವ ವರ ಬೇಕು ಕೇಳಿಕೊ ಎಂದಾಗ ಸೊಲೊಮೋನನು ದೇವರಿಗೆ– ನಿನ್ನ ಜನರನ್ನು ಆಳುವುದಕ್ಕೆ, ನ್ಯಾಯಾನ್ಯಾಯಗಳನ್ನು ಕಂಡುಹಿಡಿಯುವ ಜ್ಞಾನವನ್ನು ಕೊಡು ಎಂದು ಕೇಳಿದನು. ದೇವರು ಅವನ ಪ್ರಾರ್ಥನೆಯನ್ನು ಮೆಚ್ಚಿ ಅವನಿಗೆ ಜ್ಞಾನವನ್ನು ಕೊಟ್ಟನು. ಸೊಲೊಮೋನನಿಗಿಂತ ಮುಂಚೆಯಾಗಲಿ ಮತ್ತು ನಂತರದಲ್ಲಾಗಲಿ ಅವನಿಗೆ ಸಮಾನನಾದ ಜ್ಞಾನಿಯು ಇರಲಿಲ್ಲ. ದೇವರು ಅವನಿಗೆ ಜ್ಞಾನದ ಜೊತೆಗೆ ಐಶ್ವರ್ಯವನ್ನು ಮತ್ತು ಘನತೆಯನ್ನು ಅನುಗ್ರಹಿಸಿದನು.

ಇಸ್ರಾಯೇಲರು ಸಮುದ್ರ ತೀರದ ಉಸಿಬಿನಷ್ಟು ಅಸಂಖ್ಯವಾಗಿದ್ದರು. ಅವರು ಅನ್ನಪಾನಗಳಲ್ಲಿ ತೃಪ್ತರಾಗಿ ಸಂತೋಷವಾಗಿದ್ದರು. ಸೊಲೊಮೋನನು ಯುಫ್ರೆಟೀಸ್ ನದಿಯಿಂದ ಫಿಲಿಷ್ಠಿಯರ ಮತ್ತು ಐಗುಪ್ತ ದೇಶಗಳ ವರೆಗೂ ಇರುವ ಎಲ್ಲಾ ರಾಜ್ಯಗಳನ್ನು ಆಳುತ್ತಿದ್ದನು. ಅವರು ಅವನಿಗೆ ಅಧೀನರಾಗಿ ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಎಲ್ಲಾ ಜನಾಂಗಗಳಲ್ಲಿಯೂ ಸೊಲೊಮೋನನ ಜ್ಞಾನ ವಿಶೇಷತೆಯನ್ನು ಕೇಳಿದ ಅರಸರಲ್ಲಿಯೂ ಅನೇಕರು ಅವನಿಂದ ಜ್ಞಾನವಾಕ್ಯಗಳನ್ನು ಕೇಳಲು ಬರುತ್ತಿದ್ದರು.

ಸೊಲೊಮೋನನು ದೇವಾಲಯವನ್ನು ಕಟ್ಟಲು ತಿರ್ಮಾನಿಸಿ ಅದನ್ನು ಕೇವಲ 7 ವರ್ಷಗಳಲ್ಲಿ ಕಟ್ಟಿ ಮುಗಿಸಿದನು. ನಂತರ ದಾವೀದನ ನಗರವಾದ ಚೀಯೋನಿನಿಂದ ದೇವರ ಒಡಂಬಡಿಕೆಯ ಮಂಜೂಷವನ್ನು ಯೆರುಸಲೇಮಿಗೆ ತರಿಸಿದನು. ಯಾಜಕರು ಮಂಜೂಷವನ್ನು ದೇವಾಲಯದ ಅತಿಪರಿಶುದ್ಧ ಸ್ಥಳದಲ್ಲಿಟ್ಟಾಗ ದೇವರ ಮಹಿಮೆ ಆಲಯವನ್ನು ತುಂಬಿಕೊಂಡಿತು.



ಸೊಲೊಮೋನನು ತನ್ನ ಜನರನ್ನು ಮತ್ತು ದೇಶವನ್ನು ಆಶೀರ್ವದಿಸುವಂತೆ ಪ್ರಾರ್ಥಿಸಿದನು. ದೇವರು ಅವನ ಕನಸಿನಲ್ಲಿ ಕಾಣಿಸಿಕೊಂಡು– ನೀನು ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ಇಸ್ರಾಯೇಲ ಸಿಂಹಾಸನದ ಮೇಲೆ ನಿನ್ನ ಸಂತಾನವು ಸ್ಥಿರವಾಗಿ ಕುಳಿತುಕೊಳ್ಳುವಂತೆ ಮಾಡುವೆನು ಎಂದು ವಾಗ್ದಾನ ಮಾಡಿದನು.

ಸೊಲೊಮೋನನು ಅನ್ಯಸ್ತ್ರೀಯರನ್ನು 700 ಮಂದಿ ಪತ್ನಿಯರನ್ನಾಗಿ 300 ಮಂದಿ ಉಪಪತ್ನಿಯರನ್ನಾಗಿ ಮಾಡಿಕೊಂಡನು. ಇವರು ಅವನ ಮನಸನ್ನು ಕೆಡಿಸಿಬಿಟ್ಟರು. ತಮ್ಮ ದೇವರುಗಳ ಕಡೆಗೆ ತಿರುಗಿಸಿಕೊಂಡರು. ಇದರಿಂದ ಅವನು ದೇವರಿಗೆ ದ್ರೋಹಿಯಾದನು. ತನ್ನ ಯತಾರ್ಥಭಕ್ತಿಯನ್ನು ಕಳೆದುಕೊಂಡನು. ದೇವರು ಅವನಿಗೆ

ಅವನ ರಾಜ್ಯವನ್ನು ಕಿತ್ತುಕೊಂಡು ಬೇರೆಯವರಿಗೆ ಕೊಡುವುದಾಗಿ ತಿಳಿಸಿದನು. ಅದದ್ದರಿಂದ ಸೊಲೊಮೊನನ ನಂತರ ಇಸ್ರಾಯೇಲ್ ರಾಜ್ಯವು ಎರಡು ಭಾಗವಾಯಿತು. ಸೊಲೊಮೋನನು ಎಷ್ಟೇ ಜ್ಞಾನವನ್ನು ಹೊಂದಿದ್ದರೂ ದೇವರ ಮುಂದೆ ಒಳ್ಳೆಯ ಸಾಕ್ಷಿಯಾಗಿ ಜೀವಿಸಲಿಲ್ಲ. ದೇವರು ನಮ್ಮ ಜ್ಞಾನಕ್ಕಿಂತ ಜೀವಿತವನ್ನು ಮೆಚ್ಚುವನಾಗಿದ್ದಾನೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 1 ಅರಸು: 1–11 ಅಧ್ಯಾಯಗಳು*

## ಪ್ರಶ್ನೆಗಳು

1) ಸೊಲೊಮೋನನು ದೇವರಿಂದ ಏನನ್ನು ಕೇಳಿಕೊಂಡನು?

2) ಸೊಲೊಮೋನನು ದೇವಾಲಯವನ್ನು ಕಟ್ಟಿಸಿದ ರೀತಿಯನ್ನು ವಿವರಿಸಿರಿ.

3) ಸೊಲೊಮೋನನು ಯಾಕೆ ದೇವರಿಗೆ ದ್ರೋಹಿಯಾದನು?

4) ಸೊಲೊಮೋನನ ಜೀವಿತದಿಂದ ನಾವು ಏನನ್ನು ಕಲಿಯುತ್ತೇವೆ?


# ರೆಹೆಬ್ಬಾಮ–ಯರೊಬ್ಬಾಮ

ದೇವರು ಸೊಲೊಮೋನನಿಗೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆದರೆ ನಿನ್ನ ಸಂತತಿಯು ಇಸ್ರಾಯೇಲ್ ಸಿಂಹಾಸನದ ಮೇಲೆ ಸ್ಥಿರವಾಗಿರುತ್ತದೆ ಇಲ್ಲದಿದ್ದರೆ ನಿನ್ನ ರಾಜ್ಯವು ವಿಭಾಗವಾಗುವುದು ಎಂಬುದಾಗಿ ಹೇಳಿದ್ದನು. ಸೊಲೊಮೋನನು ಅವಿಧೇಯನಾಗಿದ್ದರಿಂದ ದೇವರು ಅವನ ಮಗನ ಕಾಲದಲ್ಲಿ ರಾಜ್ಯವನ್ನು ಎರಡು ಭಾಗವಾಗಿ ಮಾಡಿದನು. ಒಂದು ಭಾಗಕ್ಕೆ ಯೆಹೂದವೆಂದು ಮತ್ತೊಂದು ಭಾಗಕ್ಕೆ ಇಸ್ರಾಯೇಲ್ ಎಂದು ಹೆಸರಾಯಿತು.



ಸೊಲೊಮೋನನು ಸತ್ತ ನಂತರ ಅವನ ಮಗನಾದ ರೆಹೆಬ್ಬಾಮನು ಅರಸನಾದನು. ಸೊಲೊಮೋನನು ತನ್ನ ರಾಜ್ಯವು ಯಾರೊಬ್ಬಾಮನ ಪಾಲಾಗುವುದೆಂದು ತಿಳಿದು ಅವನನ್ನು ಕೊಲ್ಲಲು ಬಯಸಿದಾಗ ಯಾರೊಬ್ಬಾಮನು ಐಗುಪ್ತಕ್ಕೆ ಓಡಿಹೋಗಿದ್ದನು. ರೆಹಬ್ಬಾಮನು ಅರಸನಾದಾಗ ಸ್ವದೇಶಕ್ಕೆ ಬಂದನು. ಯಾರೊಬ್ಬಾಮನು ಇಸ್ರಾಯೇಲರ ಸಮೇತವಾಗಿ ರೆಹಬ್ಬಾಮನ ಹತ್ತಿರ ಬಂದು– ನಿಮ್ಮ ತಂದೆಯು ನೇಮಿಸಿದ ಬಿಟ್ಟಿಕೆಲಸವನ್ನು ನೀನು ಕಡಿಮೆಮಾಡಿ ನಮ್ಮ ಮೇಲಿರುವ ಭಾರವಾದ ನೊಗವನ್ನು ಹಗುರಮಾಡು ಎಂದು ಕೇಳಿದರು. ಆದರೆ ರೆಹಬ್ಬಾಮನು ಅವರಿಗೆ– ನನ್ನ ತಂದೆಯು ನಿಮ್ಮ ಮೇಲೆ ಹಾಕಿದ್ದ ಭಾರಕ್ಕಿಂತ ಹೆಚ್ಚಿನ ಭಾರವನ್ನು ಹಾಕುತ್ತೇನೆ, ನನ್ನ ತಂದೆಯು ನಿಮ್ಮನ್ನು ಬಾರುಕೋಲುಗಳಿಂದ ಹೊಡೆದರೆ ನಾನು ಮುಳ್ಳುಕೊರಡೆಗಳಿಂದ ಹೊಡೆಯುತ್ತೇನೆಂದು ಹೇಳಿದನು. ಆಗ ಜನರು ರೆಹಬ್ಬಾಮಾನು ತಮ್ಮನ್ನು ಲಕ್ಷಿಸಲಿಲ್ಲವೆಂದು ತಿಳಿದು ಯಾರೊಬ್ಬಾಮನನ್ನು ತಮ್ಮ ಅರಸನನ್ನಾಗಿ ನೇಮಿಸಿಕೊಂಡರು. ಯೆಹೂದಕುಲವು ಮಾತ್ರ ರೆಹಬ್ಬಾಮನ ಆಧೀನದಲ್ಲಿತ್ತು, ಉಳಿದ ಹತ್ತು ಕುಲಗಳು ಯಾರೊಬ್ಬಾಮನ ಆಧೀನದಲ್ಲಿದ್ದವು. ಹೀಗೆ ಒಂದೇ ರಾಜ್ಯವಾಗಿದ್ದ ಇಸ್ರಾಯೇಲ್ ಎರಡು ಭಾಗವಾಯಿತು. ಇಸ್ರಾಯೇಲ್ ರಾಜ್ಯ(ಉತ್ತರರಾಜ್ಯ)ಕ್ಕೆ ಸಮಾರ್ಯ ಪಟ್ಟಣವು ರಾಜಧಾನಿಯಾಯಿತು, ಯೇಹೂದರಾಜ್ಯ(ದಕ್ಷಿಣರಾಜ್ಯ)ಕ್ಕೆ ಯೆರುಸಲೇಮ್ ಪಟ್ಟಣವು ರಾಜಧಾನಿಯಾಯಿತು.

ದೇವಾಲಯವು ಯೆರುಸಲೇಮಿನಲ್ಲಿದ್ದದ್ದರಿಂದ ಜನರು ಯಜ್ಞಾರ್ಪಣೆಗಾಗಿ ಅಲ್ಲಿಗೆ ಹೋಗುತ್ತಿದ್ದರು. ಜನರು ಯೆರುಸಲೇಮಿಗೆ ಹೋಗುವುದಾದರೆ ಅವರ ಮನಸ್ಸು ರೆಹಬ್ಬಾಮನ ಕಡೆಗೆ ತಿರುಗಿಕೊಂಡು ನನ್ನನ್ನು ಕೊಂದಾರು ಎಂದುಕೊಂಡ ಯಾರೊಬ್ಬಾಮನು ಎರಡು ಬಸವನ ಮೂರ್ತಿಗಳನ್ನು ಮಾಡಿಸಿ ಇಸ್ರಾಯೇಲ್ ಜನರಿಗೆ– ಇವುಗಳೇ ನಿಮ್ಮನ್ನು ಐಗುಪ್ತದಿಂದ ಕರೆತಂದ ದೇವರುಗಳು, ನೀವು ಯೆರುಸಲೇಮಿಗೆ ಹೋಗಬೇಡಿ ಎಂದು ಹೇಳಿ ಅವುಗಳಲ್ಲಿ ಒಂದನ್ನು ಬೆತೇಲಿನಲ್ಲಿ ಮತ್ತೊಂದನ್ನು ದಾನ್‌ನಲ್ಲಿ ಪ್ರತಿಷ್ಠಿಸಿದನು. ಇದಲ್ಲದೆ ಕನಿಷ್ಠರಾದ ಜನರನ್ನು ಯಾಜಕರನ್ನಾಗಿ ನೇಮಿಸಿದನು. ಮೂರ್ತಿಗಳಿಗೆ ವೇದಿಯ ಮೇಲೆ ಯಜ್ಞಮಾಡಿದನು. ಇದು ಪಾಪಕ್ಕೆ ಕಾರಣವಾಗಿ ಯಾರೊಬ್ಬಾಮನ ಕುಟುಂಬವು ನಾಶವಾಯಿತು.



ಯೆಹೂದದ ಅರಸನಾದ ರೆಹಬ್ಬಾಮನು ಮತ್ತು ಅವನ ಜನರು ಸಹ ದೇವರ ಧರ್ಮೋಪದೇಶವನ್ನು ಬಿಟ್ಟುಬಿಟ್ಟರು. ಇದರಿಂದ ದೇವರು ಅವರನ್ನು ಐಗುಪ್ತದ ಅರಸನಾದ ಶೀಶಕನ ಕೈಗೆ ಒಪ್ಪಿಸಿದನು. ನಂತರ ರೆಹಬ್ಬಾಮನು ದೇವರ ಮುಂದೆ ತಗ್ಗಿಸಿಕೊಂಡದ್ದರಿಂದ ದೇವರು ಅವನನ್ನು ನಾಶಮಾಡಲಿಲ್ಲ. ಇವನು 17 ವರ್ಷ ಯೆರುಸಲೇಮಿನಲ್ಲಿ ಆಳ್ವಿಕೆಮಾಡಿದನು.

ಮನುಷ್ಯನ ಅವಿಧೇಯತೆಯು ದೇವರ ಕೋಪವನ್ನು ತಲಾತಲಾಂತರವರೆಗೂ ತರುತ್ತದೆ. ಸೊಲೊಮೋನನು ದೇವರಿಗೆ ಅವಿಧೇಯನಾಗಿದ್ದರಿಂದ ಸಂಮೃದ್ಧಿ, ವೈಭವದಿಂದ ಕೂಡಿದ್ದ ಅವನ ರಾಜ್ಯವು ನಂತರ ಎರಡು ಭಾಗವಾಗಿ ಛಿದ್ರವಾಯಿತು. ಅವೆರಡು ರಾಜ್ಯಗಳಲ್ಲಿ ಸಮಾದಾನವೇ ಇರಲಿಲ್ಲ. ದೇವರ ಕೋಪಕ್ಕೆ ಗುರಿಯಾಗಿದ್ದವು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 1ಅರಸು: 12–14, 2ಪೂರ್ವ: 10–12 ಅಧ್ಯಾಯಗಳು.*

## ಪ್ರಶ್ನೆಗಳು

1) ಇಸ್ರಾಯೇಲ್ ರಾಜ್ಯವು ಎರಡು ಭಾಗವಾಗಲು ಕಾರಣವೇನು?

2) ಯಾರೊಬ್ಬಾಮನು ಹೇಗೆ ಇಸ್ರಾಯೇಲರ ಅರಸನಾದನು?

3) ಯಾರೊಬ್ಬಾಮನ ವ್ಯಕ್ತಿತ್ವದ ಕುರಿತು ನಿನ್ನ ಅಭಿಪ್ರಾಯವೇನು?

4) ರೆಹಬ್ಬಾಮನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಆಸ

ಆಸನು ಯೆಹೂದ ರಾಜ್ಯದ ಅರಸನಾಗಿದ್ದನು. ಇವನು ದೇವರ ದೃಷ್ಟಿಯಲ್ಲಿ ಒಳ್ಳೆಯವನಾಗಿಯೂ ನೀತಿವಂತನಾಗಿಯೂ ನಡೆದನು. ಇವನು ಅನ್ಯದೇವತೆಗಳ ಯಜ್ಞವೇದಿಗಳನ್ನು ಪೂಜಾಸ್ಥಳಗಳನ್ನು ತೆಗೆದುಹಾಕಿ ಕಲ್ಲುಕಂಬಗಳನ್ನು ಒಡೆಸಿ ಅಶೇರ ವಿಗ್ರಹಸ್ತಂಬಗಳನ್ನು ಕಡಿಸಿಬಿಟ್ಟು ಯೆಹೂದ್ಯರಿಗೆ ಅವರು ತಮ್ಮ ಪಿತೃಗಳ ದೇವರನ್ನು ಆಶ್ರಯಿಸಿಕೊಳ್ಳುವಂತೆ ಮತ್ತು ಧರ್ಮಶಾಸ್ತ್ರದ ನಿಯಮಗಳನ್ನು ಕೈಗೊಳ್ಳುವಂತೆ ಆಜ್ಞಾಪಿಸಿದನು. ದೇವರ ಅನುಗ್ರಹದಿಂದ ಶತೃಭಯ ತಪ್ಪಿ ಯಾವ ಯುದ್ಧವು ಇಲ್ಲದೆ ದೇಶದಲ್ಲಿ ಸಮಾದಾನವಿದ್ದದ್ದರಿಂದ ಇವನು ಯೆಹೂದದಲ್ಲಿ ಕೋಟೆಕೊತ್ತಲುಗಳನ್ನು, ಪಟ್ಟಣಗಳನ್ನು ಕಟ್ಟಿಸಿದನು.

ಆಜರ್ಯನು ಆಸನಿಗೆ– ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನು ನಿಮ್ಮೊಂದಿಗೆ ಇರುವನು. ನೀವು ಆತನನ್ನು ಹುಡುಕಿದರೆ ನಿಮಗೆ ಸಿಕ್ಕುವನು, ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟುಬಿಡುವನು ಎಂದು ಹೇಳಿದನು. ಆಜರ್ಯನ ಮಾತುಗಳನ್ನು ಕೇಳಿ ಧೈರ್ಯಗೊಂಡ ಆಸನು ಯೆಹೂದ ಬೆನ್ಯಾಮಿನ್ ಪ್ರಾಂತ್ಯಗಳಲ್ಲಿಯೂ, ಎಫ್ರಾಯಿಮ್ ಪರ್ವತ ಪ್ರದೇಶದ ಪಟ್ಟಣಗಳಲ್ಲಿದ್ದ ಅಸಹ್ಯ ಪ್ರತಿಮೆಗಳನ್ನು ತೆಗೆದುಹಾಕಿ ಯೆಹೋವನ ಆಲಯದ ಯಜ್ಞವೇದಿಯನ್ನು ಜೀರ್ಣೋದ್ಧಾರ ಮಾಡಿದನು. ಎಲ್ಲಾ ಯೆಹೂದ, ಬೆನ್ಯಾಮಿನ್, ಎಫ್ರಾಯಿಮ್, ಮನಸ್ಸೆ, ಸಿಮೆಯೋನ್ ಕುಲಗಳವರನ್ನು ಯೆರುಸಲೇಮಿಗೆ ಕರೆಯಿಸಿ ಯಜ್ಞವನ್ನರ್ಪಿಸಿದನು. ಇದಲ್ಲದೆ ತಾವು ಪೂರ್ಣಹೃದಯದಿಂದಲೂ ಪೂರ್ಣಪ್ರಾಣದಿಂದಲೂ ತಮ್ಮ ಪಿತೃಗಳ ದೇವರಾದ ಯೆಹೋವನ ಭಕ್ತರಾಗಿರುವೆವೆಂದೂ ಯೆಹೋವನ ಭಕ್ತಿಯನ್ನು ಬಿಟ್ಟವರು ಯಾರೇ ಆಗಿರಲಿ ಅವರನ್ನು ಕೊಲ್ಲುವೆವು ಎಂದೂ ಯೆಹೋವನಿಗೆ ಪ್ರಮಾಣಮಾಡಿದರು. ಈ ಪ್ರಮಾಣದ ನಿಮಿತ್ತ ಯೆಹೂದ್ಯರೆಲ್ಲರಿಗೆಲ್ಲ ಬಹಳ ಸಂತೋಷವಾಯಿತು. ದೇವರು ಅವರಿಗೆ ಪ್ರಸನ್ನನಾಗಿ ಎಲ್ಲಾ ಕಡೆಗಳಲ್ಲಿಯೂ ಸಮಾದಾನವನ್ನು ಅನುಗ್ರಹಿಸಿದನು.

ಇಸ್ರಾಯೇಲರ ಅರಸನಾದ ಬಾಷಾನನು ಯೆಹೂದ್ಯರಿಗೆ ವಿರುದ್ಧವಾಗಿ ಯುದ್ಧಕ್ಕೆ ಬಂದು ಯಾರೂ ಆಸನ ಬಳಿಗೆ ಹೋಗಿಬರುವುದಕ್ಕಾಗದಂತೆ ರಾಮಕೋಟೆಯನ್ನು ಕಟ್ಟಿಸಿದನು. ಆಗ ಆಸನು ಅರಾಮ್ಯದ ಅರಸನಾದ ಬೆನ್ಹದನೋಂದಿಗೆ ಒಡಂಬಡಿಕೆಯನ್ನು ಮಾಡಿಕೊಂಡು ಬಾಷಾನನು ತನ್ನನ್ನು ಬಿಟ್ಟುಹೋಗುವಂತೆ ಮಾಡೆಂದು ಕೇಳಿದನು. ಬೆನ್ಹದನು ಬಾಷಾನನ ಪಟ್ಟಣಗಳ ಮೇಲೆ ದಾಳಿಮಾಡಿದಾಗ ಬಾಷಾನನು ರಾಮಕೋಟೆಯನ್ನು ಕಟ್ಟಿಸುವುದನ್ನು ಬಿಟ್ಟು ಹಿಂದಿರುಗಿದನು. ಆಗ ಆಸನು ರಾಮಕೋಟೆಯನ್ನು ಕಟ್ಟಲು ಬಾಷಾನನು ತರಿಸಿದ್ದ ಕಲ್ಲು ಮರಗಳಿಂದ ಗೆಬ, ಮಚ್ಚ ಎಂಬ ಪಟ್ಟಣಗಳನ್ನು ಭದ್ರಪಡಿಸಿದನು.

ಆ ಕಾಲದಲ್ಲಿ ದರ್ಶಿಯಾದ ಹನಾನಿಯು ಆಸನಿಗೆ– ನೀನು ನಿನ್ನ ದೇವರಾದ ಯೆಹೋವನನ್ನು ಆತುಕೊಳ್ಳದೆ ಅರಾಮ್ಯ ಅರಸನ ಮೇಲೆ ಆತುಕೊಂಡಿದ್ದರಿಂದ ಅರಾಮ್‍ರಾಜ್ಯವು ನಿನ್ನ ಕೈಗೆ ಬೀಳದಂತೆ ತಪ್ಪಿಸಿಕೊಂಡಿತು, ನೀನು ಬುದ್ಧಿಹೀನನಾಗಿ ನಡೆದುಕೊಂಡೆ, ಇಂದಿನಿಂದ ನಿನಗೆ ಯುದ್ಧಗಳು ಇರುವವು ಎಂದನು. ಆಗ ಆಸನು ಅವನನ್ನು ಸೆರೆಮನೆಗೆ ಹಾಕಿಸಿದನು. ಇದಲ್ಲದೆ ಜನರಲ್ಲಿ ಕೆಲವರನ್ನು ಪೀಡಿಸಿದನು. ಆಸನ ಆಳ್ವಿಕೆಯ ಕೊನೆಯ ವರ್ಷದಲ್ಲಿ ಅವನ ಕಾಲುಗಳಿಗೆ ಬಹುಕಠಿಣವಾದ ರೋಗ ಬಂದಿತು. ಆಗ ಅವನು ದೇವರ ಸಹಾಯವನ್ನು ಕೇಳದೆ ವೈದ್ಯರ ಸಹಾಯವನ್ನು ಕೋರಿದನು.

ಆಸನಿಗಿದ್ದ ದೇವರ ಮೇಲಿನ ಪ್ರೀತಿಯು ದಿನ ಕಳೆದಂತೆ ಕುಂದಿಹೋಯಿತು. ದೇವರಿಗಾಗಿ ವೈರಾಗ್ಯದಿಂದ ಜೀವಿಸುತ್ತಿದ್ದ ಅವನು ಕೊನೆಯಲ್ಲಿ ದೇವರ ಮೇಲೆ ಆತುಕೊಳ್ಳುವುದನ್ನು ಬಿಟ್ಟುಬಿಟ್ಟನು. ದೇವರ ಮೆಲಿನ ಪ್ರೀತಿಯು ತಣ್ಣಗಾಗಬಾರದು, ಅದು ಯಾವಾಗಲೂ ಉರಿಯುತ್ತಿರಬೇಕು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಪೂರ್ವ: 14–16 ಅಧ್ಯಾಯಗಳು*

## ಪ್ರಶ್ನೆಗಳು

1) ಆಸನು ಪ್ರಾರಂಭದಲ್ಲಿ ದೇವರಿಗಾಗಿ ಹೇಗೆ ಜೀವಿಸಿದನು?

2) ಯೆಹೂದ್ಯರು ಮತ್ತು ಇತರ ಕುಲಗಳವರು ದೇವರಿಗೆ ಏನೆಂದು ಪ್ರಮಾಣಮಾಡಿದರು?


3) ಆಸನು ಅರಾಮ್ಯದ ಅರಸನನ್ನು ಆತುಕೊಂಡಿದ್ದರಿಂದ ಹನಾನಿಯನು ಅವನನ್ನು ಹೇಗೆ ಗದರಿಸಿದನು?

4) ಆಸನ ಕೊನೆಯ ಜೀವನ ಹೇಗಿತ್ತು?

5) ಆಸನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಯೆಹೋಷಾಫಾಟ

ಯೆಹೋಷಾಫಾಟನು ಯೆಹೂದ ರಾಜ್ಯದ ಅರಸನಾಗಿದ್ದನು. ಇವನು ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುತ್ತಿದ್ದನು. ಇವನು ತನ್ನ ಪೂರ್ವಿಕನಾದ ದಾವೀದನ ನಡೆತೆಯ ಪ್ರಕಾರ ನಡೆಯುತ್ತಿದ್ದರಿಂದ ದೇವರು ಇವನ ಸಂಗಡವಿದ್ದು ಇವನ ಅಧಿಕಾರವನ್ನು ಸ್ಥಿರಪಡಿಸಿದನು. ಯೆಹೂದ್ಯರೆಲ್ಲರೂ ಕಾಣಿಕೆಗಳನ್ನು ಕೊಡುತ್ತಿದ್ದರಿಂದ ಅವನ ಧನ ಘನತೆಗಳು ಹೆಚ್ಚಾಗಿದ್ದವು.



ಯೆಹೋಷಾಫಾಟನು ಕೆಲವು ಯಾಜಕರನ್ನು ನೇಮಿಸಿ ಧರ್ಮೋಪದೇಶವನ್ನು ಮಾಡುವುದಕ್ಕೋಸ್ಕರ ಯೆಹೂದ ರಾಜ್ಯದ ಎಲ್ಲಾ ಪಟ್ಟಣಗಳಿಗೆ ಕಳುಹಿಸಿದನು. ಇವರು ದೇಶದೆಲ್ಲೆಲ್ಲಾ ಸಂಚಾರಮಾಡಿ ಜನರಿಗೆ ಧರ್ಮಶಾಸ್ತ್ರವನ್ನು ಭೋಧಿಸಿದರು. ಯೆಹೂದದ ಸುತ್ತಲಿನ ರಾಜ್ಯಗಳವರಿಗೆ ಯೆಹೋವನ ಭಯವಿದ್ದದ್ದರಿಂದ ಅವರು ಯೆಹೋಷಾಫಾಟನೊಂದಿಗೆ ಯುದ್ದಕ್ಕೆ ಬರಲಿಲ್ಲ.

ಯೆಹೋಷಾಫಾಟನು ಯೆರುಸಲೇಮಿನಲ್ಲಿ ವಾಸವಾಗಿದ್ದು ಮತ್ತೊಮ್ಮೆ ದೇಶದಲ್ಲೆಲ್ಲಾ ಸಂಚರಿಸಿ ತನ್ನ ಪ್ರಜೆಗಳನ್ನು ಅವರ ದೇವರಾದ ಯೆಹೋವನ ಕಡೆಗೆ ತಿರುಗಿಸಿದನು. ಅವನು ಯೆಹೂದ ದೇಶದ ಪ್ರತಿಯೊಂದು ಪಟ್ಟಣಗಳಲ್ಲಿ ನ್ಯಾಯಾಧಿಪತಿಗಳನ್ನು ನೇಮಿಸಿ ಅವರಿಗೆ– ನೀವು ನ್ಯಾಯ ತೀರಿಸುವುದು ಮನುಷ್ಯರಿಗೋಸ್ಕರವಲ್ಲ, ಯೆಹೋವನಗೋಸ್ಕರವೇ. ನ್ಯಾಯವಿಚಾರಣೆ ಮಾಡುವಾಗ ಆತನು ನಿಮ್ಮ ಮಧ್ಯದಲ್ಲಿರುತ್ತಾನೆ, ಹೀಗಿರುವಲ್ಲಿ ನಿಮಗೆ ಯೆಹೋವನ ಭಯವಿರಲಿ, ನಿಮ್ಮ ದೇವರಾದ ಯೆಹೋವನಲ್ಲಿ ಅನ್ಯಾಯವೂ ಮುಖದಾಕ್ಷಿಣ್ಯವೂ ಲಂಚ ತಿನ್ನುವುದು ಇಲ್ಲವಾದದ್ದರಿಂದ ಜಾಗೂರಕತೆಯಿಂದ ಕೆಲಸ ಮಾಡಿರಿ ಎಂದು ಎಚ್ಚರಿಸಿದನು.

ಮೊವಾಬ್ಯರು, ಅಮ್ಮೋನಿಯರು, ಮಗೂನ್ಯರು ಒಟ್ಟಾಗಿ ಯೆಹೋಷಾಫಾಟನ ವಿರುದ್ದವಾಗಿ ಯುದ್ದಕ್ಕೆ ಬಂದರು. ಆಗ ಅವನು ಯೆಹೋವನನ್ನು ಆಶ್ರಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡು ಯೆಹೂದ್ಯರೆಲ್ಲರೂ ಉಪವಾಸಮಾಡಬೇಕೆಂದು ಪ್ರಕಟಿಸಿದನು. ಯೆಹೂದ್ಯರೆಲ್ಲರೂ ಆಲಯಕ್ಕೆ ಬಂದಾಗ ಅವನು ತಮಗೆ ಸಹಾಯಮಾಡುವಂತೆ ದೇವರಲ್ಲಿ ಪ್ರಾರ್ಥಿಸಿದನು. ಆಗ ಯೆಹಜೀಯೇಲನ ಮೇಲೆ ದೇವರಾತ್ಮವು ಬಂದಿತು. ಅವನು ಯೆಹೋಷಾಫಾಟನಿಗೆ– ಹೆದರಬೇಡಿರಿ, ಯುದ್ದವು ನಿಮ್ಮದಲ್ಲ, ದೇವರದೆ. ನೀವು ಯುದ್ದಮಾಡುವುದು ಅವಶ್ಯವಿಲ್ಲ, ಸುಮ್ಮನೆ ನಿಂತುಕೊಂಡು ದೇವರು ನಿಮಗಾಗಿ ನಡೆಸುವ ರಕ್ಷಣಾಕಾರ್ಯವನ್ನು ನೋಡಿರಿ ಎಂದು ಹೇಳಿದನು.

ಯೆಹೋಷಾಫಾಟನು ಗಾಯನಮಾಡುವವರನ್ನು ಆರಿಸಿಕೊಂಡು ಅವರಿಗೆ– ಯೆಹೋವನಿಗೆ ಕೃತಜ್ಞತಾ ಸ್ತುತಿಮಾಡಿರಿ, ಆತನ ಕೃಪೆಯು ಶಾಶ್ವತವಾಗಿದೆಂದು ಭಜಿಸಿರಿ ಎಂಬುದಾಗಿ ಆಜ್ಞಾಪಿಸಿದನು. ಅವರು ಉತ್ಸಾಹಧ್ವನಿಯಿಂದ ಕೀರ್ತಿಸುವುದಕ್ಕೆ ಪ್ರಾಂಭಿಸಿದಾಗ ದೇವರು ಯೆಹೂದ್ಯರಿಗೆ ವಿರೋದವಾಗಿ ಬಂದ ವೈರಿಗಳು ತಾವೇ ಒಬ್ಬರಿಗೊಬ್ಬರು ಕೊಂದುಕೊಳ್ಳುವಂತೆ ಮಾಡಿದನು. ಅವರಲ್ಲಿ ಯಾರೊಬ್ಬರೂ ಉಳಿಯದೆ ಎಲ್ಲರೂ ನಾಶವಾದರು.

ಯೆಹೋವನು ತಾನೇ ಯೆಹೂದ್ಯರ ಶತೃಗಳೊಡನೆ ಯುದ್ದಮಾಡಿದ್ದಾನೆಂಬ ಸುದ್ದಿಯು ಅನ್ಯ ದೇಶಗಳವರಿಗೆ ಮುಟ್ಟಿದಾಗ ಅವರೆಲ್ಲರೂ ಭಯಭೀತರಾದರು. ಯೆಹೂದ ರಾಜ್ಯಕ್ಕೆ ಸಮಾದಾನವಾಯಿತು.

ಯೆಹೋಷಾಫಾಟನು ಯೆಹೂದ್ಯರಲ್ಲಿ ಆತ್ಮೀಕವಾಗಿ ಸುಧಾರಣೆಗಳನ್ನು ತಂದನು. ಜನರನ್ನು ದೇವರ ಕಡೆಗೆ ತಿರುಗಿಸಿದನು. ಧರ್ಮಶಾಸ್ತ್ರಗಳನ್ನು ಭೋಧಿಸಿದನು. ಅವನಿಗೆ ಎದುರಾದ ಯುದ್ದದಲ್ಲಿ ದೇವರನ್ನು ಆತುಕೊಂಡು ಪ್ರಾರ್ಥಿಸಿದ್ದರಿಂದ ಅವನ ಪರವಾಗಿ ದೇವರು ಯುದ್ದಮಾಡಿ ಜಯವನ್ನು ತಂದುಕೊಟ್ಟನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಪೂರ್ವ: 17–20 ಅಧ್ಯಾಯಗಳು.*

**ಪ್ರಶ್ನೆಗಳು**

1) ಯೆಹೋಷಾಫಾಟನನು ದೇವರಿಗಾಗಿ ಮಾಡಿದ ಆತ್ಮೀಕ ಸುಧಾರಣೆಗಳೇನು?

2) ಯೆಹೋಷಾಫಾಟನನು ಯುದ್ದವನ್ನು ಹೇಗೆ ಎದುರಿಸಿದನು?

3) ಈ ಯುದ್ದದಲ್ಲಿ ದೇವರು ಹೇಗೆ ಕಾರ್ಯಮಾಡಿದನು?

4) ಯೆಹೋಷಾಫಾಟನನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

## ಎಲೀಯ

ಎಲೀಯನು ಹಳೆ ಒಡಂಬಡಿಕೆಯ ಕಾಲದಲ್ಲಿನ ಪ್ರವಾದಿಗಳಲ್ಲಿ ವಿಶೇಷವಾದ ಪ್ರವಾದಿಯಾಗಿದ್ದಾನೆ. ಈತನು ಬೆಂಕಿಯ ಪ್ರವಾದಿ ಮತ್ತು ಪ್ರಾರ್ಥನಾ ವೀರ ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಈತನು ಪ್ರಾರ್ಥಿಸಿದಾಗ ಮಳೆಯು ಬರುತಿತ್ತು ಮತ್ತು ಬೆಂಕಿಯು ಬರುತಿತ್ತು. ಈತನು ಹಿಂಜಾರಿಹೋಗಿದ್ದ ಇಸ್ರಾಯೇಲರನ್ನು ದೇವರ ಕಡೆಗೆ ತಿರುಗಿಸಿದನು.

ಎಲೀಯನ ಕಾಲದಲ್ಲಿ ಮಳೆ ಇಲ್ಲದ ನಿಮಿತ್ತ ದೇಶದಲ್ಲೆಲ್ಲಾ ಬರಗಾಲವುಂಟಾಯಿತು. ದೇವರು ಎಲೀಯನಿಗೆ ಕೇರಿತ್ ಹಳ್ಳಕ್ಕೆಹೋಗುವಂತೆ ತಿಳಿಸಿದಾಗ ಎಲೀಯನು ಅಲ್ಲಿಗೆ ಹೋಗಿ ವಾಸಿಸಿದನು. ದೇವರು ಅವನಿಗೆ ಊಟಕ್ಕಾಗಿ ಕಾಗೆಯ ಮೂಲಕ ಪ್ರತಿದಿನ ಬೆಳಿಗ್ಗೆ ಮತ್ತು ಸಾಯಾಂಕಾಲದಲ್ಲಿ ರೊಟ್ಟಿ ಮತ್ತು ಮಾಂಸಗಳನ್ನು ಪೂರೈಸಿದನು. ಆ ಹಳ್ಳದ ನೀರನ್ನು ಕುಡಿಯುತ್ತಿದ್ದನು. ಆ ಹಳ್ಳದ ನೀರು ಬತ್ತಿಹೋದಾಗ ದೇವರು ಅವನಿಗೆ ಚಾರೆಪ್ತಾ ಎಂಬ ಊರಿನ ಒಬ್ಬ ವಿಧುವೆಯ ಮನೆಗೆ ಹೋಗಲು ತಿಳಿಸಿದನು. ಎಲೀಯನು ಆ ವಿಧುವೆಯ ಮನೆಗೆ ಬಂದಾಗ ಆ ವಿಧುವೆಯು ತನಗಾಗಿ ಮತ್ತು ತನ್ನ ಮಗನಿಗಾಗಿ ಇದ್ದ ರೊಟ್ಟಿಯನ್ನು ಎಲೀಯನಿಗೆ ಕೊಟ್ಟಳು. ದೇವರು ಆಕೆಯ ಮನೆಯನ್ನು ಆಶೀರ್ವದಿಸಿದನು.



ಆ ಕಾಲದಲ್ಲಿ ಮಳೆ ಇಲ್ಲದೆ ಬಹು ಘೋರವಾದ ಬರಗಾಲವುಂಟಾಯಿತು. ಎಲ್ಲಿಯೂ ನೀರು ಸಿಕ್ಕುತ್ತಿರಲಿಲ್ಲ. ಇಸ್ರಾಯೇಲರು ಬಾಳ್ ದೇವರನ್ನು ಹಿಂಬಾಲಿಸುತ್ತಿದ್ದರು. ದೇವರ ಆಜ್ಞೆಯಂತೆ ಎಲೀಯನು ಇಸ್ರಾಯೇಲಿನ ಎಲ್ಲಾ ಜನರನ್ನು ಕರೆಕಳುಹಿಸಿದನು. ಬಾಳನ 450 ಪ್ರವಾದಿಗಳನ್ನು ಕರೆಸಿದನು. ಅವನು ಜನರಿಗೆ– ಯೆಹೋವನು ದೇವರಾಗಿದ್ದರೆ ಆತನನ್ನು ಹಿಂಬಾಲಿಸಿರಿ, ಬಾಳನು ದೇವರಾಗಿದ್ದರೆ ಆತನನ್ನು ಹಿಂಬಾಲಿಸಿರಿ ಎಂದು ಹೇಳಿದನು. ಮತ್ತು ಅವರಿಗೆ– ಯೆಹೋವನ ಪ್ರವಾದಿಗಳಲ್ಲಿ ನಾನೊಬ್ಬನೇ ಉಳಿದಿದ್ದೇನೆ, ಬಾಳಾನ 450 ಪ್ರವಾದಿಗಳಿದ್ದಾರೆ, ಅವರು 2 ಹೋರಿಯನ್ನು ತೆಗೆದುಕೊಂಡು ಕರ್ಮೆಲ್ ಬೆಟ್ಟಕ್ಕೆ ಹೋಗಿ ಅವುಗಳಲ್ಲಿ ಒಂದನ್ನು ಕಡಿದು ತುಂಡುಮಾಡಿ ಕಟ್ಟಿಗೆಯ ಮೇಲಿಡಲಿ, ನಾನೂ ಹಾಗೆಯೇ ಮಾಡುವೆನು. ಆದರೆ ಬೆಂಕಿಯನ್ನು ಹೊತ್ತಿಸಬಾರದು, ನೀವು ನಿಮ್ಮ ದೇವರನ್ನು ಕೂಗಿರಿ, ನಾನು ನಮ್ಮ ದೇವರನ್ನು ಕೂಗುತ್ತೇನೆ, ಯಾರ ದೇವರು ಬೆಂಕಿಯನ್ನು ಕಳಿಸುವನೋ ಆ ದೇವರನ್ನೆ ಹಿಂಬಾಲಿಸಿರಿ ಎಂದನು. ಅದಕ್ಕೆ ಎಲ್ಲಾ ಜನರು ಒಪ್ಪಿಕೊಂಡು ಕರ್ಮೆಲ್ ಬೆಟ್ಟಕ್ಕೆ ಬಂದು ಎಲೀಯನು ಹೇಳಿದಂತೆ ಮಾಡಿದರು. ಬಾಳಾನ ಪ್ರವಾದಿಗಳು ಪ್ರಾರ್ಥಿಸಿದಾಗ ಬೆಂಕಿ ಬರಲಿಲ್ಲ. ಎಲೀಯನು ಪ್ರಾರ್ಥಿಸಿದಾಗ ಬೆಂಕಿ ಬಂದಿತು. ಆಗ ಎಲ್ಲಾ ಜನರು ಯೆಹೋವನೇ ನಿಜವಾದ ದೇವರೆಂದು ಕೂಗಿ ದೇವರ ಕಡೆಗೆ ತಿರುಗಿಕೊಂಡರು. ಬಾಳಾನ 450 ಪ್ರವಾದಿಗಳನ್ನು ಕೊಲ್ಲಿಸಿದನು. ಆಗ ಎಲೀಯನು ಮಳೆಗಾಗಿ ಪ್ರಾರ್ಥಿಸಿದಾಗ ಮಳೆ ಬಂದಿತು.

ಅಹಾಬನು ಈ ಸಂಗತಿಗಳನ್ನು ತನ್ನ ರಾಣಿಯಾದ ಈಜಬೇಲಳಿಗೆ ತಿಳಿಸಿದಾಗ ಅವಳು ಎಲೀಯನನ್ನು ಕೊಲ್ಲಲು ನಿರ್ಧರಿಸಿದಳು. ಇದನ್ನು ತಿಳಿದ ಎಲೀಯನು ಪ್ರಾಣರಕ್ಷಣೆಗಾಗಿ ಓಡಿಹೋದನು. ಆಗ ದೇವದೂತನು ಕಾಣಿಸಿಕೊಂಡು ಅವನನ್ನು ಬಲಪಡಿಸಿ ಅವನಿಗೆ ಎಲೀಷನನ್ನು ತನಗೆ ಬದಲಾಗಿ ಪ್ರವಾದಿಯನ್ನಾಗಿ ನೇಮಿಸುವಂತೆ ತಿಳಿಸಿದನು. ಎಲಿಯನು ಎಲೀಷನನ್ನು ಕಂಡು ತನ್ನ ಕಂಬಳಿಯನ್ನು ಅವನ ಮೇಲೆ ಹಾಕಿ ತನ್ನನ್ನು ಹಿಂಬಾಲಿಸುವಂತೆ ತಿಳಿಸಿದನು. ಎಲೀಷನು ಎಲೀಯನ ಸೇವಕನಾದನು. ಎಲೀಯನು ಸುಳಿಗಾಳಿಯ ಮೂಖಾಂತರವಾಗಿ ಪರಲೋಕಕ್ಕೆ ಸೇರುವ ಸಮಯ ಬಂದಾಗ ಎಲೀಯನು ಎಲೀಷನಿಗೆ– ನನ್ನಿಂದ ನಿನಗೇನು ಬೇಕೆಂದು ಕೇಳಿದಾಗ ಎಲೀಷನು ನಿನಗಿರುವ ಆತ್ಮದಲ್ಲಿ ಎರಡರಷ್ಟು ಪಾಲನ್ನು ನನಗೆ ಅನುಗ್ರಹಿಸು ಎಂದು ಬೇಡಿಕೊಂಡನು. ಅವರು ಮಾತನಾಡುತ್ತಾ ಮುಂದೆ ಹೋಗುತ್ತಿರುವಾಗ ಫಕ್ಕನೆ ಅಗ್ನಿಮಯವಾದ ರಥಾರಥಾಶ್ವಗಳು ನಡುವೆ ಬಂದು ಅವರನ್ನು ವಿಂಗಡಿಸಿದವು. ಎಲೀಯನು ಸುಳಿಗಾಳಿಯ ಮೂಲಕ ಪರಲೋಕಕ್ಕೆ ಒಯ್ಯಲ್ಪಟ್ಟನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 1ಅರಸು: 17–19, 2ಅರಸು: 1–2 ಅಧ್ಯಾಯಗಳು.*

## ಪ್ರಶ್ನೆಗಳು

1) ದೇವರು ಎಲೀಯನನ್ನು ಕೇರಿತ್ ಹಳ್ಳದಲ್ಲಿ ಹೇಗೆ ಪೋಷಿಸಿದನು?

2) ಎಲೀಯನು ಸಂಧಿಸಿದ ವಿಧುವೆ ಮನೆಯಲ್ಲಿ ನಡೆದ ಅದ್ಭುತಕಾರ್ಯಗಳನ್ನು ತಿಳಿಸಿರಿ.

3) ಕರ್ಮೇಲ್ ಬೆಟ್ಟದಲ್ಲಿ ನಡೆದ ಘಟನೆಯನ್ನು ವಿವರಿಸಿರಿ.

4) ಎಲೀಯನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಎಲೀಷ


ಎಲೀಷನು ದೇವರ ಮನುಷ್ಯನಾಗಿ ಪ್ರವಾದಿಯಾಗಿ ಸೇವೆಮಾಡಿದನು. ಇವನು ತನ್ನ ಗುರುವಾದ ಎಲೀಯನಿಗಿಂತ ಎರಡರಷ್ಟು ಆತ್ಮವನ್ನು ಹೊಂದಿಕೊಂಡು ಅವನಿಗಿಂತ ಹೆಚ್ಚಾದ ಅದ್ಭುತಕಾರ್ಯಗಳನ್ನು ಮಾಡಿದನು. ಎಲೀಯನು ಸೇವೆಗೆ ಕರೆದಾಗ ಎಲೀಷನು ಎಲ್ಲವನ್ನು ಬಿಟ್ಟು ದೇವರ ಸೇವೆಗೆ ಸಮರ್ಪಿಸಿಕೊಂಡನು.

ಎಲೀಯನು ಪರಲೋಕಕ್ಕೆ ಹೋಗುವಾಗ ಎಲೀಷನು ತನಗೆ ಎರಡರಷ್ಟು ಆತ್ಮನ ಬಲವನ್ನು ಕೇಳಿ ಪಡೆದುಕೊಂಡನು. ಎಲೀಷನು ತನಗೆ ಹಾಕಿದ್ದ ಎಲೀಯನ ಕಂಬಳಿಯಿಂದ ಯೋರ್ದಾನ್ ನದಿಗೆ ಹೊಡೆದಾಗ ಅದು ಎರಡು ಭಾಗವಾಯಿತು. ಅವನು ಅದನ್ನು ದಾಟಿ ಹೋದನು. ನಂತರ ಯೆರಿಕೋವಿನಾ ಜನರು ಅವನಿಗೆ– ಇಲ್ಲಿನ ನೀರು ಕೆಟ್ಟದ್ದಾಗಿದ್ದರಿಂದ ಬಂಜೆತನವು ಹೆಚ್ಚಾಗಿದೆ ಎಂದರು. ಆಗ ಅವನು ಉಪ್ಪನ್ನು ಆ ನೀರಿನಲ್ಲಿ ಹಾಕಿ ಆ ನೀರಿನ ದೋಷವನ್ನು ಪರಿಹರಿಸಿದನು.

ಇಸ್ರಾಯೇಲರ ಅರಸನಾದ ಯೋರಾಮ, ಯೆಹೂದ್ಯ ಅರಸನಾದ ಯೆಹೋಷಾಫಾಟನು ಮತ್ತು ಏದೋಮ್ಯರ ಅರಸನು ಸೇರಿ ಮೋವಾಬ್ಯರ ವಿರುದ್ದ ಯುದ್ದಕ್ಕೆ ಹೋದರು. ಮೋವಾಬ್ಯರು ಇವರಿಗೆ ನೀರು ಸಿಗದಂತೆ ಮಾಡಿ ಸಾಯುವಂತೆ ಮಾಡಿದರು. ಆಗ ಅವರು ಎಲೀಷನನ್ನು ಕರೆಯಿಸಲು ಅವನು ಗುಂಡಿಗಳನ್ನು ತೋಡಿಸಿ ನೀರಿನಿಂದ ತುಂಬುವಂತೆ ಮಾಡಿದನು.

ಒಬ್ಬ ಪ್ರವಾದಿಯ ಹೆಂಡತಿಯು ತನ್ನ ಗಂಡನ ಮರಣದ ನಂತರ ಸಾಲ ಬಾದೆಯಿಂದ ಕಷ್ಟಪಡುತ್ತಿದ್ದಳು. ಎಲೀಷನು ಆಕೆಗೆ ಪಾತ್ರೆಗಳನ್ನು ತೆಗೆದುಕೊಂಡು ಬರಲು ಹೇಳಿದನು. ಆಕೆಯು ಪಾತ್ರೆಗಳನ್ನು ತಂದಾಗ ಅವುಗಳನ್ನು ಎಣ್ಣೆಯಿಂದ ತುಂಬಿಸಿ ಅದರಿಂದ ಸಾಲವನ್ನು ತೀರಿಸುವಂತೆ ಮಾಡಿದನು.

ಎಲೀಷನು ಶೂನೇಮಿಗೆ ಹೋದಾಗ ಅಲ್ಲಿನ ಸ್ತ್ರೀಯು ಅವನನ್ನು ಉಪಚರಿಸುತ್ತಿದ್ದಳು. ಅವಳಿಗೆ ಮಕ್ಕಳಿರಲಿಲ್ಲ. ಎಲೀಷನು ಮಕ್ಕಳಾಗುವಂತೆ ಆಶೀರ್ವದಿಸಿದನು. ಒಂದು ದಿನ ಆಕೆಯ ಮಗನು ತೀರಿಹೋದಾಗ ಅವನನ್ನು ಎಲೀಷನು ಬದುಕಿಸಿದನು.



ಎಲೀಷನು ಕುಷ್ಠರೋಗಿಯಾದ ಆರಾಮ್ಯರ ಸೇನಾಪತಿಯಾದ ನಾಮಾನನ್ನು ವಾಸಿಮಾಡಿದನು. ಒಂದು ಸಾರಿ ಪ್ರವಾದಿಮಂಡಲಿಯವರು ಮತ್ತು ಎಲೀಷನು ಮನೆಯನ್ನು ಕಟ್ಟಿಕೊಳ್ಳುವುದಕ್ಕಾಗಿ ಕಟ್ಟಿಗೆ ಕಡಿಯಲು ಯೋರ್ದಾನ್ ನದಿಗೆ ಬಂದಾಗ ಒಬ್ಬನ ಕೊಡಲಿಯು ಜಾರಿ ನೀರಿಗೆ ಬಿದ್ದಿತು. ಆಗ ಎಲೀಷನು ಅದನ್ನು ನೀರಿನ ಮೇಲೆ ತೇಲಾಡುವಂತೆ ಮಾಡಿದನು.

ಆರಾಮ್ಯರ ಅರಸನು ಇಸ್ರಾಯೇಲರ ವಿರುದ್ದವಾಗಿ ಯುದ್ದಕ್ಕೆ ಬರುವಾಗ ಅವನ ಯೋಚನೆಗಳನ್ನು ಮತ್ತು ಅವನು ಅವಿತುಕೊಳ್ಳುವ ಸ್ಥಳಗಳನ್ನು ಎಲೀಷನು ಅರಿತುಕೊಂಡು ಇಸ್ರಾಯೇಲ ಅರಸನಿಗೆ ತಿಳಿಸುತ್ತಿದ್ದನು. ಇದರಿಂದ ಅರಾಮ್ಯರ ಅರಸನಿಗೆ ಸೋಲುಂಟಾಗುತಿತ್ತು. ಇದಕ್ಕೆಲ್ಲಾ ಕಾರಣ ಎಲೀಷನೆಂದು ತಿಳಿದ ಅವನು ಎಲೀಷನನ್ನು ಹಿಡಿಯಲು ದೊತಾನಿ ಪಟ್ಟಣವನ್ನು ಮುತ್ತಿಗೆ ಹಾಕಿದನು. ಆಗ ಎಲೀಷನು ಅವರಿಗೆ ಕಣ್ಣುಗಳು ಕಾಣದಂತೆ ಮಾಡಿ ಅವರನ್ನು ಸಮಾರ್ಯಕ್ಕೆ ತೆಗೆದುಕೊಂಡು ಹೋದನು. ಅವರ ಕಣ್ಣುಗಳು ತಿರುಗಿ ಕಾಣುವಂತೆ ಮಾಡಿದನು. ಇಸ್ರಾಯೇಲರ ಅರಸನು ಅವರನ್ನು ಕೊಲ್ಲಲ್ಲು ಹೋದಾಗ ಎಲೀಷನು ಅವನನ್ನು ತಡೆದು ಅವರಿಗೆ ಆಹಾರವನ್ನು ಕೊಟ್ಟನು.

ಹೀಗೆ ಅನೇಕ ಅದ್ಬುತ ಕಾರ್ಯಗಳನ್ನು ಮಾಡುತ್ತಿದ್ದ ಎಲೀಷನು ಒಂದು ದಿನ ಮರಣಕರವಾದ ರೋಗದಲ್ಲಿ ಬಿದ್ದು ಸತ್ತುಹೋದನು. ಅವನ ಶವವನ್ನು ಸಮಾಧಿಮಾಡಿದರು. ಅವನ ಎಲುಬುಗಳಿಗೆ ಸತ್ತಂತ ಶವವು ತಗಲಿದ್ದರಿಂದ ಆ ಶವವು ಬದುಕಿಕೊಂಡಿತು. ಎಷ್ಟೊಂದು ಅಭಿಷೇಕವುಳ್ಳಂತ ವ್ಯಕ್ತಿ! ಇಂತ ವ್ಯಕ್ತಿಗಳನ್ನು ದೇವರು ಹುಡುಕುತ್ತಿದ್ದಾನೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 1ಅರಸು: 19, 2ಅರಸು: 2–13 ಅಧ್ಯಾಯಗಳು.*

## ಪ್ರಶ್ನೆಗಳು

1) ಏಲಿಯನು ಎಲೀಷನನ್ನು ಕರೆದಾಗ ಅವನು ಏನು ಮಾಡುತ್ತಿದ್ದನು? ಮತ್ತು ಹೇಗೆ ಪ್ರತಿಕ್ರೀಯಿಸಿದನು?

2) ದೇವರು ನಿನ್ನನ್ನು ಕರೆದಾಗ ನೀನು ಏನು ಮಡುತ್ತಿದ್ದಿ? ಮತ್ತು ಹೇಗೆ ಪ್ರತಿಕ್ರೀಯಿಸಿದಿ?

3) ಎಲೀಷನು ಮಾಡಿದ ಅದ್ಬುತಕಾರ್ಯರ್ಗಳನ್ನು ವಿವರಿಸಿ.

4) ಎಲೀಷನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಯೇಹು

ಯೇಹು ಇಸ್ರಾಯೇಲಿನ ಅರಸನಾಗಿದ್ದನು. ಈತನು ತುಂಬಾ ಯುಕ್ತಿವಂತನೂ ಮತ್ತು ಪರಾಕ್ರಮಾಶಾಲಿಯೂ ಆಗಿದ್ದನು. ಪ್ರವಾದಿಯಾದ ಎಲೀಷನು ತನ್ನ ಸೇವಕನನ್ನು ಕರೆದು ಅವನಿಗೆ– ನೀನು ರಾಮೋತ್ ಗಿಲ್ಯಾದ್ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿನ ಯೇಹುನನ್ನು ಇಸ್ರಾಯೇಲಿನ ಅರಸನನ್ನಾಗಿ ನೇಮಿಸಿ ಬರುವಂತೆ ತಿಳಿಸಿದನು. ಎಲೀಷನ ಶಿಷ್ಯನು ಯೇಹುನನ್ನು ಎಣ್ಣೆಯಿಂದ ಅಭಿಷೇಕಿಸಿ– ನೀನು ನಿನ್ನ ಯಜಮಾನನಾದ ಅಹಾಬನ ಮನೆಯವರನ್ನು ಸಂಪೂರ್ಣವಾಗಿ ಸಂಹರಿಸಬೇಕು. ಯೆಹೋವನ ಪ್ರವಾದಿಗಳ ಮತ್ತು ಭಕ್ತರ ರಕ್ತವನ್ನು ಸುರಿಸಿದ ಈಜಬೇಲಳನ್ನು ನಾಶಮಾಡಬೇಕೆಂದು ಹೇಳಿದನು. ಈ ವಿಚಾರವು ಅಹಾಬನ ಸೇವಕರಿಗೆ ತಿಳಿದಾಗ ಅವರು ತುತ್ತೂರಿಗಳನ್ನು ಊದಿಸಿ ಯೇಹು ಅರಸನಾಗಿದ್ದಾನೆಂದು ಆರ್ಭಟಿಸಿದರು.

ಯೇಹು ಯೋರಾಮನಿಗೆ ವಿರೋದವಾಗಿ ಒಳಸಂಚುಮಾಡಿ ಇಜ್ರೇಲಿಗೆ ಹೊರಟನು. ಅಲ್ಲಿ ಅಸ್ವಸ್ಥನಾದ ಯೋರಾಮಾನೂ ಮತ್ತು ಅವನನ್ನು ನೋಡಲಿಕ್ಕೆ ಬಂದಿದ್ದ ಯೆಹೂದ್ಯರ ಅರಸನಾದ ಅಹಜ್ಯನೂ ಇದ್ದರು. ಇವರು ಯೇಹುವನ್ನು ಎದುರುಗೊಳ್ಳುವುದಕ್ಕೆ ಹೊರಟರು. ಯೇಹುವಿನ ಒಳಸಂಚು ಯೋರಾಮನಿಗೆ ತಿಳಿದಾಗ ಅವನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದನು. ಆಗ ಯೇಹುವು ಪೂರ್ಣಬಲದಿಂದ ಬಿಲ್ಲನ್ನು ಬೊಗ್ಗಿಸಿ ಯೋರಾಮನಿಗೆ ಬೆನ್ನಿಗೆ ಬಾಣವನ್ನು ಎಸೆದನು. ಅದು ಅವನ ಹೃದಯದಿಂದ ಹೊರಗೆ ಬಂದಿತು. ಅವನು ಸತ್ತು ಹೋದನು. ಅವನ ಜೊತೆಗೆ ಬಂದಿದ್ದ ಅಹಜ್ಯನನ್ನು ಸಹ ಕೊಂದುಹಾಕಿದನು.



ಯೇಹುವು ಇಜ್ರೇಲಿಗೆ ಬಂದಾಗ ಈಜಬೇಲಳು ನಡೆದ ಸಂಗತಿಗಳನ್ನೆಲ್ಲಾ ಕೇಳಿ ತನ್ನ ತಲೆಯನ್ನು ಆಭರಣಗಳಿಂದ ಅಲಂಕರಿಸಿಕೊಂಡು ಕಿಟಕಿಯಿಂದ ನೋಡುತ್ತಾ ನಿಂತಳು. ಆಗ ಯೇಹುವು ಅರಮನೆಯೊಳಗೆ ಬಂದಾಗ ಅವಳು ಅವನ ಕ್ಷೇಮವನ್ನು ವಿಚಾರಿಸಿದಳು. ಯೇಹುವು ಅವಳ ಹತ್ತಿರವಿದ್ದ ತನ್ನ ಪಕ್ಷದವರನ್ನು ಕರೆದು ಅವಳನ್ನು ಕೆಳಗೆ ನೂಕಲು ಹೇಳಿದಾಗ ಅವರು ಆಕೆಯನ್ನು ಕೆಳಗೆ ನೂಕಿದರು. ಆಕೆಯ ರಕ್ತವು ಗೋಡೆಗೂ ಮತ್ತು ಕುದುರೆಗಳಿಗೂ ಸಿಡಿಯಿತು. ಆಕೆಯ ಶವವನ್ನು ತುಳಿಸಿಬಿಟ್ಟನು. ಸೇವಕರು ಆಕೆಯ ಶವವನ್ನು ಸಮಾಧಿಮಾಡಲಿಕ್ಕೆ ಬಂದಾಗ ಅವರಿಗೆ ಆಕೆಯ ತಲೆಬುರುಡೆ ಹೊರತು ಬೇರೇನೂ ಸಿಗಲಿಲ್ಲ. ಹೀಗೆ ದೇವರು ಎಲೀಯನಿಗೆ– ನಾಯಿಗಳು ಈಜಬೇಲಳ ದೇಹಮಾಂಸವನ್ನು ತಿನ್ನುವವು, ಅವಳ ಶವವು ಹೊಲಕ್ಕೆ ಗೊಬ್ಬರವಾಗುವುದೆಂದು ಹೇಳಿದ ಮಾತು ನೆರವೇರಿತು. ನಂತರ ಯೇಹುವು ಸಮಾರ್ಯ ಪಟ್ಟಣದಲ್ಲಿದ್ದ ಅಹಾಬನ ಸಂತಾನದ 70 ಮಂದಿ ರಾಜಪುತ್ರರನ್ನು, ಕುಟುಂಬದವರನ್ನು, ಸರದಾರರನ್ನು, ಆಪ್ತಮಿತ್ರರನ್ನು, ಪುರೋಹಿತರನ್ನು ನಾಶಮಾಡಿದನು.

ಯೇಹುವು ಬಾಳಾನ ಭಕ್ತರನ್ನು ನಾಶಮಾಡುವುದಕ್ಕಾಗಿ ಯೋಜನೆಯನ್ನು ಮಾಡಿದನು. ತಾನು ಬಾಳಾನನ್ನು ಸೇವಿಸುವುದಾಗಿ ತಿಳಿಸಿ ಎಲ್ಲಾ ಬಾಳಾನ ಭಕ್ತರನ್ನು ಜಾತ್ರೆಗೆ ಆಹ್ವಾನಿಸಿದನು. ಅವನು ಅವರೊಂದಿಗೆ ಬಾಳಾನಿಗೆ ಸರ್ವಾಂಗ ಹೋಮವನ್ನು ಸಮರ್ಪಿಸಿದ ನಂತರ ತಾನು ಹೊರಗೆ ನಿಲ್ಲಿಸಿದ್ದ 70 ಮಂದಿ ಕಾವಲುಗಾರರಿಗೆ ಅವರನ್ನು ಕೊಲ್ಲಲು ಆಜ್ಞಾಪಿಸಿದನು. ಅವರು ಬಾಳಾನ ಭಕ್ತರನ್ನು ನಾಶಮಾಡಿ ಬಾಳಾನ ವಿಗ್ರಹವನ್ನು ಮತ್ತು ದೇವಾಲಯವನ್ನು ಕೆಡವಿಹಾಕಿದರು.

ಯೇಹುವು ಇಸ್ರಾಯೇಲರಲ್ಲಿ ಬಾಳಾನ ಪೂಜೆಯನ್ನು ನಿಲ್ಲಿಸಿದರೂ ಬೆತೆಲ್ ಮತ್ತು ದಾನ್ ಊರುಗಳಲ್ಲಿದ್ದ ಚಿನ್ನದ ಬಸವಗಳನ್ನು ಪೂಜಿಸುತ್ತಿದ್ದನು. ಇವನು ಧರ್ಮಶಾಸ್ತ್ರವನ್ನು ಪೂರ್ಣಮನಸ್ಸಿನಿಂದ ಕೈಗೊಂಡು ನಡೆಯಲಿಲ್ಲ. ಇದರಿಂದ ದೇವರು ಇಸ್ರಾಯೇಲ್ ರಾಜ್ಯವನ್ನು ಕುಗ್ಗಿಸತೊಡಗಿದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಅರಸು: 9–10 ಅಧ್ಯಾಯಗಳು.*

## ಪ್ರಶ್ನೆಗಳು

1) ಎಲೀಷನ ಸೇವಕನು ಯೇಹುವನ್ನು ಅಭಿಷೇಕಿಸಿ ಅವನಿಗೆ ಹೇಳಿದ ಮಾತುಗಳೇನು?

2) ಯೇಹುವು ಯೋರಾಮನನ್ನು ಹೇಗೆ ಕೊಲ್ಲಿಸಿದನು?

3) ಯೇಹುವು ಈಜಬೇಲಳನ್ನು ಹೇಗೆ ಕೊಲ್ಲಿಸಿದನು?

4) ಯೇಹುವು ಬಾಳಾನ ಭಕ್ತರನ್ನು ನಾಶಮಾಡಲು ಮಾಡಿದ್ದ ಯೋಜನೆಯನ್ನು ತಿಳಿಸಿರಿ.

5) ಯೇಹುವಿನ ಕುರಿತು ನಿಮ್ಮ ಅಭಿಪ್ರಾಯವೇನು?

# ಹೋಶೇಯ

ಅರಸನಾದ ಸೊಲೊಮೋನನ ಆಳ್ವಿಕೆಯ ನಂತರ ಏಕರಾಜ್ಯವಾಗಿದ್ದ ಇಸ್ರಾಯೇಲ್ ರಾಜ್ಯವು ಎರಡು ಭಾಗವಾಯಿತು. ಯೆಹೂದ ಮತ್ತು ಇಸ್ರಾಯೇಲ್ ರಾಜ್ಯಗಳಾಗಿ ವಿಭಾಗವಾಯಿತು. ಯೆಹೂದರಾಜ್ಯಕ್ಕೆ ರೆಹಬ್ಬಾಮನು ಮತ್ತು ಇಸ್ರಾಯೇಲ್ ರಾಜ್ಯಕ್ಕೆ ಯಾರೋಬ್ಬಾಮನು ಅರಸನಾದನು. ಯಾರೋಬ್ಬಾಮನು ದೇವರ ಮಾರ್ಗದಲ್ಲಿ ನಡೆಯಲಿಲ್ಲ. ನಂತರ ಬಂದ ಎಲ್ಲಾ ಇಸ್ರಾಯೇಲ್ ಅರಸರು ಸಹ ದೇವರ ಆಜ್ಞೆಗಳಿಗೆ ವಿಧೇಯರಾಗಲಿಲ್ಲ.



ಇಸ್ರಾಯೇಲ್ ಜನರು ತಮ್ಮನ್ನು ಐಗುಪ್ತದಿಂದ ಹೊರತಂದ ದೇವರಾದ ಯೆಹೋವನಿಗೆ ವಿರುದ್ದವಾಗಿ ಪಾಪಮಾಡಿದರು. ಅನ್ಯದೇವತೆಗಳನ್ನು ಪೂಜಿಸಿದರು. ತಮ್ಮ ದಷ್ಕೃತ್ಯಗಳಿಂದ ದೇವರನ್ನು ರೇಗಿಸಿದರು. ದೇವರು ಕೊಟ್ಟಂತಹ ಆಜ್ಞಾನಿಯಮಗಳನ್ನು, ಬುದ್ದಿ ವಾಕ್ಯಗಳನ್ನು ತಿರಿಸ್ಕರಿಸಿ ಮಿತ್ಯಾ ದೇವತೆಗಳನ್ನು ಸೇವಿಸಿ ನಿಷ್ಪ್ರಯೋಜಕರಾದರು. ಸುತ್ತಲು ಇರುವ ಜನಾಂಗಗಳನ್ನು ಅನುಸರಿಸಬಾರದೆಂದು ಆಜ್ಞಾಪಿಸಿದರೂ ಅವರು ಕೇಳದೆ ಅವರನ್ನೆ ಅನುಸರಿಸಿದರು. ಚಿಕ್ಕ ಊರು ಮೊದಲುಗೊಂಡು ಕೋಟೆಕೊತ್ತಲುಗಳುಳ್ಳ ಪಟ್ಟಣದವರೆಗೂ ಎಲ್ಲಾ ಊರುಗಳಲ್ಲಿ ತಮಗೋಸ್ಕರ ಪೂಜಾಸ್ಥಳಗಳನ್ನು ಏರ್ಪಡಿಸಿಕೊಂಡರು. ಎಲ್ಲಾ ದಿನ್ನೆಗಳ ಮೇಲೆ, ಎಲ್ಲಾ ಹಸಿರು ಮರಗಳ ಕೆಳಗೆ ಕಲ್ಲುಕಂಬ, ಬಸವ ಮೂರ್ತಿ, ಅಶೇರ ವಿಗ್ರಹಸ್ತಂಭಗಳನ್ನು ಮಾಡಿಕೊಂಡರು. ಆಕಾಶ ಸೈನ್ಯ, ಬಾಳ್ ದೇವತೆಗಳನ್ನು ಪೂಜಿಸಿದರು. ತಮ್ಮ ಗಂಡು ಹೆಣ್ಣು ಮಕ್ಕಳನ್ನು ಅವುಗಳಿಗೆ ಬಲಿಯಾಗಿ ಕೊಟ್ಟರು. ಯೆಹೋವನಿಗೆ ಕೆಟ್ಟವುಗಳಾದ ಕಣಿಕೇಳುವುದು, ಯಂತ್ರ ಮಂತ್ರಗಳನ್ನು ಮಾಡುವುದು ಮೊದಲಾದ ದುಷ್ಕೃತ್ಯಗಳಿಗೆ ತಮ್ಮನ್ನು ಮಾರಿಬಿಟ್ಟು ದೇವರಿಗೆ ಕೋಪವನ್ನೆಬ್ಬಿಸಿದರು. ಅವರು ಯಾರೋಬ್ಬಾಮನ ಮಾರ್ಗದಲ್ಲಿ ನಡೆಯುವುದನ್ನು ಬಿಡಲಿಲ್ಲವಾದದ್ದರಿಂದ ಯೆಹೋವನು ತನ್ನ ಸೇವಕರಾದ ಎಲ್ಲಾ ಪ್ರವಾದಿಗಳ ಮೂಖಾಂತರವಾಗಿ ಮುಂತಿಳಿಸಿದಂತೆ ಯೆಹೂದ ಕುಲದವರ ಹೊರತು ಉಳಿದ ಎಲ್ಲಾ ಕುಲಗಳವರನ್ನು ತನ್ನ ಸನ್ನಿಧಿಯಿಂದ ತಳ್ಳಿಬಿಟ್ಟನು.

ಈ ಕಾಲದಲ್ಲಿ ಹೋಶೇಯನು ಇಸ್ರಾಯೇಲರ ಅರಸನಾಗಿದ್ದನು. ಇವನು ತನ್ನ ಪೂರ್ವಿಕರಾದ ಇಸ್ರಾಯೇಲರಷ್ಟು ಕೆಟ್ಟವನಾಗಿರಲಿಲ್ಲವಾದರೂ ಯೆಹೋವನ ದೃಷ್ಠಿಯಲ್ಲಿ ದ್ರೋಹಿಯಾಗಿದ್ದನು. ಅಸ್ಸೀರಿಯದ ಅರಸನಾದ ಶಲ್ಮನೇಸರನು ಇವನಿಗೆ ವಿರೋದವಾಗಿ ಯುದ್ದಕ್ಕೆ ಬಂದನು. ಹೋಶೇಯನು ಅವನಿಗೆ ಕಪ್ಪಕಾಣಿಕೆಗಳನ್ನು ಕೊಡುವವನಾದನು. ಕೆಲವು ವರ್ಷಗಳ ನಂತರ ಇವನು ಕೊಡಬೇಕಾಗಿದ್ದ ಕಪ್ಪಕಾಣಿಕೆಯನ್ನು ಕೊಡದೆ ಹೋಗಿದ್ದರಿಂದಲೂ ಮತ್ತು ಐಗುಪ್ತದ ಅರಸನಾದ ಸೋ ಎಂಬುವವನ ಬಳಿಗೆ ರಾಯಭಾರಿಗಳನ್ನು ಕಳುಹಿಸಿದ್ದರಿಂದಲೂ ಅಸ್ಸೀರಿಯದ ಅರಸನು ಹೋಶೇಯನನ್ನು ದ್ರೋಹಿ ಎಂದು ತಿಳಿದು ಅವನನ್ನು ಬಂಧಿಸಿ ಸೆರೆಯಲ್ಲಿಟ್ಟನು. ಇದಲ್ಲದೆ ಅವನು ದೇಶವನ್ನೆಲ್ಲಾ ಸ್ವಾಧೀನ ಪಡಿಸಿಕೊಂಡು ಸಮಾರ್ಯ ಪಟ್ಟಣಕ್ಕೆ ಬಂದು ಮೂರು ವರ್ಷಗಳ ವರೆಗೂ ಮುತ್ತಿಗೆ ಹಾಕಿದನು. ಎಲ್ಲಾ ಇಸ್ರಾಯೇಲರನ್ನು ಅಸ್ಸೀರಿಯ ದೇಶಕ್ಕೆ ಸೆರೆಯಾಗಿ ಒಯ್ದನು.

ಇಸ್ರಾಯೇಲ್ ಅರಸರ ಅವಿಧೇಯತೆಯು, ಜನರ ಪಾಪವು ಈ ದುಸ್ಥಿತಿಗೆ ಕಾರಣವಾಯುತು. ದೇವರ ದೃಷ್ಠಿಯಲ್ಲಿ ದ್ರೋಹಿಗಳಾಗಿ ದೇವರ ಕೋಪಕ್ಕೆ ಗುರಿಯಾದರು. ಅವಿಧೇಯತೆಯು ದೇಶವನ್ನು ನಾಶನಕ್ಕೆ ನಡೆಸುತ್ತದೆ. ವಿದೇಯತೆಯು ದೇಶವನ್ನು ಅಭಿವೃದ್ದಿಗೆ ನಡೆಸುತ್ತದೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಅರಸು: 17 ಅಧ್ಯಾಯಗಳು.*

**ಪ್ರಶ್ನೆಗಳು**


1) ಇಸ್ರಾಯೇಲ್ ರಾಜ್ಯದ ನಾಶನಕ್ಕೆ ಕಾರಣಗಳನ್ನು ತಿಳಿಸಿ.

2) ಹೋಶೇಯನು ಯಾಕೆ ಸೆರೆಗೆ ಒಯ್ಯಲ್ಪಟ್ಟನು?

3) ಇಸ್ರಾಯೇಲ್ ರಾಜ್ಯದ ನಾಶನದಿಂದ ನಾವು ಕಲಿಯಬೇಕಾದ ಸಂಗತಿಗಳೇನು?

# ಹಿಜ್ಕೀಯ

ಹಿಜ್ಕೀಯನು ಯೆಹೂದ ರಾಜ್ಯದ ಅರಸನಾಗಿದ್ದನು. ಅಬೀ ಎಂಬಾಕೆಯು ಇವನ ತಾಯಿಯಾಗಿದ್ದಳು. ಅಹಾಜನು ಇವನ ತಂದೆಯಾಗಿದ್ದನು. ಇವನು ಎಲ್ಲ ವಿಷಯಗಳಲ್ಲೂ ತನ್ನ ಪೂರ್ವಿಕನಾದ ದಾವೀದನಂತೆ ಯೆಹೋವನ ಚಿತ್ತಾನುಸಾರವಾಗಿ ನಡೆದನು. ಇವನು ಪೂಜಾಸ್ಥಳಗಳನ್ನು ಹಾಳುಮಾಡಿ ಕಲ್ಲುಕಂಭಗಳನ್ನು ಒಡೆದುಹಾಕಿ ಅಶೇರ ವಿಗ್ರಹಸ್ತಂಭಗಳನ್ನು ಕಡಿದುಹಾಕಿದನು. ಮೋಶೆಯು ಮಾಡಿಸಿದ ತಾಮ್ರದ ಸರ್ಪವನ್ನು ಚೂರುಚೂರುಮಾಡಿದನು. ಇಸ್ರಾಯೇಲರು ಅವರೆಗೂ ಅದಕ್ಕೆ ದೂಪವನ್ನು ಸುಡುತ್ತಿದ್ದರು.



ಹಿಜ್ಕೀಯನು ಇಸ್ರಾಯೇಲ್ ದೇವರಾದ ಯೆಹೋವನಲ್ಲಿ ಭರವಸೆಯಿಟ್ಟಿದ್ದನು. ಯೆಹೂದ್ಯರಲ್ಲಿ ಇವನಿಗೆ ಸಮಾನನಾದ ಅರಸನು ಮುಂಚೆಯೂ ತರುವಾಯವೂ ಇರಲಿಲ್ಲ. ಇದಲ್ಲದೆ ಇವನು ಯೆಹೋವನನ್ನು ಹೊಂದಿಕೊಂಡು ಆತನನ್ನು ಬಿಡದೆ ಹಿಂಬಾಲಿಸಿದನು. ಮೋಶೆಯ ಧರ್ಮಶಾಸ್ತ್ರವನ್ನು ಕೈಗೊಂಡು ನಡೆದನು. ಯೆಹೋವನು ಇವನ ಸಂಗಡ ಇದ್ದದ್ದರಿಂದ ಇವನು ಎಲ್ಲಿಗೆ ಹೋದರೂ ಕೃತಾರ್ಥನಾಗಿ ಬರುತ್ತಿದ್ದನು.

ಅಸ್ಸೀರಿಯಾದ ಅರಸನಾದ ಸೆನ್ಹೇರೀಬನು ಯೆಹೂದರಾಜ್ಯದ ಮೇಲೆ ದಾಳಿ ಮಾಡಿ ರಾಜ್ಯದೊಳಗಿನ ಕೋಟೆಕೊತ್ತಲುಗಳುಳ್ಳ ಎಲ್ಲಾ ಪಟ್ಟಣಗಳನ್ನು ಸ್ವಾಧೀನಮಾಡಿಕೊಂಡನು. ಹಿಜ್ಕಿಯನು ತನ್ನ ದೂತರನ್ನು ಸೆನ್ಹೇರೀಬನ ಬಳಿಗೆ ಕಳುಹಿಸಿ ತನ್ನನ್ನು ಬಿಟ್ಟು ಹೋಗುವಂತೆ ಮತ್ತು ಕೇಳಿದಷ್ಟು ಕಪ್ಪಕಾಣಿಕೆಯನ್ನು ಕೊಡುವುದಾಗಿ ತಿಳಿಸಿದನು. ಸೆನ್ಹೇರೀಬನು ತನಗೆ 30 ತಲಾಂತು ಬಂಗಾರವನ್ನು ಮತ್ತು 300 ತಲಾಂತು ಬೆಳ್ಳಿಯನ್ನು ಕೊಡುವಂತೆ ಆಜ್ಞಾಪಿಸಿದನು. ಆಗ ಹಿಜ್ಕೀಯನು ಯೆಹೋವನ ಆಲಯದಲ್ಲಿಯೂ ಅರಮನೆಯ ಭಂಡಾರದಲ್ಲಿಯೂ ಸಿಕ್ಕಿದ ಬೆಳ್ಳಿಯನ್ನು ಮತ್ತು ತಾನು ಯೆಹೋವನ ಆಲಯದ ಕದಗಳಿಗೂ ಕಂಬಗಳಿಗೂ ಹೊದಿಸಿದ್ದ ಬಂಗಾರದ ತಗಡುಗಳನ್ನು ತೆಗೆದುಕೊಂಡು ಸೆನ್ಹೇರೀಬನಿಗೆ ಕಳುಹಿಸಿದನು.

ಆದರೂ ಅಸ್ಸೀರಿಯಾದ ಅರಸನು ರಬ್ಷಾಕೆ ಎಂಬುವವನನ್ನು ಹಿಜ್ಕೀಯನ ಬಳಿಗೆ ಕಳುಹಿಸಿದನು. ಈ ರಬ್ಷಾಕೆಯು ಹಿಜ್ಕೀಯನಿಗೆ ಮತ್ತು ದೇವರಾದ ಯೆಹೋವನಿಗೆ ವಿರೋದವಾಗಿ ಮಾತನಾಡಿದನು. ನಮ್ಮ ಕೈಯಿಂದ ನಿಮ್ಮನ್ನು ಬಿಡಿಸಲಿಕ್ಕೆ ನಿಮ್ಮ ದೇವರಿಂದಲೂ ಆಗುವುದಿಲ್ಲ ಎಂಬುದಾಗಿ ಸವಾಲ್ ಹಾಕಿದನು. ಇದನ್ನು ಕೇಳಿದ ಹಿಜ್ಕೀಯನು ತನ್ನ ಬಟ್ಟೆಗಳನ್ನು ಹರಿದುಕೊಂಡು ಗೋಣಿತಟ್ಟನ್ನು ಸುತ್ತಿಕೊಂಡು ಯೆಹೋವನ ಆಲಯಕ್ಕೆ ಹೋಗಿ ಪ್ರಾರ್ಥಿಸಿದನು. ಆಗ ದೇವರು ಯೇಶಾಯನ ಮೂಲಕ ದೈವೋಕ್ತಿಗಳನ್ನು ನುಡಿಸಿ ಅವನನ್ನು ಆಧರಿಸಿದನು. ಆ ರಾತ್ರಿಯಲ್ಲಿ ದೇವರು ತನ್ನ ದೂತನನ್ನು ಕಳುಹಿಸಿ ಸೆನ್ಹೇರೀಬನ 1,80,000 ಸೈನಿಕರನ್ನು ಕೊಂದುಹಾಕಿದನು.

ಒಂದು ದಿನ ಹಿಜ್ಕೀಯನು ಮರಣಕರವಾದ ರೋಗದಲ್ಲಿ ಬಿದ್ದನು. ಯೇಶಾಯನು ಅವನ ಬಳಿಗೆ ಬಂದು ನೀನು ಸಾಯುವಿ ಎಂಬುದಾಗಿ ತಿಳಿಸಿದನು. ಆಗ ಹಿಜ್ಕೀಯನು ಪ್ರಾರ್ಥಿಸಿ ಬಹಳವಾಗಿ ಅತ್ತನು. ದೇವರು ಅವನ ಪ್ರಾರ್ಥನೆಯನ್ನು ಕೇಳಿ ಅವನ ಆಯುಷ್ಯಕ್ಕೆ ಇನ್ನೂ 15 ವರ್ಷಗಳ ಆಯುಷ್ಯವನ್ನು ಕೂಡಿಸಿದನು. ಹಿಜ್ಕೀಯನು ದೇವರನ್ನು ಕೊಂಡಾಡಿದನು.

ಹಿಜ್ಕೀಯನು ನಂಬಿಗಸ್ಥನಾಗಿಯೂ ಯತಾರ್ಥಚಿತ್ತನಾಗಿಯು ದೇವರಿಗೆ ನಡೆದುಕೊಂಡು ದೇವರ ದೃಷ್ಠಿಯಲ್ಲಿ ಒಳ್ಳೆಯವನಾಗಿದ್ದನು. ತನಗೆ ಎದುರಾಗಿ ಬರುವಂತಹ ಪರಿಸ್ಥಿತಿಗಳಲ್ಲಿ ದೇವರನ್ನು ಆತುಕೊಳ್ಳುವಂತ ವ್ಯಕ್ತಿಯಾಗಿದ್ದನು. ದೇವರು ಇಕ್ಕಟ್ಟಿನಲ್ಲಿ ವಿಶೇಷ ಸಹಾಯಕನಾಗಿದ್ದಾನೆ.

ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಅರಸು: 18–20, ಯೇಶಾಯ: 36–37 ಅಧ್ಯಾಯಗಳು.

## ಪ್ರಶ್ನೆಗಳು

1) ಹಿಜ್ಕೀಯನು ಇಸ್ರಾಯೆಲರ ಆತ್ಮೀಕ ಕ್ಷೇತ್ರದಲ್ಲಿ ಮಾಡಿದ ಬದಲಾವಣೆಗಳನ್ನು ತಿಳಿಸಿರಿ.

2) ಹಿಜ್ಕೀಯ ಮತ್ತು ಸೆನ್ಹೆರೀಬರ ನಡುವಿನ ಯುದ್ದದ ಸನ್ನಿವೇಶವನ್ನು ವಿವರಿಸಿರಿ.

3) ಹಿಜ್ಕೀಯನು ರೋಗದಲ್ಲಿ ಬಿದ್ದಾಗ ಹೇಗೆ ಪ್ರತಿಕ್ರೀಯಿಸಿದನು?

4) ಹಿಜ್ಕೀಯನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಯೆಶಾಯ

ಯೆಶಾಯನು ಪ್ರವಾದಿಯಾಗಿದ್ದನು. ದೇವರು ಇವನನ್ನು ಯೆಹೂದರಾಜ್ಯದಲ್ಲಿ ಬಹಳವಾಗಿ ಉಪಯೋಗಿಸಿದನು. ಇವನನ್ನು ಹಿರಿಯ ಪ್ರವಾದಿ ಎಂಬುದಾಗಿ ಕರೆಯುತ್ತಾರೆ. ಯೆಶಾಯನು ಲೋಕರಕ್ಷಕನಾದ ಯೇಸುಕ್ರಿಸ್ತನ ಕುರಿತಾಗಿ ಅನೇಕ ಪ್ರವಾದನೆಗಳನ್ನು ತಿಳಿಸಿದನು. ಯೇಸುಕ್ರಿಸ್ತನ ಜನನ, ಸೇವೆ, ಮರಣ, ಪುನರುತ್ಥಾನ ಮತ್ತು ಎರಡನೇ ಬರೋಣದ ಕುರಿತಾಗಿ ತಿಳಿಸಿದನು. ಈ ಮುಂದೆ ಇರುವ ನ್ಯಾಯತೀರ್ಪು, ಹೊಸ ಭೂಮ್ಯಾಕಾಶ, ನಿತ್ಯರಾಜ್ಯದ ಕುರಿತಾಗಿ ಪ್ರವಾದಿಸಿದನು.

ಒಂದು ದಿನ ಯೆಶಾಯನು ದೇವರು ಉನ್ನತೋನ್ನತ್ತವಾಗಿ ಸಿಂಹಾಸನಾರೂಢನಾಗಿರುವುದನ್ನು (ದರ್ಶನ) ಕಂಡನು. ದೇವರ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿಕೊಂಡಿತ್ತು. ಆತನ ಸುತ್ತ ಸೆರಾಫಿಯರು ಇದ್ದರು. ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವರಾಗಿ ಎರಡರಿಂದ ತಮ್ಮ ಮುಖವನ್ನು ಎರಡರಿಂದ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡಿಯುತ್ತಾ ನೆಲವನ್ನು ಸೋಕದೆ ನಿಂತಿದ್ದರು. ಆಗ ಒಬ್ಬನು ಮತ್ತೊಬ್ಬನಿಗೆ– ಸೇನಾಧೀಶ್ವರನಾದ ಯೆಹೋವನು ಪರಿಶುದ್ದನು, ಪರಿಶುದ್ದನು, ಪರಿಶುದ್ದನು; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ ಎಂದು ಕೂಗಿ ಹೇಳಿದನು. ಕೂಗುವವನ ಶಬ್ದಕ್ಕೆ ದ್ವಾರದ ಅಸ್ತಿವಾರವು ಕದಲಿತು, ಧೂಮವು ಮಂದಿರದಲ್ಲೆಲ್ಲಾ ತುಂಬಿಕೊಂಡಿತು. ಆಗ ಯೆಶಾಯನು– ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ ನಾಶವಾದನೆಲ್ಲಾ, ನಾನು ಹೊಲಸು ತುಟಿಯವನು, ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನಾಗಿದ್ದೇನೆ. ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು ಕಂಡವು ಎಂದು ಕೂಗಿಕೊಳ್ಳುವಾಗ ಸೆರಾಫಿಯರಲ್ಲಿ ಒಬ್ಬನು ಯಜ್ಞವೇದಿಯಿಂದ ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು ಯೆಶಾಯನ ಬಾಯಿಗೆ ಮುಟ್ಟಿಸಿ– ಈ ಕೆಂಡವು ನಿನ್ನ ತುಟಿಗಳಿಗೆ ತಗಲಿತು, ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತವಾಯಿತು ಎಂದನು. ನಂತರ ಕರ್ತನು ನಮಗೋಸ್ಕರ ಯಾರನ್ನು ಕಳುಹಿಸಲಿ, ಯಾರು ಹೋಗುತ್ತಾರೆ? ಎಂದು ಕೇಳಿದಾಗ ಯೆಶಾಯನು– ನಾನು ಹೋಗುತ್ತೇನೆ, ನನ್ನನ್ನು ಕಳುಹಿಸು ಎಂದು ಹೇಳಿದನು. ಆಗ ದೇವರು ಅವನನ್ನು ಪ್ರವಾದಿಯನ್ನಾಗಿ ನೇಮಿಸಿದನು.

ಯೆಶಾಯನು ಯೆಹೂದ್ಯರ ಅರಸನಾದ ಹಿಜ್ಕೀಯನ ಕಾಲದಲ್ಲಿ ಪ್ರವಾದಿಸುತ್ತಿದ್ದನು. ಒಂದು ಸಾರಿ ಅಸ್ಸೀರಿಯಾದ ಅರಸನಾದ ಸೆನ್ಹೆರೀಬನು ಯೆಹೂದ್ಯರಾಜ್ಯವನ್ನು ಮುತ್ತಿಗೆಹಾಕಿದಾಗ ಹಿಜ್ಕೀಯನು ಯೆಶಾಯನನ್ನು ತನಗಾಗಿ ಪ್ರಾರ್ಥಿಸುವಂತೆ ಕೇಳಿಕೊಂಡನು. ಯೆಶಾಯನು ಪ್ರಾರ್ಥಿಸಿದಾಗ ದೇವರು ಅಸ್ಸೀರಿಯದವರು ನಾಶವಾಗುವಂತೆ ಮಾಡಿದನು. ಹಿಜ್ಕೀಯನು ರೋಗದಲ್ಲಿ ಬಿದ್ದಾಗ ಯೆಶಾಯನು ನೀನು ಸಾಯುವಿ ಎಂದು ತಿಳಿಸಿದನು. ಆಗ ಹಿಜ್ಕೀಯನು ದೇವರಲ್ಲಿ ಮೊರೆಯಿಟ್ಟಾಗ ದೇವರ ಆಜ್ಞೆಯಂತೆ ಯೆಶಾಯನು ಹಿಜ್ಕೀಯನನ್ನು ವಾಸಿಮಾಡಿದನು.



ಬಾಬೆಲಿನ ಅರಸನು ಹಿಜ್ಕೀಯನ ಬಳಿಗೆ ತನ್ನ ದೂತರನ್ನು ಕಳುಹಿಸಿದಾಗ ಹಿಜ್ಕೀಯನು ಆ ದೂತರಿಗೆ ಅರಮನೆಯಲ್ಲಿರುವ ಎಲ್ಲಾ ವಸ್ತುಗಳನ್ನು ತೋರಿಸಿದನು. ಆಗ ಯೆಶಾಯನು ಹಿಜ್ಕೀಯನಿಗೆ– ನಿನ್ನ ಪೂರ್ವಿಕರ ಕಾಲದಿಂದ ಇಂದಿನ ವರೆಗೂ ಅರಮನೆಯಲ್ಲಿ ಸಂಗ್ರಹಿಸಿದ್ದ ಎಲ್ಲಾ ವಸ್ತುಗಳನ್ನು ಬಾಬೆಲ್‌ಗೆ ಒಯ್ಯಲ್ಪಡುವವು ಎಂದು ಯೆಹೂದರಾಜ್ಯದ ಪತನದ ಕುರಿತಾಗಿ ಪ್ರವಾದಿಸಿದನು. ಈ ಪ್ರವಾದನೆಯು ಯೆರೆಮಿಯಾನ ಕಾಲದಲ್ಲಿ ನೆರವೇರಿತು.

ದೇವರು ನನಗಾಗಿ ಯಾರು ಹೋಗುತ್ತಾರೆ ಎಂದು ಕೂಗಿದಾಗ ಯೆಶಾಯನು ದೇವರ ಹೃದಯವನ್ನು ಗ್ರಹಿಕೊಂಡು ನಾನು ಹೋಗುತ್ತೆನೆ ಎಂದು ಹೇಳಿ ತನ್ನನ್ನು ಸೇವೆಗೆ ಸಮರ್ಪಿಸಿಕೊಂಡನು. ಅದೇ ರೀತಿಯಲ್ಲಿ ದೇವರು ಈ ದಿನಗಳಲ್ಲಿಯೂ ಸಹ ಜನರನ್ನು ಕರೆಯುತ್ತಿದ್ದಾನೆ. ದೇವರಿಗೆ ಯೆಶಾಯನಂತಹ ಸಮರ್ಪಣೆಯುಳ್ಳ ಸೇವಕರು ಬೇಕಾಗಿದ್ದರೆ.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಯೆಶಾಯ ಪ್ರವಾದನೆ ಪುಸ್ತಕ.*

## ಪ್ರಶ್ನೆಗಳು

1) ಯೆಶಾಯನು ಕಂಡ ದೇವದರ್ಶನವನ್ನು ವಿವರಿಸಿರಿ.


2) ಯೆಶಾಯನು ದೇವರ ಕರೆಯುವಿಕೆಗೆ ಹೇಗೆ ಪ್ರತಿಕ್ರೀಯಿಸಿದನು?

3) ದೇವರ ಕರೆಯುವಿಕೆಗೆ ನಿಮ್ಮ ಪ್ರತಿಕ್ರೀಯೆ ಏನು?

# ಯೋಷಿಯ

ಯೋಷಿಯನು ಯೆಹೂದರಾಜ್ಯದ ಅರಸನಾಗಿದ್ದನು. ಇವನು ತನ್ನ ಪೂರ್ವಿಕನಾದ ದಾವೀದನಂತೆ ನಡೆದು ದೇವರ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದನು. ಯೋಷಿಯನು ಯೆಹೋವನ ಆಲಯವನ್ನು ಜೀರ್ಣೋದ್ಧಾರ ಮಾಡುವುದಕ್ಕಾಗಿ ಸೇವಕರನ್ನು ನೇಮಿಸಿದನು. ಆಗ ದೇವಾಲಯದಲ್ಲಿ ಧರ್ಮೋಪದೇಶ ಗ್ರಂಥವು ಸಿಕ್ಕಿತು. ಅದನ್ನು ಅರಸನ ಮುಂದೆ ಓದಿದಾಗ ಯೋಷಿಯನು ತನ್ನ ಬಟ್ಟೆಗಳನ್ನು ಹರಿದುಕೊಂಡು ತನ್ನ ಸೇವಕರಿಗೆ– ನಮ್ಮ ಪೂರ್ವಿಕರುಗಳು ಈ ಗ್ರಂಥವಾಕ್ಯಗಳಿಗೆ ಕಿವಿಗೊಡದೆಯೂ ಕೈಗೊಳ್ಳದೆಯೂ ಹೋಗಿದ್ದರಿಂದ ನಾವು ಯೆಹೋವನ ಕೋಪಕ್ಕೆ ಗುರಿಯಾಗಿದ್ದೇವೆ. ಆದ್ದರಿಂದ ಈ ಗ್ರಂಥವಾಕ್ಯಗಳನ್ನು ಕುರಿತಾಗಿ ವಿಚಾರಿಸಿರಿ ಎಂದು ಆಜ್ಞಾಪಿಸಿದನು.

ಆ ಸೇವಕರು ಹುಲ್ದ ಎಂಬ ಪ್ರವಾದಿನಿಯ ಬಳಿಗೆ ಹೋಗಿ ವಿಚಾರಿಸಿದಾಗ ಅವಳು– ದೇವರು ಈ ದೇಶದ ಮೇಲೆ ಈ ಗ್ರಂಥದಲ್ಲಿ ಬರೆದಿರುವ ಎಲ್ಲಾ ಶಿಕ್ಷೆಗಳನ್ನು ಬರಮಾಡುತ್ತಾನೆ, ಆದರೆ ಯೋಷಿಯನು ಮಾತ್ರ ಈ ಗ್ರಂಥವಾಕ್ಯಗಳನ್ನು ಕೇಳಿ ಕಣ್ಣೀರು ಸುರಿಸಿದ್ದರಿಂದ, ಬಟ್ಟೆಗಳನ್ನು ಹರಿದುಕೊಂಡಿದ್ದರಿಂದ ಈ ಶಿಕ್ಷೆಗಳಲ್ಲಿ ಒಂದನ್ನೂ ನೋಡದೆ ಸಮಾದಾನದಿಂದ ಸಾಯುವನು ಎಂದು ತಿಳಿಸಿದಳು.



ಯೋಷಿಯನು ಯೆಹೂದ ರಾಜ್ಯದ ಊರುಗಳ ಹಿರಿಯರನ್ನು, ಎಲ್ಲಾ ಯಾಜಕರನ್ನು, ಪ್ರವಾದಿಗಳನ್ನು ಕರೆಯಿಸಿದನು. ಎಲ್ಲಾ ಜನರು ದೇವಾಲಯಕ್ಕೆ ಬಂದಾಗ ಅವನು ಧರ್ಮೋಪದೇಶ ಗ್ರಂಥವನ್ನು ಓದಿಸಿ ತಾನು ಯೆಹೋವನ ಮಾರ್ಗದಲ್ಲಿ ನಡೆಯುವುದಾಗಿಯೂ, ಆತನ ಆಜ್ಞಾವಿದಿಗಳನ್ನು ಪೂರ್ಣಮನಸ್ಸಿನಿಂದ ಮತ್ತು ಪೂರ್ಣಪ್ರಾಣದಿಂದ ಕೈಗೊಳ್ಳುವುದಾಗಿಯೂ, ಗ್ರಂಥದಲ್ಲಿ ಬರೆದಿರುವ ಎಲ್ಲಾ ವಾಕ್ಯಗಳನ್ನು ನೆರವೇರಿಸುವುದಾಗಿಯೂ ಯೆಹೋವನಿಗೆ ಪ್ರಮಾಣಮಾಡಿದನು. ಆಗ ಎಲ್ಲಾ ಜನರು ಸಹ ಪ್ರಮಾಣಮಾಡಿದರು.

ತರುವಾಯ ಯೋಷಿಯನು ಆಲಯದಲ್ಲಿದ್ದ ಬಾಳ, ಅಶೇರ ಎಂಬ ದೇವತೆಗಳಿಗಾಗಿ, ಆಕಾಶ ಸೈನ್ಯಕ್ಕಾಗಿ ಉಪಯೋಗಿಸುತ್ತಿದ್ದ ಎಲ್ಲಾ ಸಾಮಾನುಗಳನ್ನು ತರಿಸಿ ಯೆರೂಸಲೇಮಿನ ಹೊರಗೆ ಇರುವ ಕಿದ್ರೋನ್ ಬಯಲಿನಲ್ಲಿ ಸುಟ್ಟುಹಾಕಿಸಿದನು. ಯೆಹೂದ ಪ್ರಾಂತ್ಯದಲ್ಲಿನ ಪಟ್ಟಣಗಳಲ್ಲಿಯೂ ಯೆರೂಸಲೇಮಿನ ಸುತ್ತಣ ಪ್ರದೇಶಗಳಲ್ಲಿಯೂ ಇದ್ದ ಪೂಜಾಸ್ಥಳಗಳನ್ನು, ವಿಗ್ರಹಗಳಿಗೂ ಸೂರ್ಯ ಚಂದ್ರ ನಕ್ಷತ್ರಗಳೆನಿಸಿಕೊಳ್ಳುವ ಆಕಾಶ ಸೈನ್ಯಕ್ಕಾಗಿ ದೂಪ ಸುಡಲು ಯೆಹೂದ ಅರಸರು ನೇಮಿಸಿದ್ದ ಎಲ್ಲಾ ಪೂಜಾರಿಗಳನ್ನು ತೆಗೆದು ಹಾಕಿದನು. ಇಸ್ರಾಯೆಲರ ಅರಸನಾದ ಸೊಲೊಮೋನನು ಸ್ಥಾಪಿಸಿದ್ದ ಪೂಜಾಸ್ಥಳಗಳನ್ನು ನಾಶಮಾಡಿದನು.

ಯೋಷಿಯನು ಎಲ್ಲಾ ಜನರಿಗೆ– ಈ ಧರ್ಮೋಪದೇಶ ಗ್ರಂಥದಲ್ಲಿ ಬರೆದಿರುವ ಪ್ರಕಾರ ನೀವು ನಿಮ್ಮ ದೇವರಾದ ಯೆಹೋವನಿಗೆ ಪಸ್ಕ ಹಬ್ಬವನ್ನು ಆಚರಿಸಬೇಕು ಎಂದು ಆಜ್ಞಾಪಿಸಿದನು. ಇವನು ಆಚರಿಸಿದ ಪಸ್ಕ ಹಬ್ಬವು ಇಸ್ರಾಯೇಲರನ್ನು ಪಾಲಿಸಲು ನೇಮಿಸಿದ್ದ ನ್ಯಾಯಸ್ಥಾಪಕರ ಕಾಲದಲ್ಲಾಗಲಿ ಮತ್ತು ಯೆಹೂದ್ಯ ಅರಸರ ಕಾಲದಲ್ಲಾಗಲಿ ನಡೆಯಲೇ ಇಲ್ಲ. ಇದಲ್ಲದೆ ಅವನು ಸತ್ತವರಲ್ಲಿ ವಿಚಾರಿಸುವವರನ್ನೂ, ಬೆತಾಳಿಕರನ್ನೂ ತೆಗೆದುಹಾಕಿ ಧರ್ಮೋಪದೇಶದಲ್ಲಿ ಬರೆದಿದ್ದ ವಾಕ್ಯಗಳನ್ನು ನೆರವೇರಿಸಿದನು.

ಯೋಷಿಯನು ಯೆಹೋವನ ಕಡೆಗೆ ತಿರುಗಿಕೊಂಡು ಪೂರ್ಣಮನಸ್ಸಿನಿಂದಲೂ ಪೂರ್ಣಪ್ರಾಣದಿಂದಲೂ ಪೂರ್ಣಬಲದಿಂದಲೂ ಮೋಶೆಯ ಧರ್ಮಶಾಸ್ತ್ರವನ್ನು ಅನುಸರಿಸಿ ನಡೆದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: 2ಅರಸು:22–23 ಅಧ್ಯಾಯಗಳು.*

## ಪ್ರಶ್ನೆಗಳು

1) ಧರ್ಮಶಾಸ್ತ್ರವು ಎಲ್ಲಿ ಸಿಕ್ಕಿತು?


2) ಯೋಷಿಯನು ಧರ್ಮಶಾಸ್ತ್ರವನ್ನು ಓದಿದ ಮೇಲೆ ಹೇಗೆ ಪ್ರತಿಕ್ರೀಯಿಸಿದನು?

3) ಯೋಷಿಯನು ಮಾಡಿದ ಆತ್ಮೀಕ ಸುಧಾರಣೆಗಳನ್ನು ತಿಳಿಸಿರಿ.

4) ಯೋಷಿಯನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಯೆರೆಮೀಯ

ಯೆರೆಮಿಯಾನು ಯೆಹೂದ್ಯರಾಜ್ಯದಲ್ಲಿ ಪ್ರವಾದಿಯಾಗಿ ಸೇವೆ ಸಲ್ಲಿಸುತ್ತಿದ್ದನು.ಈತನನ್ನು ಪ್ರಲಾಪಿಸುವ ಪ್ರವಾದಿ ಅಥವಾ ಅಳುವ ಪ್ರವಾದಿ ಎಂದು ಕರೆಯುತ್ತಾರೆ. ಈತನು ಅನೇಕ ಹಿಂಸೆಗಳನ್ನು ಭಾದೆಗಳನ್ನು ಅನುಭವಿಸುತ್ತಾನೆ. ಯೆರೆಮಿಯಾನು ಚಿಕ್ಕ ಬಾಲಕನಿರುವಾಗಲೇ ದೇವರು ಅವನನ್ನು ಪ್ರವಾದಿಯಾಗಿ ನೇಮಿಸಿದನು. ಯೆರೆಮಿಯಾನು ನಾನು ಚಿಕ್ಕ ಬಾಲಕನು, ಮಾತು ಬಲ್ಲವನಲ್ಲ ಎಂದು ಹೇಳಿದರೂ ದೇವರು ಅವನನ್ನು ಜನಾಂಗಗಳ ಮೇಲೆ, ರಾಜ್ಯಗಳ ಮೇಲೆ ಪ್ರವಾದಿಯನ್ನಾಗಿ ನೇಮಿಸಿದನು.



ಯೆರೆಮಿಯಾನು ಯೆಹೂದ್ಯರಿಗೆ– ಪಾಪವನ್ನು ಬಿಟ್ಟು ಪಶ್ಚತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳಿರಿ, ಇಲ್ಲದಿದ್ದರೆ ಬ್ಯಾಬಿಲೋನಿನ ಅರಸನಾದ ನೆಬೂಕ್ಕದ್ನೇಚರನು ದಾಳಿಮಾಡಿ ನಿಮ್ಮನ್ನು ಸೆರೆಯಾಗಿ ಒಯ್ಯುವನು, ಅಲ್ಲಿ ನೀವು 70 ವರ್ಷ ಅವರಿಗೆ ದಾಸರಾಗಿರುವಿರಿ ಎಂದು ತಿಳಿಸಿದನು.

ದೇವರು ತನ್ನ ಮಾತುಗಳನ್ನು ಸುರುಳಿಯಲ್ಲಿ ಬರೆಯುವಂತೆ ಯೆರೆಮಿಯಾನಿಗೆ ತಿಳಿಸಿದನು. ಆಗ ಯೆರೆಮಿಯಾನು ಬಾರೂಕನನ್ನು ಅವನ ಮೂಲಕ ದೇವರ ಮಾತುಗಳನ್ನು ಬರೆಯಿಸಿದನು. ಈ ಗ್ರಂಥದ ಸುರುಳಿಯನ್ನು ಅರಸನಾದ ಯೆಹೋಯಾಕಿಮನು ಓದಿದಾಗ ಅದನ್ನು ಸುಟ್ಟುಹಾಕಿದನು. ಆದರೆ ದೇವರು ಮತ್ತೊಂದು ಸುರುಳಿಯನ್ನು ಬರೆಯಿಸಿದನು.

ಯೆಹೂದದ ಅರಸ ಚಿದ್ಕಿಯನು ಮತ್ತು ಜನರು ಯೆರೆಮಿಯಾನ ಮಾತುಗಳನ್ನು ಕೇಳದೆ ಹೋದರು. ಆಗ ಯೆರೆಮಿಯಾನು ಚಿದ್ಕಿಯನಿಗೆ– ದೇವರು ಈ ಪಟ್ಟಣವನ್ನು(ಯೆರೂಸಲೇಮ್) ಬಾಬೆಲ್ ಅರಸನ ವಶವಾಗುವುದು, ಬೆಂಕಿಯಿಂದ ಈ ಪಟ್ಟಣವು ಸುಡಲ್ಪಡುವುದು, ನೀನು ತಪ್ಪಿಸಿಕೊಳ್ಳಲಾರೆ ಎಂದು ಹೇಳಿದನು. ಆಗ ಪ್ರಧಾನರು ಇವನು ಯಾವಾಗಲೂ ಅಶುಭವನ್ನು ನುಡಿಯುತ್ತಾನೆಂದು ತಿಳಿದು ಅವನನ್ನು ಹೊಡೆಯಿಸಿ ಬಂದಿಖಾನೆಯಲ್ಲಿ ಹಾಕಿದರು. ಸ್ವಲ್ಪ ದಿವಸದ ನಂತರ ಯೆರೆಮಿಯಾನು ತನ್ನನ್ನು ಬಿಡಿಸುವಂತೆ ಚಿದ್ಕಿಯನನ್ನು ಕೇಳಿದಾಗ ಅವನು ಬಿಡಿಸಿ ಕಾರಾಗೃಹದ ಅಂಗಳದಲ್ಲಿಟ್ಟನು. ಯೆರೆಮಿಯಾನು ಮತ್ತೊಂದು ಸಾರಿ ಯೆರೂಸಲೇಮಿನ ಪತನದ ಕುರಿತು ಪ್ರವಾದಿಸಿದಾಗ ಅಲ್ಲಿನ ಅಧಿಕಾರಿಗಳು ಅವನನ್ನು ನೀರಿಲ್ಲದ ಬಾವಿಯಲ್ಲಿ ಹಾಕಿದರು. ಆದರೆ ಅರಮನೆಯ ಕಂಚುಕಿಯಾದ ಕೂಷ್ಯನು ಅರಸನನ್ನು ಬೇಡಿಕೊಂಡಿದ್ದರಿಂದ ಅರಸನ ಅನುಮತಿಯಂತೆ ಅವನನ್ನು ಬಾವಿಯಿಂದ ಮೇಲಕ್ಕೆ ಎತ್ತಿದರು.

ಯೆರೆಮಿಯಾನು ಚಿದ್ಕಿಯನಿಗೆ– ನೀನು ಬಾಬೆಲಿನ ಅರಸನ ಮೊರೆಹೊಕ್ಕರೆ ನಿನ್ನ ಪ್ರಾಣ ಉಳಿಯುವುದು, ಈ ಪಟ್ಟಣವೂ ಬೆಂಕಿಯಿಂದ ಸುಡಲಾರದು, ಇಲ್ಲದಿದ್ದರೆ ನಿನ್ನ ಕಣ್ಣುಗಳನ್ನು ಕೀಳಿಸುವನು ಎಂದು ತಿಳಿಸಿದನು. ಯೆರೆಮಿಯಾನು ಹೇಳಿದಂತೆ ನೆಬೂಕ್ಕದ್ನೆಚ್ಚರನು ಯೆರೂಸಲೇಮನ್ನು ವಶಪಡಿಸಿಕೊಂಡನು. ಚಿದ್ಕಿಯನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ ನೆಬೂಕ್ಕದ್ನೆಚ್ಚರನ ಸೈನಿಕರು ಅವನನ್ನು ಹಿಡಿದರು. ಅವನ ಮಕ್ಕಳನ್ನು ಕೊಂದುಹಾಕಿದರು. ಅವನ ಕಣ್ಣುಗಳನ್ನು ಕೀಳಿಸಿ ಬಾಬೆಲ್‌ನಲ್ಲಿ ಸೆರೆಯಿಟ್ಟರು. ದೇವಾಲಯವನ್ನು ಕೆಡವಿ, ಸುಟ್ಟುಹಾಕಿದರು. ದೇವಾಲಯದಲ್ಲಿದ್ದ ಸಾಮಾನುಗಳನ್ನು ಬಾಬೆಲಿಗೆ ತೆಗೆದುಕೊಂಡು ಹೋದರು.

ಬಾಬೆಲಿನ ಅರಸನಾದ ನೆಬೂಕ್ಕದ್ನೆಚ್ಚರನು ಕಾರಾಗೃಹದ ಅಂಗಳದಲ್ಲಿದ್ದ ಯೆರೆಮಿಯಾನನ್ನು ಯಾವ ಕೇಡುಮಾಡದೆ ಅವನು ಕೇಳುವುದನ್ನು ನೆರವೇರಿಸಿರಿ ಎಂದು ತನ್ನ ಸೈನಿಕರಿಗೆ ತಿಳಿಸಿದನು. ಯೆರೆಮಿಯಾನು ಬಿಡುಗಡೆ ಹೊಂದಿ ಜನರ ಮಧ್ಯದಲ್ಲಿ ವಾಸಿಸಿದನು.

ಇಸ್ರಾಯೇಲರು ದೇವರಿಗೆ ಅವಿಧೇಯರಾಗಿ ಅಸ್ಸೀರಿಯಾ ದೇಶಕ್ಕೆ ಸೆರೆಯಾಗಿ ಒಯ್ಯಲ್ಪಟ್ಟಂತೆ ಯೆಹೂದ್ಯರು ದೇವರಿಗೆ ಅವಿಧೇಯರಾಗಿ ಬಾಬೇಲ್ ದೇಶಕ್ಕೆ ಸೆರೆಯಾಗಿ ಒಯ್ಯಲ್ಪಟ್ಟಿತು.

ಹೆಚ್ಚಿನ ವಿವರಗಳಿಗಾಗಿ ಓದಿರಿ: ಯೆರೆಮಿಯಾ: 1, 21, 26, 34, 36, 37–40, 52 ಅಧ್ಯಾಯಗಳು.

## ಪ್ರಶ್ನೆಗಳು

1) ದೇವರು ಕರೆದಾಗ ಯೆರೆಮಿಯಾನು ಹೇಗೆ ಪ್ರತಿಕ್ರೀಯಿಸಿದನು?

2) ಯೆರೆಮಿಯಾನು ಯೆಹೂದರಾಜ್ಯಕ್ಕೆ ಏನು ಸಂಭವಿಸುತ್ತದೆಂದು ಪ್ರವಾದಿಸಿದನು?

3) ಯೆರೆಮಿಯಾನು ಎದುರಿಸಿದ ಸಮಸ್ಯೆಗಳನ್ನು ವಿವರಿಸಿರಿ.

4) ಯೆರೆಮಿಯಾನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಶದ್ರಕ್, ಮೇಶಕ್, ಅಬೇದ್‌ನೆಗೋ

ದೇವರು ಮೋಶೆಗೆ ನೀಡಿದ ಧರ್ಮಶಾಸ್ತ್ರದ ಆಜ್ಞಾವಿಧಿಗಳನ್ನು ಇಸ್ರಾಯೇಲರು ಕೈಗೊಂಡು ನಡೆಯದೆ ಅವುಗಳನ್ನು ಮೀರಿ ಪಾಪಮಾಡಿದ್ದರಿಂದ ಅವರು ದೇವರ ಕೋಪಕ್ಕೆ ಗುರಿಯಾದರು. ದೇವರು ಅವರನ್ನು ಶಿಕ್ಷಿಸುವುದಕ್ಕಾಗಿ ಅವರ ಸುತ್ತಲಿನ ರಾಜ್ಯಗಳನ್ನು ಎಬ್ಬಿಸಿದನು. ಬ್ಯಾಬಿಲೋನಿನ ಅರಸನಾದ ನೆಬುಕ್ಕದ್ನೆಚರನು ಯೆರೂಸಲೇಮನ್ನು ಮುತ್ತಿಗೆ ಹಾಕಿ ಎಲ್ಲಾ ಜನರನ್ನು ಬ್ಯಾಬಿಲೋನಿಗೆ ಸೆರೆಯಾಗಿ ಒಯ್ದನು. ಈ ರೀತಿಯಾಗಿ ಸೆರೆಯಾಗಿ ಬಂದವರಲ್ಲಿ ಶದ್ರೆಕ್, ಮೆಶಕ್, ಅಬೆದ್‌ನೆಗೋ ಎಂಬ ಯುವಕರು ಸಹ ಇದ್ದರು. ದಾನಿಯೇಲನು ಸಹ ಇದ್ದನು.



ದೇವರು ಈ ಯುವಕರಿಗೆ ಸಕಲ ಶಾಸ್ತ್ರಗಳಲ್ಲಿಯೂ ವಿಧ್ಯೆಗಳಲ್ಲಿಯೂ ಜ್ಞಾನ ವಿವೇಕಗಳನ್ನು ದಯಾಪಾಲಿಸಿದ್ದನು. ಇವರು ಬ್ಯಾಬಿಲೋನಿನಲ್ಲಿರುವ ಎಲ್ಲಾ ಜೋಯಿಸರಿಗಿಂತಲೂ ಮಂತ್ರವಾದಿಗಳಿಗಿಂತಲೂ ಹತ್ತರಷ್ಟು ನಿಪುಣರಾಗಿದ್ದರು. ನೆಬೂಕ್ಕದ್ನೇಚರನು ಇವರನ್ನು ಬಾಬೇಲ ಸಂಸ್ಥಾನದ ಕಾರ್ಯಭಾರವನ್ನು ವಹಿಸಿದನು.

ಅರಸನಾದ ನೆಬೂಕ್ಕದ್ನೆಚರನು 60 ಮೊಳ ಎತ್ತರದ 6 ಮೊಳ ಅಗಲದ ಒಂದು ಬಂಗಾರದ ಪ್ರತಿಮೆಯನ್ನು ಮಾಡಿಸಿ ಬಾಬೇಲ್ ಸಂಸ್ಥಾನದ ದೂರಾ ಎಂಬಲ್ಲಿ ನಿಲ್ಲಿಸಿದನು. ಅರಸನು ತಾನು ನಿಲ್ಲಿಸಿದ ಪ್ರತಿಮೆಯ ಪ್ರತಿಷ್ಠಾಪನೋತ್ಸವಕ್ಕೆ ಸಮಸ್ತ ಅಧಿಕಾರಿಗಳನ್ನು ಕರೆಯಿಸಿದನು. ಅರಸನ ಆಜ್ಞೆಯಂತೆ ವಿವಿಧ ಕುಲ ಭಾಷೆಗಳ ಜನರು ಮತ್ತು ಅಧಿಕಾರಿಗಳು ಬಂದರು. ಆಗ ಅರಸನು ನೆರೆದು ಬಂದ ಎಲ್ಲರಿಗೆ– ತುತ್ತೂರಿ, ಕೊಳಲು, ಕಿನ್ನರಿ, ತಂಬೂರಿ, ವೀಣೆ, ವಾಲಗ ಮುಂತಾದ ಸಕಲ ವಾಧ್ಯಗಳ ಧ್ವನಿಯನ್ನು ಕೇಳಿದ ಕೂಡಲೇ ನೀವು ನಾನು ನಿಲ್ಲಿಸಿದ ಬಂಗಾರದ ಪ್ರತಿಮೆಗೆ ಅಡ್ಡಬಿದ್ದು ಆರಾಧಿಸಬೇಕು ಎಂದು ಆಜ್ಞಾಪಿಸಿದನು. ಅರಸನ ಆಜ್ಞೆಯಂತೆ ಎಲ್ಲಾ ಜನರು ಅಡ್ಡಬಿದ್ದು ಆರಾಧಿಸಿದರು.

ಕೆಲವು ಬಾಬೇಲ್ ಪಂಡಿತರು ಅರಸನಿಗೆ– ಶದ್ರೆಕ್, ಮೇಶಕ್, ಅಬೆದ್‌ನೆಗೋ ಎಂಬುವವರು ನೀನು ನಿಲ್ಲಿಸಿದ ಪ್ರತಿಮೆಗೆ ಅಡ್ಡಬೀಳಲಿಲ್ಲ, ನಿನ್ನನ್ನು ಗೌರವಿಸಲಿಲ್ಲ ಎಂಬುದಾಗಿ ದೂರು ನೀಡಿದರು. ಇದನ್ನು ಕೇಳಿದ ಅರಸನು ಕೋಪಗೊಂಡು ಆ ಯುವಕರನ್ನು ಕರೆಯಿಸಿ ಅವರಿಗೆ– ನೀವು ವಾಧ್ಯಗಳ ಧ್ವನಿಯನ್ನು ಕೇಳಿದ ಕೂಡಲೆ ಅಡ್ಡಬಿದ್ದು ಆರಾಧಿಸಿರಿ ಇಲ್ಲದಿದ್ದರೆ ಬೆಂಕಿಯ ಆವಿಗೆಯೊಳಗೆ ಹಾಕಲ್ಪಡುವಿರಿ ಎಂದನು. ಆಗ ಆ ಯುವಕರು– ನಮ್ಮ ದೇವರಿಗೆ ಚಿತ್ತವಿದ್ದರೆ ಈ ಬೆಂಕಿಯಿಂದ ಬಿಡಿಸುವನು, ಒಂದು ವೇಳೆ ಚಿತ್ತವಿಲ್ಲದಿದ್ದರೂ ನೀನು ನಿಲ್ಲಿಸಿದ ಪ್ರತಿಮೆಗೆ ಅಡ್ಡ ಬೀಳುವುದಿಲ್ಲ ಎಂದು ಹೇಳಿದರು.

ಅರಸನು ಬೆಂಕಿಯನ್ನು ಏಳರಷ್ಟು ಹೆಚ್ಚಿಸಿ ಅವರನ್ನು ಕಟ್ಟಿ ಬೆಂಕಿಯಲ್ಲಿ ಹಾಕಿಸಿದನು. ಆದರೆ ಬೆಂಕಿಯು ಯುವಕರನ್ನು ಸುಡದೆ ಎತ್ತಿ ಹಾಕಿದವರನ್ನು ಸುಟ್ಟುಬಿಟ್ಟಿತು. ನೆಬೂಕ್ಕದ್ನೆಚರನು ಆ ಬೆಂಕಿಯನ್ನು ನೋಡುವಾಗ ಅದರಲ್ಲಿ 4 ಜನ ತಿರುಗಾಡುತ್ತಿರುವುದನ್ನು ಕಂಡನು. ನಾಲ್ಕನೆಯವನ ಮುಖ ದೇವಕುಮಾರನ ರೂಪದಂತಿತ್ತು. ಆಗ ಅರಸನು ಬೆಂಕಿಯ ಬಳಿಗೆ ಬಂದು ಆ ಯುವಕರನ್ನು ಕರೆದನು. ಅವರು ಬೆಂಕಿಯಿಂದ ಹೊರಗೆ ಬಂದರು. ಅವರ ತಲೆಗೂದಲು ಸುಟ್ಟಿರಲಿಲ್ಲ. ಬೆಂಕಿಯ ವಾಸನೆಯೇ ಮುಟ್ಟಿರಲಿಲ್ಲ.

ಅರಸನಾದ ನೆಬೂಕ್ಕದ್ನೆಚರನು ಶದ್ರಕ್ ಮೆಶಕ್ ಅಬೆದ್‌ನೆಗೋ ಎಂಬುವವರ ದೇವರಿಗೆ ಸ್ತೋತ್ರವಾಗಲಿ, ಸಕಲ ಜನಾಂಗ ಕುಲ ಭಾಷೆಗಳವರಲ್ಲಿ ಯಾರಾದರೂ ಇವರ ದೇವರ ವಿಷಯದಲ್ಲಿ ಅಲ್ಲದ ಮಾತನ್ನಾಡಿದರೆ ಅವರನ್ನು ಚೂರುಚೂರಾಗಿ ಕತ್ತರಿಸಿರಿ ಎಂದು ಆಜ್ಞಾಪಿಸಿದನು. ನಂತರ ಅರಸನು ಆ ಯುವಕರನ್ನು ಬಾಬೇಲ್ ಸಂಸ್ಥಾನದಲ್ಲಿ ಉನ್ನತ ಪದವಿಗೆ ನೇಮಿಸಿದನು.

*ಹೆಚ್ಚಿನ ವಿವರಗಳಿಗಾಗಿ: ದಾನಿಯೇಲ್ 1 ಮತ್ತು 3 ಅಧ್ಯಾಯಗಳು.*

## ಪ್ರಶ್ನೆಗಳು

1) ನೆಬೂಕ್ಕದ್ನೆಚ್ಚರನು ಎಲ್ಲಾ ಅಧಿಕಾರಿಗಳಿಗೆ ಕೊಟ್ಟ ಆಜ್ಞೆ ಯಾವುದು?

2) ಬಾಬೇಲ್‌ನ ಪಂಡಿತರು ಶದ್ರಕ್ ಮೇಶಕ್ ಅಬೆದ್‌ನೆಗೋ ಎಂಬುವವರ ಮೇಲೆ ಏನೆಂದು ದೂರು ನೀಡಿದರು?

3) ಯುವಕರು ಅರಸನಿಗೆ ಯಾವ ಉತ್ತರ ನೀಡಿದರು?

4) ಈ ಯುವಕರ ಮೂಲಕ ನಾವೇನನ್ನು ಕಲಿಯುತ್ತೇವೆ?

# ದಾನಿಯೇಲ

ಬ್ಯಾಬಿಲೋನಿನ ಅರಸನಾದ ನೆಬೂಕ್ಕದ್ನೆಚರನು ಯೆರೂಸಲೇಮನ್ನು ಮುತ್ತಿಗೆ ಹಾಕಿ ಇಸ್ರಾಯೇಲರನ್ನು ತನ್ನ ದೇಶಕ್ಕೆ ಸೆರೆಯಾಗಿ ತಂದಿದ್ದವರಲ್ಲಿ ದಾನಿಯೇಲನು ಒಬ್ಬನಾಗಿದ್ದನು. ದಾನಿಯೇಲನು ಸಮಸ್ತ ಸ್ವಪ್ನಗಳನ್ನು ದಿವ್ಯದರ್ಶನಗಳನ್ನು ಗ್ರಹಿಸುವುದರಲ್ಲಿ ನಿಪುಣನಾಗಿದ್ದನು. ಬಾಬೇಲನ ಎಲ್ಲಾ ಜೋಯಿಸರು, ಪಂಡಿತರಿಗಿಂತ ಹತ್ತರಷ್ಟು ಹೆಚ್ಚು ಜ್ಞಾನವುಳ್ಳವನಾಗಿದ್ದನು. ಇವನು ಅರಸನ ಸನ್ನಿಧಿ ಸೇವಕನಾಗಿ ಕಾರ್ಯನಿರ್ವಹಿಸುತ್ತಿದ್ದನು.

ಅರಸನಿಗೆ ಒಂದು ಅದ್ಭುತ ಪ್ರತಿಮೆಯ ಕನಸು ಬಿದ್ದಿತು. ಆ ಪ್ರತಿಮೆಯ ತಲೆ ಬಂಗಾರದು, ಎದೆ ತೋಳು ಬೆಳ್ಳಿಯದು, ಹೊಟ್ಟೆ ಸೊಂಟಗಳು ತಾಮ್ರ, ಕಾಲುಗಳು ಕಬ್ಬಿಣ, ಹೆಜ್ಜೆಗಳು ಕಬ್ಬಿಣ ಮತ್ತು ಮಣ್ಣಿನಿಂದ ಕೂಡಿತ್ತು. ಈ ಪ್ರತಿಮೆಗೆ ಒಂದು ದೊಡ್ಡ ಕಲ್ಲು ಬಂದು ಬಡಿದು ದೊಡ್ಡ ಪರ್ವತವಾಯಿತು. ಈ ಕನಸಿನ ಅರ್ಥವನ್ನು ದಾನಿಯೇಲನು ಮುಂದೆ ಬರುವ ರಾಜ್ಯಗಳ ಕುರಿತಾಗಿ ಮತ್ತು ದೇವರ ರಾಜ್ಯದ ಕುರಿತಾಗಿ ತಿಳಿಸಿದಾಗ ರಾಜನು ಅವನನ್ನು ಎಲ್ಲಾ ವಿದ್ವಾಂಸರ ಮೇಲೆ ಮುಖ್ಯಸ್ಥನನ್ನಾಗಿ ನೇಮಿಸಿದನು.



ಅರಸನಿಗೆ ಮತ್ತೊಂದು ಕನಸು ಬಿದ್ದಿತು. ಒಂದು ಎತ್ತರವಾದ ಮರವಿತ್ತು, ಎಲ್ಲಾರಿಗೂ ಆಶ್ರಯ ನೀಡುತಿತ್ತು. ಆಗ ಒಬ್ಬ ದೇವದೂತನು ಬಂದು ಅದನ್ನು ಕಡಿಯಿರಿ, ಅದಕ್ಕೆ ಮನುಷ್ಯ ಹೃದಯ ಹೋಗಿ ಮೃಗದ ಹೃದಯ ಬರಲಿ, ಹೀಗೆ ಅದಕ್ಕೆ ಏಳು ವರ್ಷ ಕಳೆಯಲಿ ಎಂದನು. ದಾನಿಯೇಲನು ಅರಸನಿಗೆ– ಅರಸನೇ ಇದು ನಿನಗಾಗಿ ಉಂಟಾಗಿರುವ ದೇವರ ತೀರ್ಪು, ನೀನು ಬೆಳೆದು ಬಲಗೊಂಡಿದ್ದಿ, ನಿನ್ನ ಮಹಿಮೆ ಆಕಾಶಕ್ಕೆ ಮುಟ್ಟಿದೆ, ಆದರೆ ದೇವದೂತನು ಕಡಿಯಿರಿ ಎಂದು ಹೇಳಿದ್ದರ ಅರ್ಥವೇನೆಂದರೆ ನೀನು ಕಾಡು ಮೃಗಗಳೊಂದಿಗೆ ವಾಸಿಸುವಿ, ದನಗಳಂತೆ ಮೇವು ತಿನ್ನುವಿ, ಹೀಗೆ ಏಳು ವರ್ಷ ಕಳೆಯುವುದು– ಎಂದು ಈ ಕನಸಿನ ಅರ್ಥವನ್ನು ತಿಳಿಸಿದನು. ಆ ಕನಿಸಿನಂತೆ ಅರಸನು ಕಾಡು ಮೃಗಗಳೊಂದಿಗೆ ವಾಸಿಸಿದನು, ಮೇವನ್ನು ತಿಂದನು.

ಅರಸನಾದ ಬೆಲೆಚ್ಚರನು ಔತಣಮಾಡಿಸಿ ಯೆರೂಸಲೇಮಿನ ದೇವಾಲಯದಿಂದ ನೆಬೂಕ್ಕದ್ನೆಚ್ಚರನು ತಂದಿದ್ದ ಬಂಗಾರದ ಪಾತ್ರೆಗಳಲ್ಲಿ ದ್ರಾಕ್ಷಾರಸವನ್ನು ಕುಡಿದನು. ಆಗ ಒಬ್ಬನ ಕೈಯ ಬೆರಳುಗಳು ಬರಹ ಬರೆದವು. ಆ ಬರಹದ ಅರ್ಥವನ್ನು ತಿಳಿಸಲು ದಾನಿಯೇಲನನ್ನು ಕರೆಯಿಸಿದರು. ಅವನು ಅರಸನಿಗೆ– ನೀನು ದೇವರ ಆಲಯದ ಪಾತ್ರೆಗಳಲ್ಲಿ ಕುಡಿದಿದ್ದರಿಂದ ಆತನ ಹಸ್ತವು ಈ ಬರಹವನ್ನು ಬರೆದಿದೆ, ನಿನ್ನ ರಾಜ್ಯವು ಮೇದ್ಯರ ಮತ್ತು ಪಾರಸಿಯರ ಪಾಲಾಗುವುದೆಂಬುವುದು ಈ ಬರಹದ ಅರ್ಥವೆಂದು ಹೇಳಿದನು. ಆಗ ಅರಸನು ದಾನಿಯೇಲನನ್ನು ರಾಜ್ಯದ ಮೂವರು ಮುಖ್ಯ ಅಧಿಕಾರಿಗಳಲ್ಲಿ ಒಬ್ಬನನ್ನಾಗಿ ನೇಮಿಸಿದನು. ಅದೇ ರಾತ್ರಿಯಲ್ಲಿ ಬೇಲೆಚ್ಚರನು ಕೊಲ್ಲಲ್ಪಟ್ಟನು.

ಮೇದ್ಯರ ಅರಸನಾದ ದಾರ್ಯಾವೇಷನ ಆಳ್ವಿಕೆಯಲ್ಲಿ ದಾನಿಯೇಲನು ಯೆರೂಸಲೇಮಿನ ಕಡೆಗೆ ಮುಖಮಾಡಿ ಪ್ರತಿದಿನ ಮೂರು ಸಾರಿ ಪ್ರಾರ್ಥನೆ ಮಾಡುತ್ತಿದ್ದನು. ಇವನ ಮೇಲೆ ತಪ್ಪು ಹೊರಿಸುವುದಕ್ಕಾಗಿ ಇತರ ಬೇರೆ ಅಧಿಕಾರಿಗಳು ಅರಸನಿಗೆ ದೂರು ನೀಡಿದರು. ಅರಸನ ಆಜ್ಞೆಯಂತೆ ಅರಸನನ್ನಲ್ಲದೆ ಬೇರೆ ದೇವರನ್ನು ಸೇವಿಸಬಾರದಿತ್ತು. ಹಾಗಾಗಿ ದಾನಿಯೇಲನನ್ನು ಸಿಂಹದ ಗವಿಯೊಳಗೆ ಹಾಕಿದರು. ದಾನಿಯೇಲನಿಗಾಗಿ ಅರಸನು ಆ ದಿನ ರಾತ್ರಿಯನ್ನು ಉಪವಾಸವಾಗಿ ಕಳೆದನು. ಅರಸನು ಬೆಳಿಗ್ಗೆ ಎದ್ದು ದಾನಿಯೇಲನನ್ನು ಗವಿಯ ಹೊರಗಿನಿಂದ ಕೂಗಿದನು. ಆಗ ದಾನಿಯೇಲನು ರಾತ್ರಿಯಲ್ಲಿ ಒಬ್ಬ ದೇವದೂತನು ಬಂದು ಸಿಂಹದ ಬಾಯಿಯನ್ನು ಬಂಧಿಸಿ ನನ್ನನ್ನು ಕಾಪಾಡಿದನು ಎಂದು ಹೇಳಿದನು. ಅರಸನು ದಾನಿಯೇಲನ ವಿರುದ್ದವಾಗಿ ತಂತ್ರ ಹೂಡಿದವರನ್ನು ಸಿಂಹದ ಗವಿಯಲ್ಲಿ ಹಾಕಿದಾಗ ಸಿಂಹಗಳು ಅವರನ್ನು ತಿಂದುಹಾಕಿದವು.

*ಹೆಚ್ಚಿನ ವಿವರಗಳಿಗಾಗಿ: ದಾನಿಯೇಲನ ಪುಸ್ತಕ*

## ಪ್ರಶ್ನೆಗಳು

1) ದಾನಿಯೇಲನು ಪ್ರತಿಮೆಯ ಕನಸಿನ ಅರ್ಥವನ್ನು ಹೇಗೆ ವಿವರಿಸಿದನು?

2) ಗೋಡೆಯ ಮೇಲೆ ಯಾರು ಬರಹವನ್ನು ಬರೆದರು ಮತ್ತು ಅದರ ಅರ್ಥವನ್ನು ತಿಳಿಸಿರಿ.


3) ದಾನಿಯೇಲನು ಯಾಕೆ ಸಿಂಹದ ಗವಿಯಲ್ಲಿ ಹಾಕಲ್ಪಟ್ಟನು?

4) ದಾನಿಯೇಲನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಜೆರುಬ್ಬಾಬೆಲ್

ಪರ್ಶಿಯಾದ ಅರಸನಾದ ಕೋರೇಷನು ಬ್ಯಾಬಿಲೋನಿನಲ್ಲಿ ಸೆರೆಯಾಗಿದ್ದ ಇಸ್ರಾಯೇಲರನ್ನು ಬಿಡುಗಡೆ ಮಾಡುವಂತೆ ಮತ್ತು ದೇವರ ಆಲಯವನ್ನು ಕಟ್ಟಲು ಆಜ್ಞಾಪಿಸುವಂತೆ ದೇವರು ಅವನನ್ನು ಪ್ರೇರೇಪಿಸಿದನು. ಆಗ ಅರಸನಾದ ಕೋರೇಷನು ಇಸ್ರಾಯೇಲರಿಗೆ– ನಿಮ್ಮಲ್ಲಿ ಯಾರು ದೇವರ ಪ್ರಜೆಗಳಾಗಿದ್ದಿರೋ ಅವರು ಯೆರೂಸಲೇಮಿಗೆ ಹೋಗಿ ದೇವರ ಆಲಯವನ್ನು ಕಟ್ಟಿರಿ ಮತ್ತು ಇನ್ನೂ ಉಳಿದವರು ಆಲಯಕ್ಕಾಗಿ ಕಾಣಿಕೆಗಳನ್ನು ಕೊಟ್ಟು ಸಹಾಯ ಮಾಡಲಿ ಎಂದು ಆಜ್ಞಾಪಿಸಿದನು.

ಜೆರುಬ್ಬಾಬೆಲನ ನಾಯಕತ್ವದಲ್ಲಿ ದೇವರ ಪ್ರೇರಣೆಗೊಳಗಾದವರೆಲ್ಲರೂ ಯೆರೂಸಲೇಮಿಗೆ ಬಂದರು. ನೆಬೂಕ್ಕದ್ನೆಚರನು ಯೆರೂಸಲೇಮಿನಿಂದ ಕೊಳ್ಳೆಯಾಗಿ ತಂದಿದ್ದ ದೇವರ ಆಲಯದ ಸಾಮಾನುಗಳನ್ನು ಜನರು ಕೊಟ್ಟ ಕಾಣಿಕೆಗಳನ್ನು ತಂದರು. ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆದಿರುವ ಪ್ರಕಾರ ಸರ್ವಾಂಗ ಹೋಮಗಳನ್ನು ಸಮರ್ಪಿಸುವುದಕ್ಕಾಗಿ ಜೆರುಬ್ಬಾಬೆಲನೂ ಮತ್ತು ಅವನ ಬಂಧುಗಳು ಯಜ್ಞವೇದಿಯನ್ನು ಕಟ್ಟಿದರು. ಶಾಸ್ತ್ರದಲ್ಲಿ ಬರೆದಿರುವಂತೆ ಬೆಳಿಗ್ಗೆ ಮತ್ತು ಸಾಯಂಕಾಲ ಸಮಯದಲ್ಲಿ ಸರ್ವಾಂಗ ಹೋಮಗಳನ್ನರ್ಪಿಸಿದರು.



ಜೆರುಬ್ಬಾಬೆಲನು ಕೋರೇಷನ ಅಪ್ಪಣೆಯ ಮೇರೆಗೆ ಆಲಯದ ಅಸ್ತಿವಾರವನ್ನು ಹಾಕಲು ಕಲ್ಲುಕುಟಿಗ, ಬಡಗಿಯವರಿಗೆ ಹಣವನ್ನು ನೀಡಿದನು. ದೇವರ ಆಲಯದ ಅಸ್ತಿವಾರವನ್ನು ಹಾಕಿದಾಗ ಇಸ್ರಾಯೇಲರ ಅರಸನಾದ ದಾವೀದನು ನೇಮಿಸಿದ ಕ್ರಮಕ್ಕನುಸಾರವಾಗಿ ಯೆಹೋವನನ್ನು ಕೀರ್ತಿಸಲು ಯಾಜಕರು ತುತ್ತೂರಿಗಳನ್ನು ಹಾಡುತ್ತಾ ಕೀರ್ತಿಸುತ್ತಾ– ದೇವರು ಒಳ್ಳೆಯವನು, ಆತನ ಕೃಪೆಯು ಇಸ್ರಾಯೇಲರ ಮೇಲೆ ಶಾಶ್ವತವಾಗಿದೆ ಎಂದು ಸ್ತುತಿಸಿದರು. ಎಲ್ಲಾ ಜನರು ಉತ್ಸಾಹದಿಂದ ಆರ್ಭಟಿಸಿದರು. ಆದರೆ ಸಮಾರ್ಯದವರು ದೇವರ ಆಲಯವನ್ನು ಕಟ್ಟುವುದಕ್ಕೆ ಅಡ್ಡಿಮಾಡಿದರು.

ಪರ್ಶಿಯಾದ ಅರಸನಾದ ದರ್ಯಾವೇಷನ ಕಾಲದಲ್ಲಿ ಪ್ರವಾದಿಗಳಾದ ಹಗ್ಗಾಯ, ಜೆಕರ್ಯ ಇವರು ದೇವರಿಂದ ಪ್ರೇರಿತರಾಗಿ ಇಸ್ರಾಯೇಲರನ್ನು ಪ್ರಭೋದಿಸಿದಾಗ ಜೆರುಬ್ಬಾಬೆಲನು ಮತ್ತು ಇವರು ದೇವಾಲಯವನ್ನು ಕಟ್ಟಲು ಪ್ರಾರಂಭಿಸಿದರು. ಆಗ ಹೊಳೆಯ ಈಚೆಯ ಪ್ರದೇಶಗಳ ಅಧಿಪತಿಗಳು ಬಂದು ಇಸ್ರಾಯೇಲರನ್ನು ಆಲವನ್ನು ಕಟ್ಟಲಿಕ್ಕೆ ಯಾರು ಅಪ್ಪಣೆ ಕೊಟ್ಟರು ಎಂದು ವಿಚಾರಿಸಿದಾಗ ಇಸ್ರಾಯೇಲರು ಕೋರೇಷನು ಅನುಮತಿಸಿದನು ಎಂದು ಉತ್ತರ ಕೊಟ್ಟರು. ಆಗ ಆ ಅಧಿಪತಿಗಳು ದಾರ್ಯಾವೇಷನಿಗೆ ಪತ್ರ ಬರೆದು– ಈ ಆಲಯ ಕಟ್ಟಲಿಕ್ಕೆ ಕೋರೇಷನಿಂದ ಅಪ್ಪಣೆ ದೊರಕಿದ್ದು ಸತ್ಯವೋ ಎಂಬುದರ ವಿಷಯವಾಗಿ ಬಾಬೆಲಿನ ಅರಸರ ಭಂಡಾರದಲ್ಲಿ ಹುಡುಕಿ ನೋಡಿರಿ ಎಂದು ತಿಳಿಸಿದರು. ದಾರ್ಯಾವೇಷನು ಗ್ರಂಥ ಸಂಗ್ರಹವಾಗಿದ್ದ ಬಾಬೆಲಿನ ಭಂಡಾರದಲ್ಲಿ ಹುಡುಕಿದಾಗ ಒಂದು ಸುರುಳಿ ಸಿಕ್ಕಿರಲು ಅದರಲ್ಲಿ– ಕೋರೇಷನು ದೇವಾಲಯವನ್ನು ಕಟ್ಟಲು ಅನುಮತಿಯನ್ನು ನೀಡಿದ್ದು ಲಿಖಿತವಾಗಿತ್ತು. ಆಗ ದಾರ್ಯಾವೇಷನು ಹೊಳೆಯ ಈಚೆಯ ಅಧಿಪತಿಗಳಿಗೆ ಪತ್ರವನ್ನು ಬರೆದು– ನೀವು ಇಸ್ರಾಯೇಲರಿಗೆ ಆಲಯ ಕಟ್ಟಲು ಅಡ್ಡಿಮಾಡಬೇಡಿರಿ ಮತ್ತು ನೀವು ಸಹ ಆಲಯ ಕಟ್ಟಲು ಕಪ್ಪಕಾಣಿಕೆಗಳನ್ನು ನೀಡಬೇಕೆಂದು ಆಜ್ಞಾಪಿಸಿದನು. ಮತ್ತು ಆಜ್ಞೆಯನ್ನು ಮೀರಿದವರನ್ನು ಕೊಲ್ಲಬೇಕೆಂದು ಅಪ್ಪಣೆ ನೀಡಿದನು. ಇಸ್ರಾಯೇಲರು ದೇವರ ಆಜ್ಞಾನುಸಾರವಾಗಿಯೂ ಮತ್ತು ಪರ್ಶಿಯಾದ ಅರಸನಾದ ಕೋರೇಷ, ದಾರ್ಯಾವೇಷನ ಅಪ್ಪಣೆಯ ಆಧಾರದಿಂದಲೂ ದೇವರ ಆಲಯವನ್ನು ಕಟ್ಟಿ ಅದರ ಪ್ರತಿಷ್ಠೆಯನ್ನು ಆಚರಿಸಿದರು. ಯಾಜಕರನ್ನು ಧರ್ಮಾಶಾಸ್ತ್ರದ ನಿಯಮದಂತೆ ಸೇವೆಗೆ ನೇಮಿಸಿದರು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಎಜ್ರ ಪುಸ್ತಕ*

## ಪ್ರಶ್ನೆಗಳು

1) ಕೊರೇಷನು ಯೆಹೂದ್ಯರಿಗೆ ಏನೆಂದು ಅಪ್ಪಣೆ ನೀಡಿದನು?

2) ಜೆರುಬ್ಬಾಬೆಲನು ದೇವಾಲಯಕ್ಕೆ ಅಸ್ತಿವಾರವನ್ನು ಹಾಕಿಸಿದ ಸಂದರ್ಭವನ್ನು ವಿವರಿಸಿ.

3) ದೇವಾಲಯವನ್ನು ಕಟ್ಟಲಿಕ್ಕೆ ಯಾರು ಅಡ್ಡಿಮಾಡಿದರು? ಮತ್ತು ಆ ಪರಿಸ್ಥಿತಿಯು ಹೇಗೆ ಬಗೆಹರಿಯಿತು?

4) ಜೆರುಬ್ಬಾಬೆಲನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಎಜ್ರ

ಎಜ್ರನು ಇಸ್ರಾಯೇಲ ದೇವರಾದ ಯೆಹೋವನ ಧರ್ಮಶಾಸ್ತ್ರವನ್ನು ಉಪದೇಶಿಸುವುದರಲ್ಲಿ ಪಾರಾಂಗತನಾದ ಶಾಸ್ತ್ರಿಯಾಗಿದ್ದನು. ಅವನು ಯೆಹೋವನ ಧರ್ಮಶಾಸ್ತ್ರವನ್ನು ಅಭ್ಯಾಸಿಸಿ ಅನುಸರಿಸಲಿಕ್ಕೂ ಮತ್ತು ಇಸ್ರಾಯೇಲರಿಗೆ ಅದರ ವಿಧಿವಿಧಾನಗಳನ್ನು ಕಲಿಸಲಿಕ್ಕೂ ದೃಢಮಾಡಿಕೊಂಡಿದ್ದನು. ಪರ್ಶಿಯಾದ ಅರಸನಾದ ಅರ್ತಷಸ್ತನು ಎಜ್ರನಿಗೆ ಪತ್ರವನ್ನು ಬರೆದು ಎಜ್ರನು ಮತ್ತು ಇಸ್ರಾಯೇಲ ಜನರು ತಮ್ಮ ದೇಶಕ್ಕೆ ಹೋಗುವಂತೆ, ಧರ್ಮಶಾಸ್ತ್ರದಲ್ಲಿ ನೇಮಿಸಿದ್ದನ್ನೆಲ್ಲಾ ಆಚರಿಸುವಂತೆ ತಿಳಿಸಿದನು. ದೇವಾಲಯಕ್ಕಾಗಿ ಬೆಳ್ಳಿಬಂಗಾರ, ಧಾನ್ಯದ್ರವ್ಯ, ಪಾನದ್ರವ್ಯ ಮೊದಲಾದ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿದನು. ದೇವರ ಆಲಯಕ್ಕಾಗಿ ಬೇರೆ ಯಾವುದನ್ನಾದರು ವೆಚ್ಚಮಾಡಬೇಕಾದರೆ ಅದನ್ನು ರಾಜ ಭಂಡಾರದಿಂದ ವೆಚ್ಚಮಾಡಲು ತಿಳಿಸಿದನು.

ಅರಸನ ಅನುಮತಿಯನ್ನು ಪಡೆದು ಎಜ್ರನು ಇಸ್ರಾಯೇಲ ಜನರೊಂದಿಗೆ ಯೆರೂಸಲೇಮಿಗೆ ಬರುವಾಗ ಆಹವಾ ಎಂಬ ನದಿಯ ಬಳಿಯಲ್ಲಿ ಉಪವಾಸದಿಂದ ದೇವರು ತಮಗೆ ಶುಭವನ್ನು ಉಂಟುಮಾಡುವಂತೆ ಪ್ರಾರ್ಥಿಸಿದನು. ದೇವರು ಅವರಿಗೆ ಪ್ರಸನ್ನನಾದನು. ದೇವರ ಹಸ್ತವು ಅವರನ್ನು ಪರಿಪಾಲಿಸಿತು. ದೇವರು ಅವರನ್ನು ಶತೃಗಳ ಮತ್ತು ದಾರಿಯಲ್ಲಿ ಹೊಂಚುಹಾಕುವವರ ಕೈಗೆ ಸಿಕ್ಕದಂತೆ ಕಾಪಾಡಿದನು. ಇಸ್ರಾಯೇಲ ಜನರು ಸೆರೆಯಿಂದ ಯೆರೂಸಲೆಮಿಗೆ ಬಂದು ಯೆಹೋವನಿಗೆ 96 ಟಗರುಗಳನ್ನು, 77 ಕುರಿಗಳನ್ನು, ಎಲ್ಲಾ ಇಸ್ರಾಯೇಲರ ನಿಮಿತ್ತವಾಗಿ 12 ಹೋರಿಗಳನ್ನು, ದೋಷಪರಿಹಾರಾರ್ಥವಾಗಿ 12 ಹೋತಗಳನ್ನು ಸರ್ವಾಂಗ ಹೋಮವಾಗಿ ಸಮರ್ಪಿಸಿದರು.

ಇಸ್ರಾಯೇಲಿನ ಪ್ರಧಾನ ಪುರುಷರು ಎಜ್ರನಿಗೆ ಇಸ್ರಾಯೇಲಿನಲ್ಲಿ ಸಾಧಾರಣ ಜನರೂ, ಯಾಜಕರೂಲೇವಿಯರು ಅನ್ಯದೇಶಗಳವರ ಬಳಕೆಯನ್ನು ತೊರೆಯದೆ ಅವರ ಅಸಹ್ಯಕಾರ್ಯಗಳನ್ನು ಅನುಸರಿಸಿ ತಮಗೂ ತಮ್ಮ ಗಂಡುಮಕ್ಕಳಿಗೂ ಅವರ ಹೆಣ್ಣು ಮಕ್ಕಳನ್ನು ತೆಗೆದುಕೊಂಡಿದ್ದರಿಂದ ದೇವಕುಲವು ಅನ್ಯದೇಶಗಳವರೊಡನೆ ಮಿಶ್ರವಾಯಿತು. ಪ್ರಭುಗಳೂ ಪ್ರಧಾನರು ಈ ದ್ರೋಹಕ್ಕೆ ಮುಂದಾಳಾದರು ಎಂದು ತಿಳಿಸಿದರು. ಈ ವರ್ತಮಾನವನ್ನು ಕೇಳಿ ಎಜ್ರನು ಬಟ್ಟೆಗಳನ್ನು ಹರಿದುಕೊಂಡು ತಲೆಯ ಮತ್ತು ಗಡ್ಡ ಕೂದಲುಗಳನ್ನು ಕಿತ್ತುಕೊಂಡು ಸ್ತಬ್ದನಾಗಿ ಕೂತುಕೊಂಡನು. ನಂತರ ಸಾಯಾಂಕಾಲ ಮೊಣಕಾಲೂರಿ ದೇವರಿಗೆ– ನಾವು ಪಾಪಿಗಳು, ನಮ್ಮನ್ನು ಕ್ಷಮಿಸು, ನಾವು ನಿನ್ನ ಆಜ್ಞೆಗಳಿಗೆ ಅವಿಧೇಯರಾಗಿದ್ದೇವೆ, ನೀನು ನಮ್ಮನ್ನು ಕೈಬಿಡಬೇಡ ಎಂದು ಪ್ರಾರ್ಥಿಸಿದನು.



ಎಜ್ರನು ದೇವಾಲಯದ ಮುಂದೆ ಅಡ್ಡಬಿದ್ದು ಅಳುತ್ತಾ ವಿಜ್ಞಾಪನೆಯನ್ನೂ ಪಾಪನಿವೇದನೆಯನ್ನು ಮಾಡುತ್ತಿರುವಾಗ ಎಲ್ಲಾ ಇಸ್ರಾಯೇಲರು ಅವನ ಬಳಿಗೆ ಬಂದು ಅವರೂ ಸಹ ಬಹಳವಾಗಿ ಅತ್ತರು. ಆಗ ಶೆಕನ್ಯನು ಎಜ್ರನಿಗೆ– ನಾವು ಮದುವೆಯಾದ ಅನ್ಯದೇಶದ ಎಲ್ಲಾ ಹೆಂಡತಿಯರನ್ನು ಮತ್ತು ಅವರ ಮಕ್ಕಳನ್ನು ಕಳುಹಿಸಿಬಿಡುವುದಾಗಿ ತಿಳಿಸಿದನು. ಆಗ ಎಲ್ಲಾ ಜನರು ತಮ್ಮ ಅನ್ಯದೇಶದ ಹೆಂಡತಿಯರನ್ನು ಮತ್ತು ಅವರ ಮಕ್ಕಳನ್ನು ಕಳಿಸಿಬಿಡುವುದಾಗಿ ದೇವರಿಗೆ ಪ್ರತಿಜ್ಞೆಯನ್ನು ಮಾಡಿದರು. ಎಜ್ರನು ಒಂದು ಕೊಠಡಿಗೆ ಹೋಗಿ ಅಲ್ಲಿ ಸೆರೆಯಿಂದ ಬಂದವರ ನಿಮಿತ್ತ ದುಃಖಿಸುತ್ತಾ ಅನ್ನಪಾನಗಳನ್ನು ತೆಗೆದುಕೊಳ್ಳದೆ ರಾತ್ರಿಯನ್ನು ಕಳೆದನು. ನಂತರ ಎಲ್ಲಾ ಇಸ್ರಾಯೇಲರು ತಮ್ಮ ಅನ್ಯದೇಶದ ಹೆಂಡತಿ ಮಕ್ಕಳನ್ನು ಕಳುಹಿಸಿಬಿಟ್ಟರು.

ಎಜ್ರನು ಒಬ್ಬ ಸಮರ್ಥ ನಾಯಕನಾಗಿದ್ದು ತನ್ನ ಜನರ ಕುರಿತಾಗಿ ವಿಶೇಶವಾದ ಕಾಳಜಿಯುಳ್ಳವನಾಗಿದ್ದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಎಜ್ರನ ಪುಸ್ತಕ*

**ಪ್ರಶ್ನೆಗಳು**

1) ಎಜ್ರನು ತನ್ನನ್ನು ಯಾವುದಕ್ಕೆ ಸಮರ್ಪಿಸಿಕೊಂಡಿದ್ದನು?

2) ಅರ್ತಷಸ್ತನು ಪತ್ರದ ಮೂಲಕ ಎಜ್ರನಿಗೆ ಏನನ್ನು ತಿಳಿಸಿದನು?

3) ಎಜ್ರನು ದೇವರಲ್ಲಿ ತನ್ನ ಜನರ ಪಾಪಕ್ಷಮೆಗಾಗಿ ವಿಜ್ಞಾಪಿಸಿದ್ದನ್ನು ವಿವರಿಸಿರಿ.

4) ಎಜ್ರನ ಮೂಲಕ ನಾವೇನನ್ನು ಕಲಿಯುತ್ತೇವೆ?

# ನೆಹೆಮಿಯ

ನೆಹೆಮಿಯನು ದೇವರಿಗಾಗಿ ಮತ್ತು ದೇವರ ಆಲಯವಿದ್ದ ಯೆರೂಸಲೇಮ್ ಪಟ್ಟಣದ ಉದ್ದಾರಕ್ಕಾಗಿ ದಾಹವುಳ್ಳವನಾಗಿದ್ದನು. ಇವನು ಪರ್ಶೀಯಾದ ಅರಸನಾದ ಅರ್ತಷಸ್ತನ ಪಾನಸೇವಕನಾಗಿದ್ದನು. ಯೆಹೂದ್ಯರು ಬ್ಯಾಬಿಲೋನಿನ ಅರಸನಾದ ನೆಬೂಕ್ಕದ್ನೆಚರನ ದಾಳಿಯ ನಿಮಿತ್ತ ಸೆರೆಯಾಳಾಗಿದ್ದರು. ಸೆರೆಯವರೊಳಗೆ ತಪ್ಪಿಸಿಕೊಂಡ ಯೆಹೂದ್ಯರ ಮತ್ತು ಯೆರೂಸಲೇಮಿನ ಸಮಾಚಾರವನ್ನು ನೆಹೆಮಿಯನು ಯೆಹೂದದಿಂದ ಬಂದ ತನ್ನ ಸಹೋದರರಲ್ಲಿ ವಿಚಾರಿಸಿದಾಗ ಅವರು ಅವನಿಗೆ– ಜನರು ಮಹಾ ಕಷ್ಟನಿಂದೆಗಳಿಗೆ ಒಳಗಾಗಿದ್ದಾರೆ, ಯೆರೂಸಲೇಮಿನ ಪೌಳಿಗೋಡೆಗಳು ಕೆಡವಲ್ಪಟ್ಟಿವೆ ಎಂಬುದಾಗಿ ತಿಳಿಸಿದರು. ಈ ವರ್ತಮಾನವನ್ನು ನೆಹೆಮಿಯನು ಕೇಳಿದಾಗ ನೆಲದ ಮೇಲೆ ಕೂತುಕೊಂಡು ಅತ್ತನು. ಉಪವಾಸದಿಂದ ದೇವರ ಸಹಾಯಕ್ಕಾಗಿ ಪ್ರಾರ್ಥಿಸಿದನು. ತಿರಿಗಿ ತನ್ನ ಜನರನ್ನು ವಾಗ್ದಾನದಂತೆ ಸ್ವದೇಶಕ್ಕೆ ಸೇರಿಸು ಎಂಬುದಾಗಿ ಬೇಡಿಕೊಂಡನು.



ಒಂದು ದಿನ ನೆಹೆಮಿಯನು ಅರಸನಾದ ಅರ್ತಷಸ್ತನ ಬಳಿಯಲ್ಲಿ ಯೆರೂಸಲೇಮಿಗೆ ಕಳುಹಿಸಿಕೊಡುವಂತೆ ಕೇಳಿಕೊಂಡನು. ಅರಸನು ಪತ್ರಗಳನ್ನು ನೀಡಿದನು. ನೆಹೆಮಿಯನು ಯೆರೂಸಲೇಮಿಗೆ ಬಂದಾಗ ಯೆರೂಸಲೇಮಿಗಾಗಿ ದೇವರು ತನ್ನಲ್ಲಿ ಯಾವ ಆಲೋಚನೆಯನ್ನು ಹುಟ್ಟಿಸಿದ್ದಾನೆಂದು ಯಾರಿಗೂ ತಿಳಿಸದೆ ರಾತ್ರಿಯಲ್ಲಿ ಕೆಲವು ಜನರನ್ನು ಕರೆದುಕೊಂಡು ಯೆರೂಸಲೇಮಿನ ಪೌಳಿಗೋಡೆಯನ್ನು ಪರೀಕ್ಷಿಸಿದನು. ನಂತರ ಅವನು ಯಾಜಕರಿಗೆ, ಶ್ರೀಮಂತರಿಗೆ, ಅಧಿಕಾರಿಗಳಿಗೆ ಗೋಡೆಯನ್ನು ಕಟ್ಟಲು ತಿಳಿಸಿದನು. ಗೋಡೆಯನ್ನು ಕಟ್ಟುವ ವಿಷಯವನ್ನು ತಿಳಿದ ವೈರಿಗಳಾದ ಸನ್ಬಲ್ಲಟನು ಮತ್ತು ಟೋಬಿಯನು ಹೊಟ್ಟೆಕಿಚ್ಚಿನಿಂದ ಯೆರೂಸಲೇಮಿನವರಿಗೆ ವಿರುದ್ದವಾಗಿ ಯುದ್ದಕ್ಕೆ ಬರಲು ಒಳಸಂಚುಮಾಡಿದರು. ಆಗ ನೆಹೆಮಿಯನು ಎಲ್ಲಾ ಕೆಲಸಗಾರರಿಗೆ ಕತ್ತಿ, ಬಿಲ್ಲು, ಭರ್ಜಿಗಳನ್ನು ಇಟ್ಟುಕೊಂಡು ಕೆಲಸಮಾಡಲು ತಿಳಿಸಿದನು. ಅದರಂತೆ ಕೆಲಸಗಾರರು ಒಂದು ಕೈಯಲ್ಲಿ ಕತ್ತಿಗಳನ್ನು ಹಿಡಿದು ಮತ್ತೊಂದು ಕೈಯಿಂದ ಕೆಲಸಮಾಡಿದರು.

ಗೋಡೆಯನ್ನು ಕಟ್ಟಿದ ಮೇಲೆ ಸನ್ಬಲ್ಲಟನು ನೆಹೆಮಿಯನಿಗೆ ಕೇಡುಮಾಡುವುದಕ್ಕಾಗಿ ತಾವು ಒಬ್ಬರನ್ನೊಬ್ಬರು ಭೇಟಿಯಾಗಲು ತಿಳಿಸಿದನು. ಆದರೆ ನೆಹೆಮಿಯನು ಹೋಗಲಿಲ್ಲ. ಒಂದು ದಿನ ಶೆಮಾಯ ಎಂಬ ವ್ಯಕ್ತಿಯು ನೆಹೆಮಿಯನಿಗೆ– ವೈರಿಗಳು ನಿನ್ನನ್ನು ಕೊಲ್ಲಲು ಈ ರಾತ್ರಿಯಲ್ಲಿ ಬರುತ್ತಾರೆ, ಆದ್ದರಿಂದ ನಾವು ದೇವರ ಆಲಯದಲ್ಲಿ ಅಡಗಿಕೊಳ್ಳೋಣವೆಂದು ತಿಳಿಸಿದನು. ಆದರೆ ನೆಹೆಮಿಯನು ಇದಕ್ಕೆ ಒಪ್ಪಲಿಲ್ಲ. ಯಾಕೆಂದರೆ ಶೆಮಾಯನಿಗೆ ಈ ರೀತಿಯಾಗಿ ಹೇಳಲಿಕ್ಕೆಂದು ಸನ್ಬಲ್ಲಟನು ಮತ್ತು ಟೋಬಿಯನು ಲಂಚವನ್ನು ಕೊಟ್ಟಿದ್ದರು.

ಧರ್ಮೋಪದೇಶಕನಾದ ಎಜ್ರನು ಎಲ್ಲಾ ಜನರಿಗೆ ಧರ್ಮಶಾಸ್ತ್ರವನ್ನು ಭೋದಿಸಿದನು. ಆಗ ಜನರೆಲ್ಲರೂ ದೇವರ ವಾಕ್ಯಗಳನ್ನು ಕೇಳಿ ಬಹಳವಾಗಿ ಅತ್ತರು. ಆಗ ನೆಹೆಮಿಯ ಮತ್ತು ಎಜ್ರನು ಅವರಿಗೆ– ಈ ದಿನ ದೇವರಿಗೆ ನೇಮಿಸಿದ ದಿನವಾಗಿದೆ, ದುಃಖಿಸಬೇಡಿರಿ, ಸಂತೋಷಪಡಿರಿ ಎಂದು ತಿಳಿಸಿದರು. ಆಗ ಜನರೆಲ್ಲರು ಸಂತೋಷಪಟ್ಟರು. ಏಳು ದಿನಗಳ ಕಾಲ ಪರ್ಣಶಾಲೆಯ ಜಾತ್ರೆಯನ್ನು ನಡೆಸಿದರು. ಇಸ್ರಾಯೇಲರೆಲ್ಲರು ಉಪವಾಸವಾಗಿದ್ದು ಗೋಣಿತಟ್ಟನ್ನು ಕಟ್ಟಿಕೊಂಡು ತಲೆಯ ಮೇಲೆ ಮಣ್ಣನ್ನು ಹಾಕಿಕೊಂಡು ತಮ್ಮ ಪಾಪಗಳನ್ನು ಅರಿಕೆಮಾಡಿದರು. ಇಂದಿನಿಂದ ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುವುದಾಗಿ ಪ್ರತಿಜ್ಞೆ ಮಾಡಿದರು. ಯೆರೂಸಲೇಮಿನ ಪೌಳಿಗೋಡೆಯನ್ನು ಶುದ್ಧಪಡಿಸಿ, ಕೀರ್ತನೆ ಗಾಯನಗಳಿಂದಲೂ ದೇವರಿಗೆ ಪ್ರತಿಷ್ಠೆಮಾಡಿದರು.

ನೆಹೆಮಿಯನು ತನ್ನನ್ನು ಆರಿಸಿಕೊಂಡ ದೇವರ ಉದ್ದೇಶಕ್ಕೆ ಒಳಗಾಗಿದ್ದನು. ಎಷ್ಟೇ ಸಮಸ್ಯೆಗಳು ಎದುರಾದರೂ ದೇವರನ್ನು ಆತುಕೊಂಡು ದೇವರ ಉದ್ದೇಶವನ್ನು ನೆರವೇರಿಸಿದನು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ನೆಹೆಮಿಯ ಪುಸ್ತಕ*

## ಪ್ರಶ್ನೆಗಳು

1) ನೆಹೆಮಿಯನು ತನ್ನ ಜನರ ಮತ್ತು ಯೆರೂಸಲೇಮಿನ ಕುರಿತು ಕೇಳಿದಾಗ ಹೇಗೆ ಪ್ರತಿಕ್ರಿಯಿಸಿದನು?

2) ನೆಹೆಮಿಯನು ಯಾಕೆ ರಾತ್ರಿಯಲ್ಲಿ ಪೌಳಿಗೋಡೆಯನ್ನು ಪರೀಕ್ಷಿಸಿದನು?

3) ನೆಹೆಮಿಯನು ಗೋಡೆಯನ್ನು ಕಟ್ಟುವಾಗ ಯಾವ ಸಮಸ್ಯೆಗಳನ್ನು ಎದುರಿಸಿದನು? ಮತ್ತು ಅವುಗಳನ್ನು ಹೇಗೆ ಬಗೆಹರಿಸಿದನು?

4) ನೆಹೆಮಿಯನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಎಸ್ತೇರಳು

ದೇವರು ತನ್ನ ಜನರಾದ ಯೆಹೂದ್ಯರನ್ನು ಸಂರಕ್ಷಿಸಲು ಎಸ್ತೇರಳನ್ನು ಉಪಯೋಗಿಸಿದನು. ಎಸ್ತೇರಳು ತಂದೆ ತಾಯಿಗಳನ್ನು ಕಳೆದುಕೊಂಡು ಚಿಕ್ಕಪ್ಪನಾದ ಮೊರ್ದಕೈಯ ಆಶ್ರಯದಲ್ಲಿ ಬೆಳೆದಳು. ಈಕೆಯು ರೂಪವತಿಯೂ ಲಾವಣ್ಯವತಿಯು ಆಗಿದ್ದಳು. ಪರ್ಶಿಯಾದ ಅರಸನಾದ ಅಹಷ್ವೇರೋಷನ ರಾಣಿಯು ಅವನಿಗೆ ಅವಿಧೇಯಳಾಗಿದ್ದರಿಂದ ಅವಳನ್ನು ರಾಣಿ ಸ್ಥಾನದಿಂದ ತೆಗೆದುಹಾಕಿದನು. ಅರಸನು ಸರಿಯಾದ ಕನ್ಯೆಯನ್ನು ಹುಡುಕಲು ಎಸ್ತೇರಳು ಸಿಕ್ಕಿದಳು. ಅರಸನು ಅವಳನ್ನು ರಾಣಿಯಾಗಿ ನೇಮಿಸಿದನು.

ಅರಸನಿಗೆ ವಿರೋದವಾಗಿ ಬಿಗೆತಾನ್ ಮತ್ತು ತೆರೆಷ್ ಎಂಬುವವರು ಒಳಸಂಚುಮಾಡಿದ್ದನ್ನು ಮೊರ್ದಕೈಯು ರಾಣಿಯಾದ ಎಸ್ತೇರಳಿಗೆ ತಿಳಿಸಿದನು. ಅವಳು ಈ ಒಳಸಂಚನ್ನು ಮತ್ತು ಮೊರ್ದಕೈಯ ಹೆಸರನ್ನು ತಿಳಿಸಿದಳು. ಆಗ ಅವನು ಅವರನ್ನು ಗಲ್ಲಿಗೇರಿಸಿದನು. ಈ ಸಂಗತಿಯು ರಾಜನ ದಿನಚರ್ಯ ಪುಸ್ತಕದಲ್ಲಿ ಬರೆಯಲ್ಪಟ್ಟಿತು.

ಅರಸನು ಹಾಮಾನನನ್ನು ಪ್ರಧಾನಮಂತ್ರಿಯನ್ನಾಗಿ ನೇಮಿಸಿದನು. ಎಲ್ಲರೂ ಅವನಿಗೆ ಅಡ್ಡಬೀಳುವಂತೆ ಅಪ್ಪಣೆ ನೀಡಲಾಯಿತು. ಆದರೆ ಮೊರ್ದಕೈಯು ಮಾತ್ರ ಅಡ್ಡಬೀಳಲಿಲ್ಲ. ಇದರಿಂದ ಕೋಪಗೊಂಡ ಹಾಮಾನನು ಮೊರ್ದಕೈಯನ್ನು ಮತ್ತು ಅವನ ಜನಾಂಗವಾದ ಯೆಹೂದ್ಯರನ್ನು ನಾಶಮಾಡಬೇಕೆಂದು ಆಲೋಚಿಸಿ ಅರಸನಿಗೆ ಯೆಹೂದ್ಯರ ಮೇಲೆ ಅಪರಾದವನ್ನು ಹೋರಿಸಿ ಅವರನ್ನು ನಾಶಮಾಡಲು ಅನುಮತಿಯನ್ನು ಪಡೆದನು. ದೇಶದ ಮೂಲೆ ಮೂಲೆಗೂ ಪತ್ರಗಳನ್ನು ಕಳುಹಿಸಿ ಯೆಹೂದ್ಯರನ್ನು ಕೊಲ್ಲುವಂತೆ ಆಜ್ಞಾಪಿಸಿದನು.



ಮೊರ್ದಕೈಯು ಈ ವಿಷವನ್ನು ಎಸ್ತೇರಳಿಗೆ ತಿಳಿಸಿ ಯೆಹೂದ್ಯರನ್ನು ಕಾಪಾಡಲು ಅರಸನನ್ನು ಬೇಡಿಕೊಳ್ಳುವಂತೆ ಅವಳನ್ನು ಕೇಳಿಕೊಂಡನು. ಆಗ ಅವಳು ತನಗಾಗಿ ಎಲ್ಲಾ ಯೆಹೂದ್ಯರು ಮೂರುದಿನ ಉಪವಾಸ ಇರುವಂತೆ ತಿಳಿಸಿದಳು. ಎಸ್ತೇರಳು ಅರಸನ ಬಳಿಗೆ ಹೋಗಿ ತನ್ನ ಮನೆಗೆ ಔತಣಕ್ಕೆ ಬರುವಂತೆ ಮತ್ತು ಜೊತೆಯಲ್ಲಿ ಹಾಮನನನ್ನು ಕರೆದುಕೊಂಡು ಬರುವಂತೆ ಕೇಳಿಕೊಂಡಳು. ಅರಸನು ಮತ್ತು ಹಾಮಾನರು ಎಸ್ತೇರಳು ಮಾಡಿಸಿದ್ದ ಔತಣಕ್ಕೆ ಹೋದರು. ಆಗ ಅವಳು ನಾಳೆಯೂ ಸಹ ಔತಣಕ್ಕೆ ಬರುವಂತೆ ಕೇಳಿಕೊಂಡಳು. ಹಾಮಾನನು ತನ್ನ ಮನೆಗೆ ಹೋಗುತ್ತಿರುವಾಗ ಮೊರ್ದಕೈಯನ್ನು ನೋಡಿ ಅವನನ್ನು ಕೊಂದುಹಾಕಲು ಗಲ್ಲುಮರವನ್ನು ಸಿದ್ದಮಾಡಿಸಿದನು.

ಆ ರಾತ್ರಿಯಲ್ಲಿ ಅರಸನಿಗೆ ನಿದ್ರೆಯು ಬರಲಿಲ್ಲವಾದದ್ದರಿಂದ ಅವನು ಪೂರ್ವವೃತ್ತಾಂತಗಳ ಪುಸ್ತಕವನ್ನು ತರಿಸಿ ಓದಿಸಿದನು. ಆಗ ಅದರಲ್ಲಿ ಮೊರ್ದೆಕೈಯು ಅರಸನ ಪ್ರಾಣವನ್ನು ವಿರೋದಿಗಳ ಒಳಸಂಚಿನಿಂದ ರಕ್ಷಿಸಿದ್ದು ಬರೆಯಲ್ಪಟ್ಟದ್ದು ತಿಳಿದುಬಂದಿತು. ಆಗ ಅರಸನು ಮೊರ್ದೆಕೈಯನ್ನು ಸನ್ಮಾನಿಸಿದನು. ಅರಸನೂ ಮತ್ತು ಹಾಮಾನನು ತಿರುಗಿ ಎಸ್ತೇರಳು ಮಾಡಿಸಿದ್ದ ಔತಣಕ್ಕೆ ಹೋದಾಗ ಅವಳು ತನ್ನನ್ನು ಮತ್ತು ತನ್ನ ಜನಾಂಗವನ್ನು ಹಾಮಾನನಿಂದ ನಾಶವಾಗದಂತೆ ಕಾಪಾಡಲು ಬೇಡಿಕೊಂಡಳು. ಆಗ ಅರಸನು ಹಾಮಾನನ್ನು ಗಲ್ಲಿಗೆಹಾಕಿಸಿದನು. ಮತ್ತು ಅವನ ಪ್ರಧಾನಮಂತ್ರಿಯ ಹುದ್ದೆಯನ್ನು ಮೊರ್ದೆಕೈಗೆ ನೀಡಿದನು. ಮೊರ್ದೆಕೈಯು ತಕ್ಷಣವೇ ಅರಸನ ಹೆಸರಿನಲ್ಲಿ– ಯೆಹೂದ್ಯರೆಲ್ಲರು ತಮ್ಮ ಪ್ರಾಣರಕ್ಷಣೆಗಾಗಿ ಆಯುಧಗಳನ್ನು ಹಿಡಿದು ಎಲ್ಲಾ ವೈರಿಗಳನ್ನು ಸಂಹರಿಸುವಂತೆ ಪತ್ರಗಳನ್ನು ಬರೆದು ದೇಶದ ಮೂಲೆಮೂಲೆಗೂ ಕಳುಹಿಸಿದನು. ಇದರಿಂದ ಯೆಹೂದ್ಯರೆಲ್ಲರೂ ಸಂರಕ್ಷಿಸಲ್ಪಟ್ಟರು. ಎಸ್ತೇರಳು ತನ್ನ ಜನರಿಗೆ ಪತ್ರಗಳನ್ನು ಬರೆದು ಈ ಸಂತೋಷವನ್ನು ನೆನಸಿಕೊಳ್ಳಲು ಪ್ರತಿವರ್ಷವು ಪೂರಿಮ್ ಎಂಬ ಹಬ್ಬವನ್ನು ಆಚರಿಸಲು ತಿಳಿಸಿದಳು.

*ಹೆಚ್ಚಿನ ವಿವರಗಳಿಗಾಗಿ ಓದಿರಿ: ಎಸ್ತೇರಳು ಪುಸ್ತಕ.*

### ಪ್ರಶ್ನೆಗಳು

1) ಎಸ್ತೇರಳು ರಾಣಿಯಾದ ಸಂದರ್ಭವನ್ನು ವಿವರಿಸಿರಿ.

2) ಹಾಮಾನನು ಯಾಕೆ ಯೆಹೂದ್ಯರನ್ನು ಕೊಲ್ಲಬೇಕೆಂದು ನಿರ್ಧರಿಸಿದನು?

3) ಎಸ್ತೇರಳು ತನ್ನ ಜನರನ್ನು ಹೇಗೆ ರಕ್ಷಿಸಿದಳು?

4) ಎಸ್ತೇರಳ ಜೀವಿತದ ಮೂಲಕ ನಾವೇನನ್ನು ಕಲಿಯುತ್ತೇವೆ?

# ಯೋಬ


ಯೋಬನು ಊಚ್ ಎಂಬ ದೇಶದಲ್ಲಿ ವಾಸವಾಗಿದ್ದನು. ಅವನು ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರ್ದೋಷಿಯೂ ಯತಾರ್ಥಚಿತ್ತನೂ ಆಗಿದ್ದನು. ಅವನಿಗೆ 7 ಮಂದಿ ಗಂಡು ಮಕ್ಕಳು 3 ಮಂದಿ ಹೆಣ್ಣುಮಕ್ಕಳಿದ್ದರು. ಅವನಿಗೆ 7000 ಕುರಿಗಳು, 3000 ಒಂಟೆಗಳು, 500 ಜೋಡಿ ಎತ್ತುಗಳು, 500 ಹೆಣ್ಣು ಕತ್ತೆಗಳು ಮತ್ತು ಅನೇಕ ಸೇವಕರಿದ್ದು ಮೂಡಣ ದೇಶದಲ್ಲಿಯೇ ಶ್ರೀಮಂತನಾಗಿದ್ದನು. ಅವನ ಕುಮಾರರು ಒಂದೊಂದು ದಿನ ಒಬ್ಬೊಬ್ಬನ ಮನೆಯಲ್ಲಿ ಔತಣವನ್ನು ನಡೆಸುತ್ತಾ ಆ ಭೋಜನಕ್ಕೆ ತಮ್ಮ ಮೂವರು ಸಹೋದರಿಯರನ್ನು ಕರೆಕಳುಹಿಸುತ್ತಿದ್ದರು. ಔತಣ ಸರದಿ ತೀರಿದ ನಂತರ ಯೋಬನು ತನ್ನ ಮಕ್ಕಳು ಒಂದು ವೇಳೆ ಹೃದಯದಲ್ಲಿ ದೇವರನ್ನು ದೂಷಿಸಿ ಪಾಪಮಾಡಿರಬಹುದೆಂದು ಅವರನ್ನು ಕರೆಯಿಸಿ ಶುದ್ಧಪಡಿಸಿ ಬೆಳಿಗ್ಗೆ ಎದ್ದು ಅವರ ಸಂಖ್ಯೆಗೆ ತಕ್ಕಂತೆ ಹೋಮಗಳನ್ನು ಅರ್ಪಿಸುತ್ತಿದ್ದನು. ಹೀಗೆ ಯೋಬನು ಕ್ರಮವಾಗಿ ಮಾಡುತ್ತಿದ್ದನು.

ಒಂದಾನೊಂದು ದಿನ ಪರಲೋಕದಲ್ಲಿ ದೇವೆರಿಗೂ ಮತ್ತು ಸೈತಾನನಿಗೂ ಸಂಭಾಷಣೆ ನಡೆಯಿತು. ದೇವರು ಸೈತಾನನಿಗೆ ಯೋಬನ ಕುರಿತಾಗಿ ಅವನ ದೇವರಲ್ಲಿನ ಭಯಭಕ್ತಿ, ಯತಾರ್ಥತೆಯ ಕುರಿತಾಗಿ ಹೇಳಿದಾಗ ಸೈತಾನನು ದೇವರಿಗೆ– ಯೋಬನು ಲಾಭವಿಲ್ಲದೆ ದೇವರಲ್ಲಿ ಭಯಭಕ್ತಿಯನ್ನು ಇಟ್ಟಿದ್ದಾನೋ? ನೀನು ಅವನ ಸ್ವಾಸ್ತ್ಯವನ್ನು ಅಳಿಸಿದರೆ ಅವನು ನಿನ್ನನ್ನು ದೂಷಿಸುತ್ತಾನೆಂದು ಹೇಳಿದನು. ದೇವರು ಯೋಬನನ್ನು ಪರೀಕ್ಷಿಸಲು ಸೈತಾನನಿಗೆ ಯೋಬನ ಸ್ವಾಸ್ಥ್ಯದ ಮೇಲೆ ಅಧಿಕಾರ ಕೊಟ್ಟನು.

ಸೈತಾನನು ಯೋಬನಿಗಿರುವ ಎಲ್ಲಾ ಆಸ್ತಿ–ಪಾಸ್ತಿಯನ್ನು ನಾಶಮಾಡಿದನು, ಅವನ 10 ಜನ ಮಕ್ಕಳು ಸಹ ಸತ್ತುಹೋದರು. ಈ ವಿಷಯ ತಿಳಿದಾಗ ಯೋಬನು ಎದ್ದು ಮೇಲಂಗಿಯನ್ನು ಹರಿದುಕೊಂಡು ನೆಲದಲ್ಲಿ ಅಡ್ಡಬಿದ್ದು ನಮಸ್ಕರಿಸಿ– ಏನು ಇಲ್ಲದವನಾಗಿ ತಾಯಿಯ ಗರ್ಭದಿಂದ ಬಂದೆನು, ಏನು ಇಲ್ಲದವನಾಗಿಯೇ ಗತಿಸಿ ಹೋಗುವೆನು, ಯೆಹೋವನೇ ಕೊಟ್ಟನು, ಯೆಹೋವನೇ ತಗೆದುಕೊಂಡನು, ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ– ಎಂದು ಹೇಳಿದನು. ಇದೆಲ್ಲದರಲ್ಲಿಯೂ ಯೋಬನು ಪಾಪಮಾಡಲಿಲ್ಲ, ದೇವರ ಮೇಲೆ ತಪ್ಪು ಹೋರಿಸಲಿಲ್ಲ.

ಮತ್ತೊಂದು ಸಾರಿ ಸೈತಾನನು ದೇವರ ಸನ್ನಿಧಿಯಲ್ಲಿ ಕಾಣಿಸಿಕೊಂಡಾಗ ದೇವರು ಅವನಿಗೆ ಯೋಬನ ಯತಾರ್ಥತೆಯ ಬಗ್ಗೆ ಹೇಳಿದಾಗ ಸೈತಾನನು ದೇವರಿಗೆ– ಒಬ್ಬ ಮನುಷ್ಯನು ಪ್ರಾಣ ಉಳಿಸಿಕೊಳ್ಳಲು ತನ್ನ ಸರ್ವಸ್ವವನ್ನು ಕೊಡುವನು. ನೀನು ಅವನ ಅಸ್ತಿಮಾಂಸಗಳನ್ನು ಹೊಡೆದರೆ ಅವನು ನಿನ್ನನ್ನು ದೂಷಿಸುವನು ಎಂದನು. ಆಗ ದೇವರು ಯೋಬನ ಮೇಲೆ ಅಧಿಕಾರ ಕೊಟ್ಟನು.

ಸೈತಾನನು ಯೋಬನ ಅಂಗಾಲು ಮೊದಲುಗೊಂಡು ನಡುನೆತ್ತಿಯವರೆಗೂ ಕೆಟ್ಟ ಕುರುಹುಗಳನ್ನು ಹುಟ್ಟಿಸಿ ಭಾದಿಸಿದನು. ಯೋಬನು ಬೋಕಿಯಿಂದ ತನ್ನ ಮೈಯನ್ನು ಕೆರೆದುಕೊಳ್ಳುತ್ತಾ ಬೂದಿಯಲ್ಲಿ ಕೂತುಕೊಂಡನು. ಆಗ ಅವನ ಹೆಂಡತಿಯು ಅವನಿಗೆ ದೇವರನ್ನು ದೂಷಿಸಿ ಸಾಯಿ ಎಂದಳು. ಯೋಬನು ಮೂರ್ಖಳು ಮಾತಾಡಿದಂತೆ ನೀನು ಮಾತನಾಡುತ್ತೀ, ನಾವು ದೇವರಿಂದ ಒಳ್ಳೆಯದನ್ನೆ ಹೊಂದುತ್ತೇವೆ, ಕೆಟ್ಟದ್ದನ್ನು ಹೊಂದಬಾರದೋ ಎಂದನು. ಅವನ ಹೆಂಡತಿಯು ಅವನನ್ನು ಬಿಟ್ಟುಹೋದಳು.



ಯೋಬನ ವಿಷಯ ತಿಳಿದ ಅವನ ಸ್ನೇಹಿತರಾದ ಎಲಿಫಜ, ಬಿಲ್ದದ, ಚೋಫರ್ ಮತ್ತು ಎಲೀಹು ತಮ್ಮ ಸಂತಾಪವನ್ನು ತೋರ್ಪಡಿಸಿ ಸಂತೈಸಲು ಬಂದರು. ಆದರೆ ಅವರು ಯೋಬನ ಈ ಪರಿಸ್ಥಿತಿಗೆ ಅವನ ಪಾಪವೇ ಕಾರಣವೆಂದು ವಾಧಿಸಿದರು. ಆಗ ದೇವರು ಅವರನ್ನು ಖಂಡಿಸಿ ಅವರ ಮೇಲೆ ಕೋಪಗೊಂಡನು. ಯೋಬನು ಅವರಿಗಾಗಿ ಪ್ರಾರ್ಥಿಸಿದನು. ಆಗ ದೇವರು ಅವನ ದುಸ್ಥಿತಿಯನ್ನು ತೆಗೆದುಹಾಕಿ ಅವನ ಸಂಪತ್ತನ್ನು ಎರಡರಷ್ಟಾಗಿ ಹೆಚ್ಚುವಂತೆ ಆಶೀರ್ವದಿಸಿದನು.

ಹೆಚ್ಚಿನ ವಿವರಗಳಿಗಾಗಿ ಓದಿರಿ: ಯೋಬನ ಪುಸ್ತಕ.

ಪ್ರಶ್ನೆಗಳು

1) ಯೋಬನ ನೀತಿವಂತಿಕೆಯ ಜೀವನವನ್ನು ವಿವರಿಸಿರಿ.

2) ಸೈತಾನನಿಗೂ ಮತ್ತು ದೇವರಿಗೂ ನಡೆದ ಸಂಭಾಷಣೆಯನ್ನು ವಿವರಿಸಿರಿ.


3) ಯೋಬನು ಎಲ್ಲವನ್ನು ಕಳೆದುಕೊಂಡ ಮೇಲೆ ಹೇಗೆ ಪ್ರತಿಕ್ರೀಯಿಸಿದನು?

4) ದೇವರು ಯೋಬನನ್ನು ಹೇಗೆ ಆಶೀರ್ವದಿಸಿದನು?

5) ಯೋಬನ ಜೀವಿತದ ಮೂಲಕ ನಾವೇನನ್ನು ಕಲಿಯುತ್ತೇವೆ?

# ಯೋನ

ಯೋನನು ಪ್ರವಾದಿಯಾಗಿದ್ದನು. ಇವನು ದೇವರ ಮಾತಿಗೆ ಅವಿಧೇಯನಾಗಿ ಅನೇಕ ಸಂಕಷ್ಟಗಳನ್ನು ಎದುರಿಸಿದನು. ಕೊನೆಗೆ ದೇವರು ಉಂಟುಮಾಡಿದ ಪರಿಸ್ಥಿತಿಗಳ ನಿಮಿತ್ತ ಯೋನನು ದೇವರ ಉದ್ದೇಶಕ್ಕೆ ಒಳಗಾಗಿ ನಿನವೆ ಪಟ್ಟಣದ 1,20,000 ಜನರ ರಕ್ಷಣೆಗೆ ಕಾರಣನಾದನು.



ದೇವರು ನಿನವೆ ಪಟ್ಟಣದ ದುಷ್ಟತನವನ್ನು ಖಂಡಿಸುವಂತೆ ಯೋನನಿಗೆ ತಿಳಿಸಿದನು. ಆದರೆ ಯೋನನು ನಿನವೆಗೆ ಹೋಗಲು ಒಪ್ಪದೆ ತಾರ್ಷೀಷಿಗೆ ಓಡಿಹೋಗಬೇಕೆಂದು ಆಲೋಚಿಸಿ ತಾರ್ಷೀಷಿಗೆ ಹೋಗುವ ಹಡಗನ್ನು ಕಂಡು ಆ ಹಡಗಿನಲ್ಲಿ ಹತ್ತಿದನು. ನಂತರ ದೇವರು ಬಿರುಗಾಳಿಯನ್ನು ಸಮುದ್ರದ ಮೇಲೆ ಬಲವಾಗಿ ಬೀಸುವಂತೆ ಮಾಡಿದ್ದರಿಂದ ಸಮುದ್ರದಲ್ಲಿ ದೊಡ್ಡ ತುಫಾನು ಎದ್ದು ಹಡಗು ಒಡೆದು ಹೋಗುವ ಹಾಗಾಯಿತು. ಆಗ ನಾವಿಕರು ತಮ್ಮತಮ್ಮ ದೇವರುಗಳಿಗೆ ಮೊರೆಯಿಟ್ಟರು. ತಮ್ಮ ಕಷ್ಟವು ಕಡಿಮೆಯಾಗುವ ಹಾಗೆ ಹಡಗಿನ ಸಾಮಾಗ್ರಿಗಳನ್ನು ಸಮುದ್ರದಲ್ಲಿ ಬಿಸಾಡಿಬಿಟ್ಟರು. ಆದರೆ ಯೋನನು ಹಡಗಿನ ಒಳಭಾಗದಲ್ಲಿ ಮಲಗಿಕೊಂಡಿದ್ದನು. ಆಗ ಹಡಗಿನ ಯಜಮಾನನು ಅವನನ್ನು ಎಬ್ಬಿಸಿ ತನ್ನ ದೇವರಿಗೆ ಮೊರೆಯಿಡುವಂತೆ ತಿಳಿಸಿದನು. ಅನಂತರ ನಾವಿಕರು ತಮಗೆ ಈ ಕೇಡು ಬರಲಿಕ್ಕೆ ಯಾರು ಕಾರಣವೆಂದು ತಿಳಿಯಲು ಚೀಟು ಹಾಕಿದರು. ಆ ಚೀಟು ಯೋನನಿಗೆ ಬಂದಿತು. ಅವರು ಯಾಕೆ ಈ ಕೇಡು ಸಂಭವಿಸಿತು ಎಂದು ಕೇಳಿದಾಗ ಅವನು ತಾನು ದೇವರ ಸನ್ನಿಧಿಯಿಂದ ತಪ್ಪಿಸಿಕೊಂಡು ಹೋಗುತ್ತಿದ್ದೇನೆ, ಅದಕ್ಕೆ ನನ್ನ ನಿಮಿತ್ತ ಈ ಕೇಡು ಉಂಟಾಯಿತು ಎಂದು ಹೇಳಿದನು. ಆಗ ಅವರು ಸಮುದ್ರವು ಶಾಂತವಾಗುವಂತೆ ಏನು ಮಾಡೋಣವೆಂದು ಪ್ರಶ್ನಿಸಲು ಅವನು ತನ್ನನ್ನು ಸಮುದ್ರದಲ್ಲಿ ಹಾಕಲು ತಿಳಿಸಿದನು. ಆದರೆ ಅವರು ಒಪ್ಪದೆ ದಡಕ್ಕೆ ಹಿಂದಿರುಗಬೇಕೆಂದು ಹುಟ್ಟುಹಾಕುತ್ತಾ ಇದ್ದರೂ ದಡವನ್ನು ಸೇರಲು ಆಗಲಿಲ್ಲ. ಸಮುದ್ರವು ಇನ್ನೂ ಅಲ್ಲಕಲ್ಲೋಲವಾಗಿ ಅವರನ್ನು ಎದುರಿಸಿತು. ಆಗ ಅವರು ದೇವರಲ್ಲಿ ಮೊರೆಯಿಟ್ಟು ಅವನನ್ನು ಸಮುದ್ರದಲ್ಲಿ ಹಾಕಿದರು. ಆಗ ಸಮುದ್ರವು ಶಾಂತವಾಯಿತು. ಇದನ್ನು ನೋಡಿದ ಜನರು ದೇವರಿಗೆ ಬಹಳ ಭಯಪಟ್ಟು ಯಜ್ಞಗಳನ್ನು ಅರ್ಪಿಸಿ ಹರಕೆಗಳನ್ನು ಮಾಡಿಕೊಂಡರು. ದೇವರು ಯೋನನನ್ನು ನುಂಗಲು ಒಂದು ದೊಡ್ಡ ಮೀನಿಗೆ ಅಪ್ಪಣೆಮಾಡಿದನು. ಯೋನನು ಮೂರು ದಿನ ಹಗಲಿರಳು ಆ ಮೀನಿನ ಹೊಟ್ಟೆಯೋಳಗೆ ಇದ್ದನು. ಅವನು ದೇವರನ್ನು ಪ್ರಾರ್ಥಿಸಿದನು. ದೇವರು ಮೀನಿಗೆ ಅಪ್ಪಣೆಮಾಡಿದಾಗ ಆ ಮೀನು ಅವನನ್ನು ಒಣನೆಲದಲ್ಲಿ ಕಾರಿಬಿಟ್ಟಿತು.

ದೇವರು ಯೋನನಿಗೆ ನಿನವೆ ಪಟ್ಟಣಕ್ಕೆ ಹೋಗಿ ತಾನು ಹೇಳಿದ್ದನ್ನು ಸಾರುವಂತೆ ಎರಡನೆಯ ಸಾರಿ ಅಪ್ಪಣೆಯನ್ನು ಕೊಟ್ಟನು. ಆಗ ಯೋನನು ದೇವರ ಅಪ್ಪಣೆಯಂತೆ ನಿನವೆಗೆ ಹೋಗಿ ಎಲ್ಲಾ ಜನರಿಗೆ 40 ದಿನಗಳಾದ ಮೇಲೆ ನಿನವೆಯು ಕೆಡವಲ್ಪಡುತ್ತದೆ ಎಂದು ಹೇಳಿದನು. ಆಗ ನಿನವೆ ಪಟ್ಟಣದ ಜನರು ದೇವರಲ್ಲಿ ನಂಬಿಕೆಯನ್ನಿಟ್ಟು ಉಪವಾಸವನ್ನು ಗೊತ್ತುಮಾಡಿ ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತುಕೊಂಡರು. ಯೋನನ ಪ್ರಕಟನೆಯು ನಿನವೆ ಅರಸನಿಗೆ ತಿಳಿದಾಗ ಅವನು ಸಿಂಹಾಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆದು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತುಕೊಂಡನು. ಅರಸನು ತನ್ನ ರಾಜ್ಯದ ಎಲ್ಲಾ ಜನರಿಗೆ ಉಪವಾಸವಿದ್ದು ಪ್ರಾರ್ಥಿಸಲು ಮತ್ತು ಒಬ್ಬೊಬ್ಬನು ತನ್ನ ತನ್ನ ದುರ್ಮಾಗವನ್ನು ಬಿಟ್ಟು ದೇವರ ಕಡೆಗೆ ತಿರುಗಿಕೊಳ್ಳುವಂತೆ ಆಜ್ಞಾಪಿಸಿದನು. ದೇವರು ನಿನವೆಯರ ಕಾರ್ಯಗಳನ್ನು ನೋಡಿ ಮನಮರುಗಿ ತಾನು ಅವರಿಗೆ ಮಾಡಬೇಕೆಂದಿದ್ದ ಕೇಡನ್ನು ಮಾಡದೆ ಅವರನ್ನು ರಕ್ಷಿಸಿದನು.

ಹೆಚ್ಚಿನ ವಿವರಗಳಿಗಾಗಿ ಓದಿರಿ: ಯೋನನ ಪುಸ್ತಕ.

ಪ್ರಶ್ನೆಗಳು

1) ದೇವರು ಯೋನನಿಗೆ ಯಾವ ಆಜ್ಞೆಯನ್ನು ಕೊಟ್ಟನು?

2) ಯೋನನು ದೇವರಿಗೆ ಅವಿಧೇಯನಾದಾಗ ಯಾವ ಪರಿಣಾಮವನ್ನು ಎದುರಿಸಿದನು?

3) ನಿನವೆಯ ಜನರು ತಮ್ಮ ಪಾಪಗಳಿಗಾಗಿ ಹೇಗೆ ಪಶ್ಚತ್ತಾಪ ಪಟ್ಟರು?

4) ಯೋನನ ಜೀವಿತದಿಂದ ನಾವೇನನ್ನು ಕಲಿಯುತ್ತೇವೆ?

# ಮರಿಯಳು

ನಜರೇತ್ ಎಂಬ ಪ್ರಾಂತ್ಯದಲ್ಲಿ ಈ ಮರಿಯಳು ವಾಸಿಸುತ್ತಿದ್ದಳು. ಇಕೆಯನ್ನು ಯೊಸೊಫನೊಂದಿಗೆ ನಿಶ್ಚಯ ಮಾಡಿದ್ದರು. ಸ್ತ್ರಿಯರಲ್ಲಿ ದನ್ಯಳಾದ ಈ ಮರಿಯಳು ದೇವಪುತ್ರನಿಗೆ ತಾಯಿಯಾಗಿರುವ ಭಾಗ್ಯವನ್ನು ಪಡೆದವಳಾಗಿದ್ದಳು. ಆದುದ್ದರಿಂದ ದೇವರ ದಯವನ್ನು ಹೊಂದಿದ ದನ್ಯ ಸ್ತ್ರೀಯೆಂದು ಕರೆಯಲ್ಪಟ್ಟಳು. ಇಕೆಗೆ ಯೇಸು ಕ್ರಿಸ್ತನು  ಮಾತ್ರ ಮಗನಾಗಿರಲಿಲ್ಲ, ಯೋಸೆ, ಯುದ ಹಾಗು ಸಿಮೋನ ಎಂಬ ಗಂಡು ಮಕ್ಕಳು ಮತ್ತು ಪುತ್ರಿಯರು ಇದ್ದರು. ಎಂಬುದಾಗಿ ಸತ್ಯವೇದವು ತಿಳಿಸುತ್ತದೆ.



**ಮರಿಯಳು ದೇವರ ಚಿತ್ತಕ್ಕೆ ಒಪ್ಪಿಸಿಕೊಟ್ಟದ್ದು**

ಮರಿಯಳು ತಾನು ಮದುಯಾಗಿ ಯೋಸೇಫನೊಂದಿಗೆ ಕೂಡುವುದಕಿಂತ ಮುಂಚೆ,ದೇವರು ಯೇಸು ಕ್ರಿಸ್ತನು  ತನ್ನ ಹೊಟ್ಟೆಯಲ್ಲಿ ಹುಟ್ಟುವುದನ್ನು ತಿಳಿಸಿದನು. ಆಗ ಮರಿಯಳು ಭಯಪಡದೆ,ಕುಗ್ಗಿಹೋಗದೆ,ಸಮಾಜದಲ್ಲಿ ತನ್ನ ಕುರಿತು ಕೆಟ್ಟದಾಗಿ ತಿಳಿದುಕೊಳ್ಳಬಹುದು ಮತ್ತು ನನ್ನ ಗಂಡನಾಗಲಿಕ್ಕಿರುವ ಯೋಸೇಫನಿಗೆ ತಿಳಿದರೆ ಅವನು ನನ್ನನ್ನು ತಿರಸ್ಕರಿಸಬಹುದು ಎಂಬುವುದನ್ನು ಮರಿಯಳು ತಿಳಿದಾಗಿಯೂ, ಆಕೆಯು ತನ್ನ ಜೀವಿತದ ಕುರಿತಾಗಿ ಯೋಚಿಸದೆ, ದೇವರ ಚಿತ್ತ ನೆರವೇರಲು  ತನ್ನನು ತಾನು ಒಪ್ಪಿಸಿಕೊಟ್ಟಳು.

**ಮರಿಯಳು ದೇವರನ್ನು ಕೊಂಡಾಡಿದ್ದು**

ಪವಿತ್ರಾತ್ಮನಿಂದ ಗರ್ಭ ಧರಿಸಿದ ನಂತರ ಮರಿಯಳು ಬೆಟ್ಟದ ಸೀಮೆಯ(ಮಲೆನಾಡು) ಯೆಹೊದದ ಒಂದು ಊರಿಗೆ ಹೋಗಿ ಜಕರೀಯನ ಮನೆಸೇರಿ ಎಲಿಸಬೇತಳನ್ನು ವಂದಿಸಿ,–

ನನ್ನ ಪ್ರಾಣವು ಕರ್ತನನ್ನು ಕೊಂಡಾಡುತ್ತದೆ, ನನ್ನ ಆತ್ಮವು ನನ್ನ ರಕ್ಷಕನಾದ ದೇವರ ವಿಷಯದಲ್ಲಿ ಉಲ್ಲಾಸಗೊಂಡದೆ. ಆತನು ತನ್ನ ದಾಸಿಯ ದೀನಸ್ಥಿತಿಯ ಮೇಲೆ ಲಕ್ಷವಿಟ್ಟಿದ್ದಾನೆ. ಇಗೋ, ಇಂದಿನಿಂದ ತಲತಲಾಂತದವರೆಲ್ಲಾ ನನ್ನನ್ನು ಧನ್ಯಳೆಂದು ಹೊಗಳುವರು. ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರಗಳನ್ನು ಮಾಡಿದ್ದಾನೆ; ಆತನ ನಾಮವು ಪರಿಶುದ್ಧವಾದದ್ದು. ಆತನಲ್ಲಿ ಭಯ ಭಕ್ತಿಯುಳ್ಳವರ ಮೇಲೆ ಆತನ ದಯವು ತಲತಲಾಂತರದ ವರೆಗೂ ಇರುವದು.  ಆತನು ತನ್ನ ಭುಜಪರಾಕ್ರಮವನ್ನು ತೋರಿಸಿ, ಸೊಕ್ಕಿದ ಮನಸ್ಸುಳ್ಳವರನ್ನು ಚದುರಿಸಿಬಿಟ್ಟಿದ್ದಾನೆ. ಪ್ರಭುಗಳನ್ನು ಸಿಂಹಾಸನಗಳಿಂದ ದೊಬ್ಬಿ ದೀನಸ್ಥಿತಿಯವರನ್ನು ಉನ್ನತ ಸ್ಥಿತಿಗೆ ತಂದಿದ್ದಾನೆ. ಹಸಿದವರನ್ನು ಮೃಷ್ಟಾನ್ನದಿಂದ ತೃಪ್ತಿಪಡಿಸಿ ಸ್ಥಿತಿವಂತವರನ್ನು ಬರಿಗೈಯಲ್ಲಿ ಕಳುಹಿಸಿಬಿಟ್ಟಿದ್ದಾನೆ. ಆತನು ನಮ್ಮ ಪೂರ್ವಿಕರಿಗೆ ಹೇಳಿದಕ್ಕೆ ಸರಿಯಾಗಿ ಅಬ್ರಹಾಮನಿಗು ಅವನ ವಂಶದವರಿಗೂ ಯಾವಾಗಲೂ ದಯೆ ತೋರಿಸಬೇಕೆಂಬದನ್ನು ನೆನಸಿಕೊಂಡು ತನ್ನ ಸೇವಕನಾದ ಇಸ್ರಾಯೇಲನನ್ನು ಕೈ ಹಿಡಿದಿದ್ದಾನೆ.

ಈ ರೀತಿಯಾಗಿ ಮರಿಯಳು ದೇವರು ತನಗೆ ಮಾಡಿದ ಉಪಕಾರಗಳನ್ನು ನೆನಸುತ್ತಾ ಆತನ ನಾಮವನ್ನು ಕೊಂಡಾಡಿದಳು. ಮರಿಯಳು ಯೇಸುವಿನೊಂದಿಗೆ ಇದ್ದುಕೊಂಡು ಭೋಧನೆಯನ್ನು ಕೇಳುತ್ತಾ, ದೇವರ ಭಯಬಕ್ತಿಯಲ್ಲಿ ಬೆಳೆದು ಅನೇಕರಿಗೆ ಮಾದರಿಯಾಗಿದ್ದಳು. ಒಟ್ಟಾರೆಯಾಗಿ ದೇವರ ಚಿತ್ತಕ್ಕೆ ಅಧೀನಳಾಗಿ ಜೀವಿಸಿದಳು.

ಮರಿಯಳು ಯೇಸುವಿನ ಜನನದಿಂದ ಮರಣದ ವರೆಗೂ ಆತನ ಸಂಗಡವಿದ್ದ ಏಕೈಕ ವ್ಯೆಕ್ತಿ. ಇಷ್ಟು ಮಾತ್ರವಲ್ಲದೆ ಮರಿಯಳು ಪ್ರಾರ್ಥನಾ ಜೀವಿತವನ್ನು ಕಟ್ಟಿಕೊಂಡ ಒಬ್ಬ ಸ್ತ್ರೀಯಾಗಿದ್ದಳು. ಅ.ಕೃ. 1:14 ರಲ್ಲಿ ತಿಳಿಸಲ್ಪಟ್ಟ ಹಾಗೆ ಮರಿಯಳು ಎಡಬಿಡದೆ ಪ್ರತಿದಿನ ನಿತ್ಯ ಪ್ರಾರ್ಥನೆಯಲ್ಲಿ ನಿರತಳಾಗಿರುತ್ತಿದ್ದಳು.

**ಪ್ರಶ್ನೆಗಳು**

1. ಮರಿಯಳ ಗಂಡನ ಹೆಸರೇನು?

2. ಮರಿಯಳು ಯಾವ ಪ್ರಾಂತ್ಯದಲ್ಲಿ ಜೀವಿಸುತ್ತಿದ್ದಳು?

3. ಮರಿಯಳು ಪವಿತ್ರಾತ್ಮನಿಂದ ಗರ್ಭಧರಿಸಿದಾಗ ಯಾರನ್ನು ಸಂಧಿಸಿದಳು?

ಮರಿಯಳ ಕುರಿತಾಗಿ ಸುವಾರ್ತೆಗಳಲ್ಲಿ ಮತ್ತು ಅ.ಕೃ. 1:14ರಲ್ಲಿ ಉಲ್ಲೇಖಿಸಲಾಗಿದೆ.

# ಎಲೀಜಬೇತಳು

ಎಲೀಜಬೇತಳು ಕರ್ತನ ಎಲ್ಲಾ ಆಜ್ಞೆಗಳನ್ನು ನ್ಯಾಯವಿಧಿಗಳನ್ನು ತಪ್ಪಿಲ್ಲದೆ ಕೈಗೊಂಡು ನಡೆಯುವವಳಾಗಿದ್ದಳು (ಲೂಕ 1:5,6). ಈಕೆಗೆ ಜಕರ್ಯನೊಂದಿಗೆ ಮದುವೆಯಾಗಿ ಅನೇಕ ವರ್ಷಗಳು ಕಳೆದು ಮುಪ್ಪಿನ ಸ್ಥಿತಿಯಾಗಿದ್ದರು. ಇವಳಿಗೆ ಮಕ್ಕಳಾಗಿರಲಿಲ್ಲ. ಇಂಥಹ ಪರಿಸ್ಥಿತಿಯ ಮದ್ಯದಲ್ಲಿ ಬಂಜೆಯಾದ ಎಲೀಜಬೇತಳು ನಿಂದೆ, ಅವಮಾನಗಳ ನಡುವೆ ತನ್ನ ಗಂಡನೊಡನೆ ದೇವರಿಗೆ ನಂಬಿದಸ್ತಳಾಗಿದ್ದಳು. ಇವಳು ಆರೋನನ ವಂಶದವಳು.

**ಎಲೀಜಬೇತಳು ಗರ್ಭಿಣಿಯಾದಾಗ ಯೇಸುವಿನ ತಾಯಿಯಾದ ಮರಿಯಳಿಂದ ವಂದಿಸಲ್ಪಟ್ಟಿದ್ದು**

ಮರಿಯಳು ಸಹ ಪವಿತ್ರಾತ್ಮನಿಂದ ಗರ್ಭಧರಿಸಿದ ಸಮಯದಲ್ಲೇ ಎಲೀಜಬೇತಳು ಸಹ ಗರ್ಭಿಣಿಯಾಗಿದ್ದಳು. ಮರಿಯಳು ಎಲೀಜಬೇತಳ ಮನೆಗೆ ಬಂದು ಅವಳಿಗೆ ವಂದಿಸಿದಳು. ಮರಿಯಳ ವಂದನೆಯನ್ನು ಕೇಳಿದಾಗ ಎಲೀಜಬೇತಳ ಗರ್ಭದಲ್ಲಿದ್ದ ಕೂಸು ನಲಿದಾಡಿತು, ಆಗ ಎಲೀಜಬೇತಳು ಪವಿತ್ರಾತ್ಮ ಭರಿತಳಾಗಿ ಮಹಾಧ್ವನಿಯಿಂದ ಸ್ತ್ರೀಯರಲ್ಲಿ ನೀನು ಧನ್ಯಳೇ ಮತ್ತು ನಿನ್ನ ಗರ್ಭಫಲವು ಆಶೀರ್ವದಿಸಲಟ್ಟಿದೆ. ನನ್ನ ಕರ್ತನ ತಾಯಿಯು ನನ್ನ ಬಳಿಗೆ ಬರುವುದು. ಹೇಗೆ? ಇಗೋ, ನಿನ್ನ ವಂದನೆಯ ಧ್ವನಿಯು ನನ್ನ ಕಿವಿಯಲ್ಲಿ ಬಿದ್ದ ಕೂಡಲೇ ಕೂಸು ನನ್ನ ಗರ್ಭದಲ್ಲಿ ಉಲ್ಲಾಸದಿಂದ ನಲಿದಾಡಿತು. ಕರ್ತನು ನಿನಗೆ ಹೇಳಿದವುಗಳು ನೆರವೇರುವುದು ಎಂದು ನಂಬಿದ್ದರಿಂದ ನೀನು ದನ್ಯಳು. ಎಂದು ಆರಿಸಿಕೊಂಡಾಡಿದಳು. ಎಲೀಜಬೇತಳು ಮರಿಯಳನ್ನು ಹೆಚ್ಚುಕಡಿಮೆ ಮೂರು ತಿಂಗಳುಗಳ ಕಾಲ ತನ್ನ ಮನೆಯಲ್ಲಿಯೇ ಉಳಿಸಿಕೊಂಡಿದ್ದಳು.



ನಂತರ ಎಲೀಜಬೇತಳಿಗೆ ದಿನ ತುಂಬಿದ ನಂತರ ಒಬ್ಬ ಗಂಡು ಮಗುವನ್ನು ಹೆತ್ತಳು. ಅವನೇ ಲೋಕದ ರಕ್ಷಕನಾದ ಯೇಸುಕ್ರಿಸ್ತನ ಮಾರ್ಗವನ್ನು ಸಿದ್ಧ ಮಾಡುವುದಕ್ಕಾಗಿ ಬಂದ ಸ್ನಾನಿಕನಾದ ಯೋಹಾನ.

**ಪ್ರಶ್ನೆಗಳು**

1. ಎಲೀಜಬೇತಳ ಗಂಡನ ಹೆಸರೇನು?]
2. ಎಲೀಜಬೇತಳು ಯಾರ ವಂಶಕ್ಕೆ ಸಂಬಂಧಪಟ್ಟಿದವಳಾಗಿದ್ದಳು?
3. ಎಲೀಜಬೇತಳು ಗರ್ಭಿಣಿಯಾದಾಗ ಯಾರಿಂದ ವಂದಿಸಲ್ಪಟ್ಟಳು?
4. ಎಲೀಜಬೇತಳ ಮಗನ ಹೆಸರೇನು?

**ಮುಖ್ಯ ವಚನ:** ಎಲೀಜಬೇತಳು ಕರ್ತನ ಎಲ್ಲಾ ಆಜ್ಞೆಗಳನ್ನು ನ್ಯಾಯವಿಧಿಗಳನ್ನು ತಪ್ಪಿಲ್ಲದೇ ಕೈಗೊಂಡು ನಡೆಯುವವಳಾಗಿದ್ದಳು ಲೂಕ 1:5, 6.

ಎಲೀಜಬೇತಳ ಕುರಿತಾಗಿ ಲೂಕ 1:5–8 ರಲ್ಲಿ ಉಲ್ಲೇಖಿಸಲಾಗಿದೆ.

# ಸ್ನಾನಿಕನಾದ ಯೋಹಾನ

ಯೂದಾಯದ ಅರಸನಾದ ಹೆರೋದನ ಕಾಲದಲ್ಲಿ ಅಭಿಯನ ವರ್ಗಕ್ಕೆ ಸೇರಿದ ಜಕರೀಯನೆಂಬ ಒಬ್ಬ ಯಾಜಕನಿದ್ದನು. ಅವನ ಹೆಂಡತಿಯು ಆರೋನನ ವಂಶಕ್ಕೆ ಸಂಬಂಧಪಟ್ಟವಳು. ಆಕೆಯ ಹೆಸರು ಎಲಿಜಬೇತ್‌ಳು. ಇವರಿಬ್ಬರು ದೇವರ ಎಲ್ಲಾ ಆಜ್ಞೆಗಳನ್ನು ನೇಮ ನಿಷ್ಠೆಗಳನ್ನು ಕೈಗೊಂಡು ನಡೆಯುವವರಾಗಿದ್ದರು. ಮತ್ತು ಇವರು ದೇವರದೃಷ್ಠಿಯಲ್ಲಿ ನೀತಿವಂತರಾಗಿದ್ದರು. ಆದರೆ ಎಲಿಜಬೇತ್‌ಳಿಗೆ ಮಕ್ಕಳಿರಲಿಲ್ಲ. ಇಷ್ಟು ಮಾತ್ರವಲ್ಲದೆ ಅವರಿಬ್ಬರೂ ಪ್ರಾಯ ಮೀರಿದವರಾಗಿದ್ದರು.

### ಸ್ನಾನಿಕನಾದ ಯೇಹಾನನ ಜನನ



ಜಕರಿಯನು ಒಬ್ಬ ಯಾಜಕೋಧ್ಯೋಗಸ್ತನಾದ್ದರಿಂದ ತನ್ನ ವರ್ಗದ ಸರದಿಯ ಪ್ರಕಾರ ದೇವರ ಮುಂದೆ ಯಾಜಕ ಸೇವೆಯನ್ನು ಮಾಡುತ್ತಿದ್ದಾಗ ದೂಪವೇದಿಯ ಬಲಗಡೆಯಲ್ಲಿ ನಿಂತುಕೊಂಡಿದ್ದ ಕರ್ತನ ದೂತನು ಅವನಿಗೆ ಕಾಣಿಸಿಕೊಂಡನು. ಜಕರಿಯನು ಅವನನ್ನು ನೋಡಿ ಕಳವಳದಿಂದ ಭಯಬಾಂತನಾದನು. ಆದರೆ ಆ ದೂತನು ಅವನಿಗೆ, ಜಕರಿಯನೇ, ಭಯಪಡಬೇಡ! ದೇವರು ನಿನ್ನ ವಿಜ್ಞಾಪನೆಯನ್ನು ಕೇಳಿದ್ದಾನೆ. ನಿನ್ನ ಹೆಂಡತಿಯಾದ ಎಲಿಜಾಬೇತಳು ಒಬ್ಬ ಮಗನನ್ನು ಹೆರುವಳು, ನೀನು ಅವನಿಗೆ ಯೋಹಾನ ಎಂದು ಹೆಸರಿಡಬೇಕು. ಅನೇಕರು ಅವನ ಜನನಕ್ಕೆ ಸಂತೋಷಪಡುವರು. ನಿನಗೆ ಆನಂದವೂ ಉಲ್ಲಾಸವೂ ಆಗುವುದು. ಅವನು ಕರ್ತನ ದೃಷ್ಟಿಯಲ್ಲಿ ಮಹಾಪುರುಷನಾಗಿರುವನು. ದ್ರಾಕ್ಷಾರಸವನ್ನಾಗಲಿ, ಮದ್ಯವನ್ನಾಗಲಿ, ಸೇವಿಸನು. ಅವನು ಅವನ ತಾಯಿಯ ಗರ್ಭದಿಂದಲೇ ಪವಿತ್ರಾತ್ಮಭರಿತನಾಗಿರುವನು. ಅವನು ಇಸ್ರಾಯೇಲರಲ್ಲಿ ಅನೇಕರನ್ನು ದೇವರ ಕಡೆಗೆ ತಿರುಗಿಸುವನು ಮತ್ತು ಕರ್ತನ ಹಾದಿಯನ್ನು ಸಿದ್ಧಮಾಡುವನು ಎಂದು ಹೇಳಿದನು. ಈ ಮಾತುಗಳನ್ನು ಜಕರಿಯನು ನಂಬದೆ ಹೋದನು. ಆದರೆ ಇದರ ನಿಮಿತ್ತ ದೂತನು ಅವನಿಗೆ ನೀನು ಮುಕನಾಗಿದ್ದು ಮಾತನಾಡಲಾರದಿರುವೆ ಎಂದನು. ಅದೇರೀತಿಯಾಗಿ ಜಕರಿಯನು ಮೂಕನಾಗಿದ್ದನು.

ಕೇಲವು ತಿಂಗಳುಗಳ ನಂತರ ಎಲಿಜಬೇತಳು ದಿನ ತುಂಬಿ ಆಕೆಯು ಒಬ್ಬ ಮಗನನ್ನು ಹೆತ್ತಳು. ಅವರು ಎಂಟನೆಯ ದಿನ ಆ ಮಗುವಿಗೆ ಸುನ್ನತಿ ಮಾಡಿಸುವುದಕ್ಕಾಗಿ ಬಂದು ಅವನ ತಂದೆಯ ಹೆಸರಿನಂತೆ ಮಗನನ್ನು ಜಕರೀಯನೆಂದು ಕರೆಯಲಿದ್ದರು. ಆದಕ್ಕೆ ಅವನ ತಾಯಿಯು ಉತ್ತರವಾಗಿ ಹಾಗಲ್ಲ, ಅವನು ಯೋಹಾನ ಎಂದು ಕರೆಯಲ್ಪಡಬೇಕು ಎಂದಳು. ಅದಕ್ಕವರು ಆಕೆಗೆ ನಿನ್ನ ಬಂಧುಗಳಲ್ಲಿ ಈ ಹೆಸರಿನಿಂದ ಕರೆಯಲ್ಪಟ್ಟವರು ಯಾರು ಇಲ್ಲ ಎಂದರು. ನಂತರ ಅವರು ಯಾವ ಹೆಸರಿನಿಂದ ಕರೆಯಬೇಕೆಂದು ಅವನ ತಂದೆಯಾದ ಜಕರೀಯನಿಗೆ ಮೂಕನಾದದ್ದರಿಂದ ಸನ್ನೆ ಮಾಡಿದರು. ಆಗ ಅವನು ಬರೆಯುವ ಹಲಗೆಯ ಮೇಲೆ ಅವನ ಹೆಸರು ಯೋಹಾನ ಎಂದು ಬರೆದನು. ಅಲ್ಲಿರುವವರೆಲ್ಲರು ಈ ಸಂಗತಿಗೆ ಬೇರಗಾದರು. ಕೂಡಲೇ ಅವನ ಬಾಯಿ ತೆರೆಯಲ್ಪಟ್ಟು ಅವನ ನಾಲಿಗೆ ಸಡಿಲವಾಯಿತು. ಅವನು ಮಾತನಾಡಿ ದೇವರನ್ನು ಕೊಂಡಾಡಿದನು (ಲೂಕ 1:5–25, 57–65).

### ಸ್ನಾನಿಕನಾದ ಯೇಹಾನನು ಮಾರ್ಗ ಸಿದ್ದಪಡಿಸಿದ್ದು

ಚಕ್ರವರ್ತಿಯಾದ ತಿಬೇರಿಯನ ಆಳ್ವಿಕೆಯ ಕಾಲದ 15 ವರ್ಷದಲ್ಲಿ ಪೊಂತ್ಯ ಪಿಲಾತನು ಯೂದಾಯಕ್ಕೆ ಅಧಿಪತಿಯು, ಹೇರೋದನು ಗಲಿಲಾಯಕ್ಕೆ ಚತುರಾದಿಪತಿಯು, ಅವನ ಸಹೋದರ ಫಿಲಿಪ್ಪನು ಇತುರಾಯ ಮತ್ತು ಪ್ರಕೋನಿತಿ ಸೀಮೆಗೆ ಚತುರಾಧಿಪತಿಯು, ಲ್ಯೂಸನ್ಯನು ಅಬಿಲೇನಿಗೆ ಚತುರಾಧಿಪತಿಯು, ಹನ್ನನು ಮತ್ತು ಕಾಯಪನು ಮಹಾಯಾಜಕರು ಆಗಿದ್ದಾಗ ಅಡವಿಯಲ್ಲಿದ್ದ ಜಕರ್ಯನ ಮಗನಾದ ಯೋಹಾನನಿಗೆ ದೇವರ ವಾಕ್ಯವು ಉಂಟಾಯಿತು. ಅವನು ಯೊರ್ದಾನ್ ಹೋಳೆಯ ಸುತ್ತಲಿರುವ ಪ್ರಾಂತ್ಯದಲ್ಲೇಲ್ಲಾ ಸಂಚರಿಸಿ ಜನರಿಗೆ ನೀವು ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿ ಹೇಳಿದನು. ಆಗ ಅನೇಕ ಜನರು ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡು ದೇವರ ಕಡೆಗೆ ತಿರುಗಿಕೊಂಡರು. ಅದೇ ಸಮಯದಲ್ಲಿ ಯೇಸು ಕೂಡ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು (ಲೂಕ 3:1–20).

### ಸ್ನಾನಿಕನಾದ ಯೋಹಾನನು ಶಿರಚ್ಛೇದನ

ಹೇರೋದನು ತನ್ನ ಸಹೋದರನಾದ ಫಿಲಿಪ್ಪನ ಹೆಂಡತಿಯಾದ ಹೆರೋಧ್ಯಳನ್ನು ಇಟ್ಟುಕೊಂಡಿದ್ದನು. ಇಅದರ ನಿಮಿತ್ತವಾಗಿ ಯೋಹಾನನ್ನು ಹಿಡಿದು ಕಟ್ಟು ಸೇರೆಯಲ್ಲಿ ಹಾಕಿದ್ದನು. ಯಾಕೆಂದರೆ ಯೋಹಾನನು ನೀನು ಇಟ್ಟುಕೊಂಡಿದ್ದು ನ್ಯಾಯವಲ್ಲ ಎಂದು ಹೇಳಿದ್ದನು. ಅದೇ ಸಮಯದಲ್ಲಿ ಯೋಹಾನನ್ನು ಕೊಲ್ಲಬೇಕೆಂದಿದ್ದರೂ ಜನ ಸಮೂಹಕ್ಕೆ ಭಯಪಟ್ಟು ಸುಮ್ಮನಾಗಿ ಸೇರೆಮನೆಗೆ ಹಾಕಿದ್ದನು.

ಹೇರೋದನು ಹುಟ್ಟಿದ ದಿನವನ್ನು ಆಚರಿಸಲ್ಪಟ್ಟಾಗ ಹೆರೋದ್ಯಳ ಮಗಳು ಅವರ ಮುಂದೆ ನರ್ತನ ಮಾಡಿ ಹೆರೋದನನ್ನು ಮೆಚ್ಚಿಸಿದ್ದಳು. ಆದ್ದರಿಂದ ಅವಳು ಏನು ಕೇಳಿಕೊಂಡರೂ ಅವಳಿಗೆ ಕೊಡುವೆನೆಂದು ಆಣೆ ಇಟ್ಟು ವಾಗ್ದಾನ ಮಾಡಿದನು. ಅವಳು ತನ್ನ ತಾಯಿಯಿಂದ ತಿಳಿದುಕೊಂಡವಳಾಗಿ ಸ್ನಾನಿಕನಾದ ಯೋಹಾನನ ತಲೆಯನ್ನು ಇಲ್ಲಿಯೇ ಒಂದು ತಟ್ಟೆಯಲ್ಲಿ ಕೊಡು ಎಂದು ಕೇಳಿದಳು. ಆಗ ಅರಸನು ದುಃಖಪಟ್ಟರೂ ತನ್ನ ಆಣೆಯ ನಿಮಿತ್ತದಿಂದಲೂ ತನ್ನೊಂದಿಗೆ ಊಟಕ್ಕೆ ಕುಳಿತ್ತಿದ್ದವರ ನಿಮಿತ್ತದಿಂದಲೂ ಅದನ್ನು ಅವಳಿಗೆ ಕೊಡುವಂತೆ ಅಪ್ಪಣೆಕೊಟ್ಟನು. ಅವನು ಆಳುಗಳನ್ನು ಕಳುಹಿಸಿ ಸೇರೆಮನೆಯಲ್ಲಿದ್ದ ಯೋಹಾನನ ತಲೆಯನ್ನು ಕಡಿಸಿದನು. ಇದಲ್ಲದೆ ಅವನ ತಲೆಯನ್ನು ಒಂದು ತಟ್ಟೆಯಲ್ಲಿ ತಂದು ಆ ಹುಡುಗಿಗೆ ಕೊಟ್ಟರು. ಅವಳು ಅದನ್ನು ತನ್ನ ತಾಯಿಯ ಬಳಿಗೆ ತಂದಳು. ನಂತರ ಯೋಹಾನನ ಶಿಷ್ಯರು ಬಂದು ದೇಹವನ್ನು ಎತ್ತಿಕೊಂಡು ಹೋಗಿ ಸಮಾಧಿ ಮಾಡಿದರು.

### ಪ್ರಶ್ನೆಗಳು

1. ಸ್ನಾನಿಕನಾದ ಯೋಹಾನನ ತಂದೆ ಮತ್ತು ತಾಯಿಯ ಹೆಸರೇನು?
2. ಆತನ ತಂದೆಯ ಕೆಲಸವೇನು?
3. ಯೋಹಾನನ ತಂದೆಯು ಮೂಕನಾಗಲು ಕಾರಣವೇನು?
4. ಯೋಹಾನನು ಜನರಿಗೆ ಯಾವ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿದನು?
5. ಹೆರೋದನು ಯೋಹಾನನ್ನು ಯಾಕೆ ಸೇರೆಮನೆಯಲ್ಲಿ ಹಾಕಿಸಿದನು?
6. ಹೆರೋದನ ಮಗಳು ಏನನ್ನು ತನ್ನ ತಂದೆಯಲ್ಲಿ ಬೇಡಿದಳು?

### ಸ್ನಾನಿಕನಾದ ಯೋಹಾನನಿಂದ ಕಲಿಯುವ ಪಾಠಗಳು

- ದೇವರ ಸೇವೆಗಾಗಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳಬೇಕು.
- ಸತ್ಯಕ್ಕಾಗಿ ನಿಲ್ಲುವುದು, ಪ್ರಾಣಕಿಂತಲೂ ಪ್ರಾಮುಖ್ಯ.
- ಎಲ್ಲಾ ಇಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಸಹ ದೇವರಿಗೆ ನಂಬಿಗಸ್ಥರಾಗಿರಬೇಕು.

- ನಮ್ಮನ್ನು ನಾವು ತಗ್ಗಿಸಿಕೊಳ್ಳಬೇಕು.
- ದೇವರ ಚಿತ್ತಕ್ಕೆ ಒಪ್ಪಿಸಿಕೊಡಬೇಕು.

# ಯೇಸು ಕ್ರಿಸ್ತನು

## ಯೇಸು ಕ್ರಿಸ್ತನು ಬಂದ ಉದ್ದೇಶ

ನೀತಿವಂತರು ಇಲ್ಲ ಒಬ್ಬನು ಇಲ್ಲ ಎಲ್ಲರೂ ದಾರಿ ತಪ್ಪಿದವರೇ ಎಲ್ಲರೂ ಕೆಟ್ಟು ಹೋದವರೆ ಎಂದು ಸತ್ಯವೇದ ಹೇಳುತ್ತದೆ. ಹೀಗೆ ಪಾಪ, ಶಾಪ ಮತ್ತು ಮರಣಕ್ಕೆ ಗುರಿಯಾದ ಮನುಷ್ಯನನ್ನು ರಕ್ಷಿಸಲು ಮನುಷ್ಯರಲ್ಲಿ ಯಾರೂ ಯೋಗ್ಯರಿಲ್ಲ. ಯಾಕೆಂದರೆ ಎಲ್ಲರೂ ಪಾಪಿಗಳಾಗಿದ್ದಾರೆ. ಆದ್ದರಿಂದ ಇವೆಲ್ಲವುಗಳಿಂದ ಬಿಡಿಸಿ ರಕ್ಷಿಸುವುದಕ್ಕಾಗಿ ಯೇಸು ಕ್ರಿಸ್ತನು "ದೇವಸ್ವರೂಪನಾಗಿದ್ದರು ದೇವರಿಗೆ ಸರಿಸಮಾನನಾಗಿರುವನೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೇನು ಎಂದೆಣಿಸದೆ. ತನ್ನನ್ನು ಬರಿದು ಮಾಡಿಕೊಂಡು ಮನುಷ್ಯನಿಗೆ ಸದೃಷ್ಯನಾದನಾದನು" (ಕಾಣಿಸಿಕೊಂಡನು). (ಫಿಲಿಪ್ಪಿ 2:6,7) ಎಂಬುದಾಗಿ ಸತ್ಯವೇದ ಹೇಳುತ್ತದೆ.



ಈತನು ಯಾವುದೇ ಒಂದು ಧರ್ಮವನ್ನಾಗಲಿ ಸ್ಥಾಫಿಸುವುದಕ್ಕಾಗಿ ಈ ಲೋಕಕ್ಕೆ ಬರಲಿಲ್ಲ. ಅಥವಾ ಯಾವುದೇ ಒಂದು ಪಕ್ಷವನ್ನು ಕಟ್ಟುವುದಕ್ಕಾಗಿ ಬರಲಿಲ್ಲ. ಅದರ ಬದಲಾಗಿ ನಿತ್ಯ ನಾಶನದಲ್ಲಿದ್ದಂತ ಮನಕುಲವನ್ನು ರಕ್ಷಿಸುವುದಕ್ಕಾಗಿ ಆತನು ಈ ಲೋಕಕ್ಕೆ ಬಂದನು.

## ಯೇಸು ಕ್ರಿಸ್ತನ ಜನನ

ಯೇಸು ಕ್ರಿಸ್ತನ ಜನನವು ಹೇಗಾಯಿತೆಂದರೆ ಆತನ ತಾಯಿಯಾದ ಮರಿಯಳನ್ನು ಯೋಸೇಪನೊಂದಿಗೆ ನಿಶ್ಚಯ ಮಾಡಿರಲಾಗಿ ಅವರು ಕೂಡುವುದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾದದ್ದು ತಿಳಿದುಬಂತು. ಆದರೆ ಆಕೆಯ ಗಂಡನಾದ ಯೋಸೇಪನು ಆಕೆಯನ್ನು ಬೈಯಲಿಗೆ ತರುವುದಕ್ಕೆ ಮನಸ್ಸಿಲ್ಲದೆ ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟುಬಿಡಬೇಕೆಂದಿದ್ದನು. ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು – ಎಲೈ ಯೋಸೇಪನೆ, ದಾವೀದನ ವಂಶದವನೆ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವುದಕ್ಕೆ ಅಂಜಬೇಡ, ಆಕೆಯ ಗರ್ಭವು ಪವಿತ್ರಾತ್ಮನಿಂದಲೇ ಆದದ್ದು, ಆಕೆಯು ಒಬ್ಬ ಮಗನನ್ನು ಹಡೆಯುವಳು, ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು. ಯಾಕೆಂದರೆ, ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ, ಕಾಯುವವನು ಅಂದನು. ಯೇಸುವಿನ ಜನನ ಆಗುವುದಕ್ಕಿಂತ ಮುಂಚೆ ದೇವರು ಪ್ರವಾದಿಗಳ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೇಲ್ಲಾ ನಡೆಯಿತು.

## ಯೇಸುವಿನ ಜೀವನ

ಯೇಸು ಕ್ರಿಸ್ತನು ತನ್ನನ್ನು ತಾನು ದೇವರಿಗೆ ಸಮರ್ಪಿಸಿಕೊಂಡು ಧರ್ಮಶಾಸ್ತ್ರಿಗಳ ಬಳಿ ಬಂದು ಅವರ ಉಪದೇಶವನ್ನು ಕೇಳುತ್ತಾ, ತರ್ಕ ಮಾಡುತ್ತಾ, ದೇವರ ವಾಕ್ಯದಿಂದ ಬಲ ಹೊಂದುತ್ತಾ, ಮತ್ತು ಏಕಾಂತವಾಗಿ ಪ್ರಾರ್ಥಿಸುತ್ತಾ, ತನ್ನ ತಂದೆಯ ಚಿತ್ತವನ್ನು ನೆರವೇರಿಸುವುದಕ್ಕಾಗಿ ತನ್ನನ್ನು ತಾನು ಸಿದ್ಧಪಡಿಸಿಕೊಳ್ಳುತ್ತಾ, ಅನೇಕ ಹಳ್ಳಿ–ಪಳ್ಳಿಗಳಿಗೆ ಹೋಗಿ ದೇವರ ಶುಭಸಮಾಚಾರವನ್ನು ಸಾರುತ್ತಾ ಬಂದನು. ಮತ್ತು ಈತನು ಅನೇಕ ಅದ್ಭುತಕಾರ್ಯಗಳನ್ನು, ಸೂಚಕ ಕಾರ್ಯಗಳನ್ನು ಮಾಡಿತ್ತಿದ್ದನು. ಅವುಗಳನ್ನು ನಾವು ನಾಲ್ಕು ಭಾಗವಾಗಿ ವಿಂಗಡಿಸಬಹುದು.

### 1. ಯೇಸುವಿನ ಅದ್ಭುತಗಳು:

- ರೋಗದ ಮೇಲೆ ಮಾಡಿದ ಅದ್ಭುತಗಳು.
- ಪಕೃತಿಯ ಮೇಲೆ ಮಾಡಿದ ಅದ್ಭುತಗಳು.

➢ ದೆವ್ವದ ಮೇಲೆ ಮಾಡಿದ ಅದ್ಭುತಗಳು

➢ ಮರಣದ ಮೇಲೆ ಮಾಡಿದ ಅದ್ಭುತಗಳು.

**1. ರೋಗದ ಮೇಲೆ ಮಾಡಿದ ಅದ್ಭುತಗಳು:**

- ಕುಷ್ಠರೋಗಿಯನ್ನು ಗುಣಪಡಿಸಿದ್ದು– ಮತ್ತಾಯ 8:2–4; ಮಾರ್ಕ 1:40–44; ಲೂಕ 5:12–14.
- ಶತಾದಿಪತಿಯ ಆಳನ್ನು ಸ್ವಸ್ಥಮಾಡಿದ್ದು – ಮತ್ತಾ 8:5–13; ಲೂಕ 7:1–10,13,28.
- ಪೇತ್ರನ ಅತ್ತೆಯನ್ನು ಗುಣಪಡಿಸಿದ್ದು – ಮಾರ್ಕ 1:29–34; ಲೂಕ 5:17–26; ಮತ್ತಾಯ 8:14,15.
- ಪಾರ್ಶ್ವವಾಯು ರೋಗಿಯನ್ನು ಗುಣಪಡಿಸಿದ್ದು – ಮತ್ತಾ 9:2–8; ಮಾರ್ಕ 2:1–12; ಲೂಕ 5:17–26.
- ರಕ್ತಕುಸುಮ ರೋಗಿಯನ್ನು ಗುಣಪದಿಸಿದ್ದು– ಮತ್ತಾ 9:18–22; ಮಾರ್ಕ 5:21–34; ಲೂಕ 8:40–48.
- ಕೈಬತ್ತಿಹೋಗಿದ್ದವನನ್ನು ಗುಣಪಡಿಸಿದ್ದು– ಮತ್ತಾ 12:9–13, ಮಾರ್ಕ 3:1–5; ಲೂಕ 6:6–11.
- ಮೂರ್ಛಾ ರೋಗಿಯನ್ನು ಗುಣಪಡಿಸಿದ್ದು– ಮತ್ತಾ 17:14–18; ಮಾರ್ಕ 9:14–22; ಲೂಕ 9:37–42.
- ಕುರುಡನಿಗೆ ಕಣ್ಣುಕೊಟ್ಟಿದ್ದು– ಮಾರ್ಕ 8:22–25.
- ಬಾರ್ತಿಮಾಯನೆಂಬ ಒಬ್ಬ ಕುರುಡನಿಗೆ ಕಣ್ಣುಕೊಟ್ಟಿದ್ದು– ಮಾರ್ಕ 10:46–52; ಮತ್ತಾ 20:29–34; ಲೂಕ 18:35–43.
- ಒಬ್ಬ ಕಿವುಡನನ್ನು ಗುಣಪಡಿಸಿದ್ದು– ಮಾರ್ಕ 7:31–37.
- 10ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದ್ದು– ಲೂಕ 17:11–19.
- ಒಬ್ಬ ಪ್ರಧಾನನ ಮಗನನ್ನು ಗುಣಪಡಿಸಿದ್ದು– ಯೋಹಾನ 4:46–53.
- 38ವರ್ಷದ ಕುರುಡನನ್ನು ಸ್ವಸ್ಥಪಡಿಸಿದ್ದು– ಯೋಹಾನ 5:1–9.
- ಸಬ್ಬತ್ ದಿನದಲ್ಲಿ ಹುಟ್ಟುಕುರುಡನಿಗೆ ಕಣ್ಣು ಕೊಟ್ಟಿದ್ದು– ಯೋಹಾನ 9:1–7.

**2. ದೆವ್ವದ ಮೇಲೆ ಮಾಡಿದ ಅದ್ಭುತಗಳು:**

- ಅನ್ಯಮತದ ಸ್ತ್ರೀಯ ಮಗಳನ್ನು ದೆವ್ವದಿಂದ ಬಿಡಿಸಿದ್ದು– ಮತ್ತಾ 15:21–28.
- ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟವನನ್ನು ಬಿಡಿಸಿದ್ದು– ಮಾರ್ಕ 5:1–20.
- ಸಬ್ಬತ್ ದಿನದಲ್ಲಿ ದೆವ್ವಹಿಡಿದವಳನ್ನು ಬಿಡಿಸಿದ್ದು– ಲೂಕ 13:10–17.

**3. ಪ್ರಕೃತಿಯ ಮೇಲೆ ಮಾಡಿದ ಅದ್ಭುತಗಳು:**

- 5000 ಜನರಿಗೆ ಊಟ ಮಾಡಿಸಿದ್ದು– ಮತ್ತಾ 14:14–21; ಮಾರ್ಕ 6:31–56; ಲೂಕ 9:10–17; ಯೋಹಾನ 6:1–21.
- 4000 ಜನರಿಗೆ ಊಟ ಮಾಡಿಸಿದ್ದು – ಮತ್ತಾ 15:32–39; ಮಾರ್ಕ 8:1–10.
- ಸಮುದ್ರದ ಮೇಲೆ ನಡೆದದ್ದು – ಮತ್ತಾ 14:22–31; ಮಾರ್ಕ 6:45–52.
- ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು – ಯೋಹಾನ 2:1–12.
- ಸಮುದ್ರದ ಮೇಲಣ ಬಿರುಗಾಳಿಯನ್ನು ನಿಲ್ಲಿಸಿದ್ದು – ಮತ್ತಾ 8:23–27; ಲೂಕ 8:22–25.
- ಆಶ್ಚರ್ಯರೀತಿಯಿಂದ ಮೀನುಗಳನ್ನು ದೊರಕಿಸಿಕೊಟ್ಟದ್ದು – ಲೂಕ 5:1–11.

**4. ಮರಣದ ಮೇಲೆ ನಡೆಸಿದ ಅದ್ಭುತಗಳು:**

● ಸತ್ತುಹೋದ ಒಬ್ಬ ಹುಡುಗಿಯನ್ನು ಬದುಕಿಸಿದ್ದು- ಮತ್ತಾ 9:18,23–26.

● ನಾಯಿನೆಂಬ ಊರಿನಲ್ಲಿ ಸತ್ತು ಹೋಗಿದ್ದ ಒಬ್ಬ ಯೌವ್ವನಸ್ಥನನ್ನು ಬದುಕಿಸಿದ್ದು- ಲೂಕ 7:11–17.

● ಸತ್ತು ಹೊಗಿದ್ದ ಲಾಜರನನ್ನು ಬದುಕಿಸಿದ್ದು – ಯೋಹಾನ 11:1–44.

**ಯೇಸುವಿನ ಬೋಧನೆ:**

ಯೇಸು ಕ್ರಿಸ್ತನು ದೇವರ ರಾಜ್ಯದ ಸಂದೇಶವನ್ನು ಜನರಿಗೆ ಅರ್ಥ ಮಾಡಿಸುವುದಕ್ಕಾಗಿ ಅಥವಾ ತಿಳಿಯಪಡಿಸುವುದಕ್ಕಾಗಿ ಅನೇಕ ಸಾಮ್ಯಗಳನ್ನು ಉಪಯೋಗಿಸಿ ಬೋಧಿಸಿದನು. ಅವು ಈ ಕೆಳಗಿನಂತಿವೆ.

❖ ಬಿತ್ತುವವನ ಸಾಮ್ಯ (ಮತ್ತಾಯ 13:4–9).

❖ ಒಳ್ಳೆಯ ಬೀಜವನ್ನು ತನ್ನ ಹೊಲದಲ್ಲಿ ಬಿತ್ತಿದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ. (ಮತ್ತಾ 13:24–30).

❖ ಸಾಸಿವೆ ಕಾಳಿನ ಸಾಮ್ಯ (ಮತ್ತಾ 13:31,32)

❖ ಪರಲೋಕ ರಾಜ್ಯವು ಹುಳಿಹಿಟ್ಟಿಗೆ ಹೋಲಿಕೆಯಾದ ಸಾಮ್ಯ (ಮತ್ತಾ 13:33,34)

❖ ಪರಲೋಕ ರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾದ ಸಾಮ್ಯ (ಮತ್ತಾ 13:44).

❖ ಪರಲೋಕ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ತನಿಗೆ ಹೋಲಿಕೆಯಾದ ಸಾಮ್ಯ (ಮತ್ತಾ 13:45,46).

❖ ಪರಲೋಕ ರಾಜ್ಯವು ಒಂದು ಬಲೆಗೆ ಹೋಲಿಕೆಯಾದ ಸಾಮ್ಯ (ಮತ್ತಾ 13:47–50).

❖ ದ್ರಾಕ್ಷೇತೋಟದ ಸಾಮ್ಯ (ಮತ್ತಾ 21:23–46).

❖ ಹೆಚ್ಚಿಸಲ್ಪಡುವವನ ಮತ್ತು ತಗ್ಗಿಸಲ್ಪಡುವವನ ಕುರಿತಾಗಿ ಸಾಮ್ಯರೂಪದಲ್ಲಿ ಬೋಧಿಸಿದ್ದು (ಲೂಕ 14:1–14).

❖ ಗೊಡ್ಡು ಅಂಜುರ ಮರದ ಸಾಮ್ಯ (ಲೂಕ 13:1–9).

❖ ಪ್ರತಿಯೊಬ್ಬರು ಪ್ರಾರ್ಥನೆಯಲ್ಲಿ ಆಸಕ್ತರಾಗಿರಬೇಕೆಂದು ಸಾಮ್ಯರೂಪದಲ್ಲಿ ಬೋಧಿಸಿದ್ದು (ಲೂಕ 11:1–13).

❖ ಶಿಷ್ಯರು ಯಾವಾಗಲು ಎಚ್ಚರವಾಗಿರಬೇಕೆಂಬುದಾಗಿ ಎರಡು ಸಾಮ್ಯಗಳಿಂದ ಬೋಧಿಸಿದ್ದು (ಲೂಕ 12:35–48).

❖ 10 ಮೋಹರಿಗಳ ವಿಷಯವಾದ ಸಾಮ್ಯ (ಲೂಕ 19:11–27).

❖ ಪ್ರಾರ್ಥನೆಯ ವಿಷಯದಲ್ಲಿ ಅನ್ಯಾಯಗಾರನಾದ ನ್ಯಾಯಾಧಿಪತಿಯ ಸಾಮ್ಯ (ಲೂಕ 18:1–8).

❖ ತನ್ನನ್ನು ಅನುಸರಿಸುವವರು ತಕ್ಕ ಆಲೋಚನೆ ಮಾಡಿಕೊಂಡು ಬರಬೇಕೆಂಬ ಸಾಮ್ಯ (ಲೂಕ 14:25–35).

❖ ಮುಂದಿನ ಕಾಲಕ್ಕೆ ಸಿದ್ಧಮಾಡಿಕೊಂಡ ಕಳ್ಳನಾದ ಮನೆವಾರ್ತೆಯನ ಸಾಮ್ಯ (ಲೂಕ 16:1–13.

❖ ಭೋಗ ಪುರುಷನು-ಭಿಕ್ಷುಕಗಾರನು ಇವರ ದೃಷ್ಟಾಂತದಿಂದ ಭೋಧಿಸಿದ್ದು (ಲೂಕ 16:19–31)

ಯೇಸು ಕ್ರಿಸ್ತನು ಜನರ ಮನೋನೇತ್ರಗಳನ್ನು ಬೆಳಗಿಸುವುದಕ್ಕಾಗಿ, ಪಾಪದಿಂದ ಬಿಡಿಸುವುದಕ್ಕಾಗಿ, ಸತ್ಯದಲ್ಲಿ ನಡೆಸುವುದಕ್ಕಾಗಿ, ನಾಶನದಿಂದ ತಪ್ಪಿಸುವುದಕ್ಕಾಗಿ ಅವರ ಸಂಸ್ಕೃತಿಗನುಸಾರವಾಗಿ ಈ ರೀತಿಯಾದಂಥಹ ಸಾಮ್ಯಗಳನ್ನು ಹೇಳುವುದರ ಮೂಲಕ ಉಪದೇಶಿಸಿದನು. ಇನ್ನೂ ಅನೇಕ ಕಡೆ ಉಪಾಲಂಕಾರಗಳನ್ನು ಉಪಯೋಗಿಸಿ ಯೇಸುಕ್ರಿಸ್ತನ ದೇವರ ರಾಜ್ಯದ ಕುರಿತಾಗಿ ಬೋಧಿಸಿದನು. ಅವು ಎಷ್ಟು ಮಾತ್ರಕ್ಕು ಕಷ್ಟಕರವಾದ ರೀತಿಯಲ್ಲಿರದೇ ಸರಳವಾಗಿ ಗ್ರಹಿಸಿಕೊಳ್ಳುವಂತಹ ಅಥವಾ ಅರ್ಥಮಾಡಿಕೊಳ್ಳುವಂತಹ ರೀತಿಯಲ್ಲಿದೆ,

ಯೇಸುವಿನ ಬೋಧನೆಯಿಂದಾಗಿ ಅನೇಕ ಅಕ್ರೈಸ್ತರು (ಅನ್ಯಜನರು) ಆಗಿನ ದಿನಮಾನಗಳಲ್ಲಿ ರಕ್ಷಣೆ ಮಾರ್ಗದಲ್ಲಿ ಬಂದರು. ಮತ್ತು ದೇವರ ರಾಜ್ಯಕ್ಕಾಗಿ ನೀತಿಗಾಗಿ ದುಡಿಯುವಂತ ಶಿಷ್ಯರಾದರು. ಯೇಸುವಿನ ಬೋಧನೆಯಿಂದಾಗಿ (ದೇವರ ವಾಕ್ಯದಿಂದ) ಈ ಆಧುನಿಕ ಯುಗದಲ್ಲೂ ಸಹ ಪ್ರತಿ ದಿನ ನಿತ್ಯ ಅನೇಕರು ರಕ್ಷಣೆ ಮಾರ್ಗದಲ್ಲಿ ಬರುವುದನ್ನು ಕಾಣುತ್ತಾ ಇದ್ದೇವೆ. ಅದಕ್ಕಾಗಿ ನಾವು ದೇವರಿಗೆ ಸ್ತೋತ್ರ ಮಾಡುವವರಾಗಿರೋಣ. ಮತ್ತು ಎಡಬಿಡದೆ ನಾಶನದಲ್ಲಿರುವಂತ ಜನರು ರಕ್ಷಣೆ ಹೊಂದುವುದಕ್ಕಾಗಿ ಪ್ರಾರ್ಥಿಸೋಣ.

## ಯೇಸು ಕ್ರಿಸ್ತನ ಮರಣ

ಪಿಲಾತನು ಜನರ ಒತ್ತಾಯದ ಮೇರೆಗೆ ಯೇಸುವನ್ನು ಮರಣದಂಡನೆಗೆ ಒಪ್ಪಿಸಿದ ನಂತರ ದೇಶಾಧಿಪತಿಯ ಸಿಪಾಯಿಗಳು ಯೇಸುವನ್ನು ಅರಮನೆಯ ಒಳಗೆ ತೆಗೆದುಕೊಂಡು ಹೋಗಿ ಆತನು ಬಟ್ಟೆಗಳನ್ನು ತೆಗೆದು ಹಾಕಿ ಕೆಂಪು ಒಲ್ಲಿಯನ್ನು ಹೊದಿಸಿ ಮಳ್ಳು ಬಳ್ಳಿಯಿಂದ ಕಿರೀಟ ಹಣೆದು ಆತನ ತಲೆಯ ಮೇಲೆ ಇಟ್ಟು, ಬಲಗೈಯಲ್ಲಿ ಬೆತ್ತವನ್ನು ಕೊಟ್ಟು, ಆತನ ಮುಂದೆ ಮೊಣಕಾಲೂರಿ, – ಯೇಹುದ್ಯರ ಅರಸನೆ, ನಿನಗೆ ನಮಸ್ಕಾರ ಎಂದು ಆತನನ್ನು ಪರಿಹಾಸ್ಯ ಮಾಡಿದರು, ಮತ್ತು ಆತನ ಮೇಜೆ ಉಗುಳಿ, ಬೆತ್ತವನ್ನು ಕಸಿದುಕೊಂಡು ಆತನ ತಲೆಯ ಮೇಲೆ ಹೊಡೆದರು. ಹೀಗೆ ಆತನನ್ನು ಪರಿಹಾಸ್ಯ ಮಾಡಿದ ಮೇಲೆ ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೊದರು.

ನಂತರ ಆತನನ್ನು ಶಿಲುಬೆಗೆ ಹಾಕಿ ಆತನ ಬಟ್ಟೆಗಳಿಗಾಗಿ ಚೀಟು ಹಾಕಿ ಪಾಲು ಮಾಡಿಕೊಂಡರು. ಅಲ್ಲಿ ಕೂತುಕೊಂಡು ಆತನನ್ನು ಕಾಯುತ್ತಾ ಇದ್ದರು. ಇದಲ್ಲದೆ ಆತನ ಮೇಲೆ ಹೊರಿಸಿದ ಅಪರಾಧವನ್ನು ಬರೆದು ಆತನ ತಲೆಯ ಮೇಲ್ಗಡೆ ಹಚ್ಚಿದರು. ಅದೇನೆಂದರೆ – "ಇವನು ಯೇಸು, ಯೇಹುದ್ಯರ ಅರಸನು" ಆಗ ಇಬ್ಬರು ಕಳ್ಳರನ್ನು ತಂದು ಒಬ್ಬನನ್ನು ಬಲಗಡೆಯಲ್ಲಿ ಒಬ್ಬನನ್ನು ಎಡಗಡೆಯಲ್ಲಿ ಆತನ ಸಂಗಡ ಶಿಲುಬೆಗೆ ಹಾಕಿದರು. ಅಲ್ಲಿ ಹಾದಹೋಗುವವರು ತಲೆಆಡಿಸಿ – ದೇವಾಲಯವನ್ನು ಕಟ್ಟಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ, ನೀನು ದೇವರ ಮಗನಾಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸುತ್ತಿದ್ದರು. ಅದೇ ರೀತಿಯಾಗಿ ಮಹಾಯಾಜಕರು ಶಾಸ್ತ್ರಿಗಳು ಹಿರಿಯರು– ಅವನು ಮತ್ತೊಬ್ಬರನ್ನು ರಕ್ಷಿಸಿದವನು, ತನ್ನನ್ನು ರಕ್ಷಿಸಿಕೊಳ್ಳಲಾರನು. ಅವನು ಇಸ್ರಾಯೇಲರ ಅರಸನಲ್ಲವೇ. ಈಗ ಶಿಲುಬೆಯಿಂದ ಇಳಿದುಬರಲಿ. ಇಳಿದು ಬಂದರೆ ನಂಬಿಕೆ ಇಡುತ್ತೇವೆ, ಆತನಿಗೆ ಅನೇಕ ಮಾತುಗಳನ್ನು ಆಡುವುದರ ಮೂಲಕ ಹಾಸ್ಯ ಮಾಡುತ್ತಿದ್ದರು. ಆತನ ಸಂಗಡ ಶಿಲುಬೆಗೆ ಹಾಕಲ್ಪಟ್ಟ ಕಳ್ಳರು ಸಹ ಆತನನ್ನು ಅದೇ ಪ್ರಕಾರ ನಿಂದಿಸುತ್ತಿದ್ದರು.

ಯೇಸು ಸಾಯುವ ಸಮಯದಲ್ಲಿ ಮದ್ಯಾನ 12 ಗಂತೆಯಿಂದ 3 ಗಂಟೆಯ ವರೆಗೆ ಆ ದೇಶದ ಮೇಲಲ್ಲಾ ಕತ್ತಲು ಕವಿಯಿತು. ಸುಮಾರು ಮೂರು ಗಂಟೆಗೆ "ಏಲೀ ಏಲೀ ಲಮಾ ಸಬಕ್ತಾನಿ" ಅಂದರೆ "ನನ್ನ ದೇವರೆ ನನ್ನ ದೇವರೆ ಯಾಕೆ ಕೈಬಿಟ್ಟಿದ್ದಿ" ಎಂದು ಮಹಾ ದ್ವನಿಯಿಂದ ಕೂಗಿದನು. ಅಲ್ಲಿ ನಿಂತಿದ್ದವರಲ್ಲಿ ಕೆಲವರು ಕೇಳಿ – ಇವನು ಎಲಿಯನನ್ನು ಕರೆಯುತ್ತಾನೆ ಅಂದರು. ಕೂಡಲೆ ಅವರಲ್ಲಿ ಒಬ್ಬನು ಓಡಿ ಹೋಗಿ ಸ್ಪಂಜನ್ನು ತಂದು ಹುಳಿ ರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತನಿಗೆ ಕುಡಿಯಲ್ಲಿಕ್ಕೆ ಕೊಟ್ಟನು. ಉಳಿದವರು – ಬಿಡು, ಎಲಿಯನು ಬಂದು ಅವನನ್ನು ರಕ್ಷಿಸುವವನೇನೋ ನೊಡೋಣ ಅಂದರು. ಯೇಸು ತಿರುಗಿ ಮಹಾ ದ್ವನಿಯಿಂದ ಕೂಗಿ ಪ್ರಾಣಬಿಟ್ಟನು. ಆಗ ದೇವಾಲಯದ ತೆರೆಯು ಮೇಲಿನಿಂದ ಕೇಳಗಿನ ವರೆಗೂ ಹರಿದು ಎರಡು ಭಾಗವಾಯಿತು, ಭೋಮಿಯು ಅದರಿತು, ಬಂಡೆಗಳು ಸೀಳಿ ಹೊದವು. ಸಮಾಧಿಗಳು ತೆರೆದವು (ಮತ್ತಾಯ 27:27–56; ಮಾರ್ಕ 15:16–41; ಲೂಕ 23:26, 33–49; ಯೊಹಾನ 19:2.3.16–30).

## ಯೇಸುವಿನ ಪುನರುತ್ಥಾನ

ಸಬ್ಬತ ದಿನ ಆದ ಮೇಲೆ ವಾರದ ಮೋದಲನೇಯ ದಿವಸ ಬೆಳಗಾಗುವಾಗ ಮಗ್ದಲದ ಮರಿಯಳು, ಆ ಬೇರೆ ಮರಿಯಳು ಸಮಾಧಿಯನ್ನು ನೊಡುವುದಕ್ಕೆ ಬಂದರು. ಆಗ ಮಾಹಾ ಭೂಕಂಪವಾಯಿತು. ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಭಾಗಿಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು. ಅವನ ಮುಖ ಭಾವವು ಮಿಂಚಿನಂತೆ ಇದ್ದವು, ಅವನ ಉಡುಪು ಹಿಮದಂತೆ ಬೆಳ್ಳಗಿತ್ತು, ಕಾವಲುಗಾರರು ಅವನಿಗೆ ಹೆದರಿ ನಡುಗಿ ಸತ್ತವರ ಹಾಗಾದರು. ಆಗ ದೂತನು ಆ ಹೆಂಗಸರಿಗೆ– ನೀವು ಹೆದರಬೇಡಿರಿ, ಶಿಲುಬೆಗೆ ಹಾಕಲ್ಪಟ್ಟ ಯೇಸುವನ್ನು ಹುಡುಕುತ್ತಿರುವುದನ್ನು ಬಲ್ಲೆನು, ಆತನು ಇಲ್ಲಿ ಇಲ್ಲ. ತಾನು ಹೇಳಿದಂತೆ ಎದ್ದಿದ್ದಾನೆ, ಆತನು ಮಲಗಿದ್ದ ಸ್ಥಳವನ್ನು ನೋಡಿರಿ, ಮತ್ತು ಬೇಗ ಹೋಗಿ ಆತನ ಶಿಷ್ಯರಿಗೆ– ಸತ್ತವನು ಬದುಕಿದ್ದಾನೆ, ಆತನು ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ. ಅಲ್ಲಿ ಆತನನ್ನು ಕಾಣುವಿರಿ ಎಂದು ತಿಳಿಸಿರಿ, ನಾನು

ನಿಮಗೆ ಹೇಳಿದ್ದೇನೆ, ನೋಡಿರಿ ಎಂದು ಹೇಳಿದನು. ಅವರು ಬಯದಿಂದಲು ಮಹಾ ಸಂತೋಷದಿಂದಲು ಬೇಗ ಸಮಾಧಿಯ ಬಳಿಯಿಂದ ಹೊರಟು ಆತನ ಶಿಷ್ಯರಿಗೆ ತಿಳಿಸುವುದಕ್ಕೆ ಓಡಿ ಹೊದರು. ಆಗ ಯೇಸು ಅವರ ಎದುರಿಗೆ ಬಂದು – ನಿಮಗೆ ಶುಭವಾಗಲಿ ಅಂದನು. ಅವರು ಹತ್ತಿರಕ್ಕೆ ಬಂದು ಆತನ ಪಾದವನ್ನು ಹಿಡಿದು ಆತನಿಗೆ ನಮಸ್ಕಾರ ಮಾಡಿದರು. ಯೇಸು ಅವರಿಗೆ – ಹೆದರಬೇಡಿರಿ, ನನ್ನ ಸಹೋದರರ ಬಳಿಗೆ ಹೋಗಿ ಅವರು ಗಲಿಲಾಯಕ್ಕೆ ಹೋಗಬೇಕೆಂದು ಹೇಳಿರಿ, ಅಲ್ಲಿ ನನ್ನನ್ನು ನೋಡುವರು ಎಂದು ಹೇಳಿದರು.

ಅವರು ಹೋಗುತ್ತಿರುವಾಗ ಕಾವಲುಗಾರರಲ್ಲಿ ಕೇಲವರು ಪಟ್ಟಣದೊಳಕ್ಕೆ ಬಂದು ನಡೆದ ಸಂಗತಿಗಳನ್ನೇಲ್ಲ ಮಹಾ ಯಾಜಕರಿಗೆ ತಿಳಿಸಿದರು. ಇವರು ಹಿರಿಯರ ಸಂಗಡ ಕೂಡಿಕೊಂಡು ಆಲೋಚನೆ ಮಾಡಿ, ಆ ಸಿಪಾಯಿಗಳಿಗೆ ಬಹಳ ಹಣ ಕೊಟ್ಟು – ಅವನ ಶಿಷ್ಯರು ರಾತ್ರಿಯಲ್ಲಿ ಬಂದು ನಾವು ನಿದ್ದೆ ಮಾಡುತ್ತಿರುವಾಗ ಅವನನ್ನು ಕದ್ದುಕೊಂಡು ಹೋದರು ಎಂದು ಹೇಳಿರಿ ಈ ಸುದ್ದಿ ದೇಶಾಧಿಪತಿಯ ಕಿವಿಗೆ ಬಿದ್ದರೆ ನಾವು ಅವನನ್ನು ಸಮಾಧಾನಪಡಿಸಿ ನಿಮಗೆ ಭಯವಿಲ್ಲದ ಹಾಗೆ ಮಾಡುತ್ತೇವೆ ಅಂದರು. ಇವರು ಹಣವನ್ನು ತೆಗೆದುಕೊಂಡು ತಮ್ಗೆ ಹೇಳಿಕೊಟ್ಟಹಾಗೆ ಮಾಡಿದರು. ಈ ಮಾತು ಇಂದಿನ ವರೆಗೂ ಯೆಹೂದ್ಯರಲ್ಲಿ ಹಬ್ಬಿದೆ (ಮತ್ತಾಯ 28:1–15; ಮಾರ್ಕ 16:1–10; ಲೂಕ 24:1–10; ಯೋಹಾನ 20:1–18).

**ಪ್ರಶ್ನೆಗಳು**

1. ಯೇಸು ಯಾರು? ಮತ್ತು ಯಾಕೆ ಈ ಲೋಕಕ್ಕೆ ಬಂದನು?

2. ಯೇಸು ಯಾರಿಂದ ದೀಕ್ಷಾಸ್ನಾನ ಮಾಡಿಸಿಕೊಂಡನು?

3. ಯೇಸು ಕ್ರಿಸ್ತನ ಅದ್ಭುತಗಳನ್ನು ಎಷ್ಟು ಭಾಗವಾಗಿ ವಿಂಗಡಿಸಲಾಗಿದೆ ಮತ್ತು ಅವು ಯಾವವು?

4. ಯೇಸು ಪುನರುತ್ಥಾನವಾಗುವ ಸಮಯದಲ್ಲಿ ಏನು ಸಂಭವಿಸಿತು?

5. ಈ ಒಂದು ಕಥೆಯಲ್ಲಿ ಯೇಸುವಿನ ಕುರಿತಾಗಿ ನೀವು ಏನು ಕಲಿತುಕೊಂಡಿದ್ದಿರಿ ಅದನ್ನು ನಿಮ್ಮ ಸ್ವಂತ ಮಾತಿನಲ್ಲಿ ವಿವರಿಸಿರಿ?

ಯೇಸುವಿನ ಕುರಿತಾಗಿ ಸುವಾರ್ತೆಗಳಲ್ಲಿ ಮತ್ತು ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ.

# ಲಾಜರನು

ಕ್ರಿಸ್ತನ ಮೂಲಕ ಮರಣದಿಂದ ಜೀವಂತವಾಗಿ ಎಬ್ಬಿಸಲ್ಪಟ್ಟ ಲಾಜರನು ಅಳಿಯದ ಹೆಸರನ್ನು ಪಡೆದಿದ್ದಾನೆ. ಲಾಜರ ಎಂದರೆ ದೇವರು ಸಹಾಯ ಮಾಡಿದನು ಎಂದರ್ಥ. ಹೆಸರಿಗೆ ತಕ್ಕಂತೆ ದೇವರಿಂದ ಅದ್ಭುತವಾಗಿ ಸಹಾಯವನ್ನು ಪಡೆದು ಸತ್ತವರಿಂದ ಎಬ್ಬಿಸಲ್ಪಟ್ಟವರಲ್ಲಿ ಒಬ್ಬನಾಗಿದ್ದಾನೆ.

ಬೇಥಾನ್ಯ ಎಂಬ ಒಂದು ಹಳ್ಳಿಯಲ್ಲಿ ಲಾಜರನೆಂಬ ಒಬ್ಬ ವ್ಯಕ್ತಿಯಿದ್ದನು, ಈ ಲಾಜರನು ತನ್ನ ಸಹೋದರಿಯಾದ ಮಾರ್ಥ ಮತ್ತು ಮರಿಯಳ ಜೊತೆಲ್ಲಿದ್ದನು (ಯೋಹಾನ 11:1). ಮೂವರನ್ನು ಯೇಸುಕ್ರಿಸ್ತನು ಬಹಳವಾಗಿ ಪ್ರೀತಿಸುತಿದ್ದನು, ಯೇಸು ಈ ಕಡೆಗೆ ಬಂದಾಗಲೆಲ್ಲಾ ಇವರ ಮನೆಯಲ್ಲಿ ಇಳಿದುಕೊಳ್ಳುತ್ತಿದ್ದನು(ಲೂಕ 10:38,41). ಅವರೂ ಸಹ ಯೇಸುವನ್ನು ಉಪಚರಿಸುವುದರಲ್ಲಿ ಬಹಳ ಸಂತೋಷಪಡುತ್ತಿದ್ದರು. ಇವರು ಬಹಳ ಶ್ರೀಮಂತರಾಗಿದ್ದರೆಂದು ಹೇಳಬಹುದು. ಕಾರಣ ಯಾಕೆಂದರೆ ಮರಿಯಳು ಅಚ್ಚ ಜಟಾಮಾಂಸಿ ತೈಲವನ್ನು ಯೇಸುವಿನ ಪಾದಗಳಿಗೆ ಹಚ್ಚಿದಳೆಂದು (ಯೋಹಾನ 12:3)ರಲ್ಲಿ ಓದುತ್ತೇವೆ. ಈ ತೈಲವನ್ನು 300 ರೂ ಹಣಕ್ಕೆ ಮಾರಬವುದಿತ್ತಲ್ಲಾ ಎಂದು ಇಸ್ಕಾರಿಯೋತ ಯೂದನು ಹೇಳುವುದನ್ನು ಕಾಣುತ್ತೇವೆ. ಈ ತೈಲವು ಹಿಮಾಲಯದಲ್ಲಿ ಬೆಳೆಯುವ ಒಂದು ಬಗೆಯ ಮರದಿಂದ ತೆಗೆದು ತಯಾರಿಸುವ ತೈಲವಿರಬಹುದು ಎಂದು ಹೇಳುತ್ತಾರೆ. ಇಂಥಹ ತೈಲವನ್ನು ಲಾಜರನ ಸಹೋದರಿಯರು ಕೊಂಡುಕೊಳ್ಳುತ್ತಿದ್ದರೆಂದರೇ ಇವರು ಶ್ರೀಮಂತರೇ ಆಗಿದ್ದಿರಬಹುದು.

## ಲಾಜರನ ಮರಣ

ಒಂದು ದಿನ ಲಾಜರನು ತೀರಿ ಹೋಗುತ್ತಾನೆ. ಆದರೆ ಲಾಜರನಿಗೆ ಯಾವ ವ್ಯಾಧಿಯಿತ್ತೆಂದು ತಿಳಿದು ಬಂದಿಲ್ಲ. ಅವನು ರೋಗ ವಾಸಿಯಾಗದೇ ತೀರಿ ಹೋದನು (ಯೋಹಾನ 11:1–57). ಲಾಜರನು ಕಾಯಿಲೆ ಬಿದ್ದಾಗ ಅವನ



ಸಹೋದರಿಯರಿಬ್ಬರು ಯೇಸುವಿಗೆ ತಮ್ಮ ಮನೆಗೆ ಬರಲು ಹೇಳಿ ಕಳುಹಿಸಿದರು. ಯಾಕೆಂದರೆ ಯೇಸು ಸ್ವಾಮಿಯು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಅನೇಕ ಅದ್ಭುತಗಳನ್ನು ಮಾಡಿದ್ದನ್ನು ನೋಡಿರಬಹುದು, ಕೇಳಿರಬಹುದು. ಹಾಗಾಗಿ ಯೇಸು ನಮ್ಮ ಮನೆಗೆ ಬಂದರೆ ನಮ್ಮ ತಮ್ಮನಿಗೆ ಗುಣವಾಗುವುದು ಎಂದು ನಂಬಿಕೆ ಅವರಲ್ಲಿತ್ತು. ಆದರೆ ಸತ್ತವರನ್ನು ಎಬ್ಬಿಸುತ್ತಾನೆಂಬ ನಂಬಿಕೆ ಅವರಲ್ಲಿ ಇರಲಿಲ್ಲ (ಯೋಹಾನ 11:24, 39).

ಪ್ರಿಯ ದೇವರ ಮಕ್ಕಳೆ ನಾವು ಗ್ರಹಿಸಿಕೊಳ್ಳಬೇಕಾದಂತ ಒಂದು ಸಂಗತಿಯುಂಟು. ಅದೇನೆಂದರೆ ಲಾಜರನಿಗೆ ಕಾಯಿಲೆಯಾಗಿದೆ ಎಂಬ ಸುದ್ದಿ ತಿಳಿದರೂ ಸಹ ಯೇಸು ತಕ್ಷಣವೇ ಬೇಥಾನ್ಯಕ್ಕೆ ಬರಲಿಲ್ಲ. ಲಾಜರನನ್ನು ಹೆಚ್ಚಾಗಿ ಪ್ರೀತಿಸುತ್ತಿದ್ದರೂ ಯೇಸು ಗಾಬರಿಪಡಲಿಲ್ಲ. ಏಕೆಂದರೆ ಲಾಜರನು ಸತ್ತರೂ ಅದು ನಿರಂತರವಾದ ಮರಣವಲ್ಲ ಎಂದು ಯೇಸುವಿಗೆ ತಿಳಿದಿತ್ತು. ಇದು ಮರಣಕ್ಕಾಗಿ ಬಂದ ವ್ಯಾಧಿಯಲ್ಲ, ದೇವರ ಮಹಿಮೆಗಾಗಿ ಬಂದದ್ದು ಎನ್ನುತ್ತಾನೆ. ಯೇಹಾನ 11:4 ರಲ್ಲಿ ತನ್ನ ಶಿಷ್ಯರು ಕೂಡ ಈ ಕಾರ್ಯವನ್ನು ನೋಡಿ ನಂಬಲಿ ಎಂಬ ಉದ್ದೇಶದಿಂದಲೇ ಎರಡು ದಿನ ತಡಮಾಡುತ್ತಾನೆ (ಯೇಹಾನ 11:6) ನಂತರ ಬೇಥಾನ್ಯಕ್ಕೆ ಹೋಗುತ್ತಾನೆ.

## ಯೇಸು ಲಾಜರನನ್ನು ಮರಣದಿಂದ ಎಬ್ಬಿಸಿದ್ದು

ಮರಿಯಳು ಯೇಸು ಇದ್ದ ಸ್ಥಳಕ್ಕೆ ಬಂದು ತನ್ನ ಸಹೋದರನ ಸಾವಿನ ಕೂರಿತಾಗಿ ತಿಳಿಸಿದಾಗ ಯೇಸು ತನ್ನ ಆತ್ಮದಲ್ಲಿ ನೊಂದುಕೊಂಡು ಅವನನ್ನು ಎಲ್ಲಿ ಇಟ್ಟಿದ್ದೀರಿ? ಎಂದು ಕೇಳಿದಾಗ ಅವರು ಲಾಜರನ ಸಮಾಧಿಯ ಬಳಿಗೆ ಕರೆದುಕೊಂಡು ಬಂದು ತೋರಿಸಿದರು. ಅದು ಗವಿಯಾಗಿತ್ತು. ಒಂದು ಕಲ್ಲನ್ನು ಬಾಗಿಲಿಗೆ ಮುಚ್ಚಲಾಗಿತ್ತು. ಯೇಸು “ಆ ಕಲ್ಲನ್ನು ತೆಗೆದು

ಹಾಕಿರಿ'' ಎಂದನು. ಅದಕ್ಕೆ ಮಾರ್ಥಳು ಅತನಿಗೆ – ''ಕರ್ತನೇ, ಈಗ ದುರ್ವಾಸನೆ ಇರುವುದು, ಅವನು ಸತ್ತು ನಾಲ್ಕು ದಿನಗಳಾಗಿವೆ'' ಎಂದಳು. ಯೇಸು ಆಕೆಗೆ – ''ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವೆ ಎಂದು ನಾನು ನಿನಗೆ ಹೇಳಲಿಲ್ಲವೇ?'' ಎಂದನು. ಆಗ ಅವರು ಕಲ್ಲನ್ನು ತೆಗೆದು ಹಾಕಿದರು. ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ ತನ್ನ ತಂದೆಗೆ ಕೃತಜ್ಞತೆಯನ್ನು ಸಲ್ಲಿಸಿ– ಲಾಜರನೇ , ''ಹೊರಗೆ ಬಾ'' ಎಂದು ಗಟ್ಟಿಯಾದ ಸ್ವರದಿಂದ ಕೂಗಿದನು. ಆಗ ಲಾಜರನು ಶವ ವಸ್ತ್ರಗಳಿಂದ ಹೊರಗೆ ಬಂದನು. ಆಗ ಯೇಹೂದ್ಯರಲ್ಲಿ ಅನೇಕರು ನೋಡಿ ಆಶ್ಚರ್ಯಪಟ್ಟು ಯೇಸುವಿನ ಮೇಲೆ ನಂಬಿಕೆ ಇಟ್ಟರು.

**ಲಾಜರನ ಅನಂತರದ ಸೇವೆ**

ಯೇಹೂದ್ಯರು ಈ ಲಾಜರನು ಯೇಸುವಿನೊಂದಿಗೆ ನಿಕಟ ಸಂಭಂದ ಇಟ್ಟುಕೊಂಡಿದ್ದರಿಂದ ಲಾಜರನನ್ನು ಕೊಲ್ಲಬೇಕೆಂದಿರುವಾಗ ಅವನು ಕ್ರಿ.ಪೂ. 60ರಲ್ಲಿ ಕುಪ್ರದ್ವೀಪಕ್ಕೆ ತಪ್ಪಿಸಿಕೊಂಡು ಓಡಿ ಹೋದನು, ಹಿತ್ತಿಯ ಎಂಬ ಊರಿನಲ್ಲಿ ಸುವಾರ್ತೆ ಸಾರಿ ಸಭೆಯ ನಾಯಕನಾಗಿ ಸೇವೆ ಮಾಡಿದನೆಂದು ಚರಿತ್ರೆಯು ತಿಳಿಸುತ್ತದೆ. ಮತ್ತು ಇನ್ನೂ ಅನೇಕ ರೀತಿಯಲ್ಲಿ ಸೇವೆ ಮಾಡಿದ್ದಾನೆಂದು ಸಹ ತಿಳಿಸುತ್ತದೆ.

**ಪ್ರಶ್ನೆಗಳು**


1. 'ಲಾಜರ' ಎಂಬ ಈ ಹೆಸರಿನ ಅರ್ಥವೇನು?
2. ಲಾಜರನು ಜೀವಿಸುತ್ತಿದ್ದ ಅಥವಾ ವಾಸಿಸುತ್ತಿದ್ದ ಊರು ಯಾವುದು?
3. ಲಾಜರನ ಸಹೋದರಿಯರ ಹೆಸರೇನು?
4. ಅಚ್ಚ ಜಟಾಮಾಂಸಿ ತೈಲ್ಯವನ್ನು ಇಸ್ಕರಿಯೋತ ಯೂದನು ಎಷ್ಟು ಹಣಕ್ಕೆ ಮಾರಬಹುದಿತ್ತು ಎಂದು ಹೇಳಿದನು?
5. ಯೇಸು– ಮಾರ್ಥ, ಮರಿಯಳ ಬಳಿಗೆ ಬಂದಾಗ ಲಾಜರನನ್ನು ಸಮಾಧಿಮಾಡಿ ಎಷ್ಟು ದಿನಗಳಾಗಿದ್ದವು?

**ಲಾಜರನ ಕುರಿತಾಗಿ :** ಯೋಹಾನ 11:1–44.

# ಪೇತ್ರ (ಸೀಮೋನ)

ಇವನು ಯೇಸು, ಪಿಲಾತ ಹಾಗೂ ಹೆರೋದನು ಇವರು ಜೀವಿಸುವ ಸಮಯದಲ್ಲಿ ಇವನು ಗಲಿಲಾಯ ಪ್ರಾಂತ್ಯದಲ್ಲಿ ಜೀವಿಸುವವನಾಗಿದ್ದನು. ಇವನೊಬ್ಬ ಬೆಸ್ತನು. ತಮ್ಮ –ಅಂದ್ರೆಯ. ಪೇತ್ರನ ಮೊದಲ ಹೆಸರು ಸೀಮೋನ ಎಂಬುದಾಗಿದೆ.

**ಪೇತ್ರನು ಶಿಷ್ಯನಾದದ್ದು**



ಯೇಸು ಗಲಿಲಾಯ ಸಮುದ್ರದ ಬಳಿಯಲ್ಲಿ ಹೋಗುತ್ತಿರುವಾಗ ಸೀಮೋನನು (ಪೇತ್ರ) ಮತ್ತು ಅವನ ತಮ್ಮನಾದ ಅಂದ್ರೆಯನು ಸಮುದ್ರದಲ್ಲಿ ಬಲೆ ಬೀಸುವುದನ್ನು ಕಂಡನು. ಯೇಸು ಅವರಿಗೆ– ನನ್ನ ಹಿಂದೆ ಬನ್ನಿರಿ, ಮನುಷ್ಯರನ್ನು ಹಿಡಿವುಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು ಎಂದು ಹೇಳುತ್ತಲೇ ಅವರು ತಮ್ಮ ಬಲೆಗಳನ್ನು ಬಿಟ್ಟು ಆತನ ಹಿಂದೆ ಹೋದರು (ಮಾರ್ಕ 1:16–18).

ನಂತರ ಪೇತ್ರನು ಯೇಸು ಹೋದಕಡೆಗೆಲ್ಲಾ ಹೋಗುತ್ತಾ ಆತನ ಬೋಧನೆ, ಉಪದೇಶ ಕೇಳುತ್ತಾ, ಅದ್ಭುತಗಳನ್ನು ಸೂಚಕ ಕಾರ್ಯನ್ನು ಕೇಳುತ್ತಾ ಪರಿವರ್ತನೆಗೊಂಡು ಯೇಸುವಿನ ಶಿಷ್ಯನಾಗಿ ತನ್ನ ಜೀವಿತವನ್ನು ದೇವರಲ್ಲಿ ಕಟ್ಟಿಕೊಳ್ಳಲು ಪ್ರಾರಂಭಿಸಿದನು. ಬಲಹೀನತೆಯ ಮಧ್ಯದಲ್ಲಿಯು ಯೇಸುವನ್ನು ಹಿಂಬಾಲಿಸಿದ್ದರ ನಿಮಿತ್ತ ಯೇಸುವಿನ ಮೂವರು ಆಪ್ತ ಶಿಷ್ಯರಲ್ಲಿ ಇವನೂ ಸಹ ಒಬ್ಬನಾಗಿದ್ದನು.

**ಪೇತ್ರನು ಯೇಸುವನ್ನು ಅಲ್ಲಗಳೆದದ್ದು**

ಯೇಸುವನ್ನು ಹಿಡಿದುಕೊಂಡು ಮಹಾಯಾಜಕನಾದ ಕಾಯಫನ ಬಳಿಗೆ ತಗೆದುಕೊಂಡು ಹೋದರು. ಅಲ್ಲಿ ಶಾಸ್ತ್ರಿಗಳು ಹಿರಿಯರು ಕೂಡಿಬಂದಿದ್ದರು. ಪೇತ್ರನಾದರು ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಸಭ ಅಂಗಳದ ತನಕ ಬಂದು ಒಳಗೆ ಹೊಕ್ಕು ಆತನ ಗತಿ ಏನಾಗುವದೊ ನೋಡಬೇಕೆಂದು ಒಲೆಕಾರರ ಸಂಗಡ ಕೂತು ಕೊಂಡನು, ಆಗ ಯೇಸುವಿನ ಮೇಲೆ ಸುಳ್ಳು ಸಾಕ್ಷಿಯನ್ನು ಹೇಳಿಸಿ, ಆತನ ಮುಖದಮೇಲೆ ಉಗುಳಿ, ಗುದ್ದಿದರು, ಕೆಲವರು ಆತನ ಕೆನ್ನೆಗೆ ಹೊಡೆದರು. ಇದನ್ನು ನೋಡುತ್ತಾ ಅಂಗಳದಲ್ಲಿ ಕೂತಿದ್ದನು.

ಅಲ್ಲಿ ಒಬ್ಬ ದಾಸಿಯು ಅವನ ಬಳಿಗೆ ಬಂದು –ನೀನು ಸಹ ಯೇಸುವಿನ ಕೂಡ ಇದ್ದವನು ಅನ್ನಲು, ಅವನು ಅಲ್ಲ, ನೀನು ಏನನ್ನುತ್ತಿಯೋ ನನಗೆ ಗೊತ್ತಿಲ್ಲ ಎಂದು ಎಲ್ಲರ ಮುಂದೆ ಹೇಳಿದನು. ಅವನು ಬಾಗಿಲಕಡೆಗೆ ಹೋರಟು ಹೋದಗಾ ಮತ್ತೊ್ತೀಬ್ಬಳು ಅವನ್ನನ್ನು ಕಂಡು ಅಲ್ಲಿರುವವರಿಗೆ– ಇವನು ನಜರೇತಿನ ಯೇಸುವಿನ ಕೊಡ ಇದ್ದವನು ಎಂದು ಹೇಳಿದಳು. ಅವನು ತಿರುಗಿ– ಅಲ್ಲ, ಅಮನುಷ್ಯನನ್ನು ನಾ ಅರಿಯೆ ಎಂದು ಆಣೆ ಇಟ್ಟು ಹೇಳಿದನು. ಸ್ವಲ್ಪ ಹೊತ್ತಿನಮೇಲೆ ಅಲ್ಲಿ ನಿಂತವರು ಮುಂದೆಬಂದು ಪೇತ್ರನಿಗೆ– ನಿಶ್ಚಯವಾಗಿ ನೀನು ಸಹ ಅವರಲ್ಲಿ ಒಬ್ಬನು, ನಿನ್ನ ಭಾಷೆಯೆ ನಿನ್ನನ್ನು ತೋರಿಸಿಕೊಡುತ್ತದೆ ಎಂದು ಹೇಳಲಾಗಿ, ಅವನು ಆ ಮನುಷ್ಯನನ್ನು ನಾ ಅರಿಯನು ಎಂದು ಹೇಳಿ ಶಾಪ ಹಾಕುವದಕ್ಕು,ಆಣೆ ಇಡುವುದಕ್ಕು ಪ್ರಾರಂಭಿಸಿದನು. ಕೊಡಲೆ ಕೋಳಿ ಕೂಗಿತು, ಆಗ ಪೇತ್ರನು–ಕೋಳಿ ಕೂಗುವುದಕಂತ ಮುಂಚೆ ಮೂರುಸಾರಿ ನನ್ನ ವಿಷಯದಲ್ಲಿ ಅವನನ್ನು ಅರಿಯೆನೆಂಬುದಾಗಿ ಹೇಳುವಿ ಎಂದು ಯೇಸು ಹೇಳಿದಮಾತನ್ನು ನೆನಸಿ ಹೊರಗೆ ಹೋಗಿ ಬಹು ವ್ಯತೆಪಟ್ಟು ಅತ್ತನು (ಮತ್ತಾಯ 26:57–75).

ಅತೀ ದೊಡ್ಡ ಆತ್ಮೀಕ ಸೋಲಿನಿಂದ ದೇವರು ನಮ್ಮನ್ನು ಎಬ್ಬಿಸ ಬಲ್ಲನು ಎಂಬುದಕ್ಕೆ ಈ ಕೆಳಗೆ ಇರುವ ಪೇತ್ರನ ಸೇವೆಯ ಸಾಕ್ಷಿ.

**ಪೇತ್ರನ ಸೇವೆ**

ಪಂಚಶತ್ತಾಮ ಹಬ್ಬದದಿನದಂದು ಅಪೊಸ್ತರೆಲ್ಲರು ಏಕಮನಸ್ಸಿನಿಂದ ಒಂದೆಮನಸ್ಸಿನಿಂದ ಸೇರಿದ್ದರು ಆಗ ಅವರಮೇಲೆ ಪವಿತ್ರಾತ್ಮನ ಶಕ್ತಿಯು ಇಳಿದು ಬಂದಿದ್ದರಿಂದ ಅವರೆಲ್ಲರು ಅನ್ಯಭಾಷೆಗಳಲ್ಲಿ ಮಾತನಾಡಲು ಪ್ರಾರಂಭಿಸಿದರು ಆದರೆ ಸುತ್ತ-ಮುತ್ತಲಿನ ಜನರು ಇವರು ಮಾತನಾಡುವ ಸಪ್ಪಳವನ್ನು ಕೇಳಿ ಗುಂಪು ಗುಂಪಾಗಿ ಕೂಡಿಬಂದು ಇವರು ಕುಡಿದು ಮತ್ತರಾಗಿದ್ದರೆಂದು ಹಾಸ್ಯಮಾಡಿದರು. ಆಗ ಪೇತ್ರನು 11 ಮಂದಿ ಅಪೋಸ್ತಲರೊಂದಿಗೆ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಬೋಧಿಸಲು ಪ್ರಾರಂಭಿಸಿದನು (ಅ.ಕೃ. 2:14-41). ಸೂಮಾರು 3000 ಜನರು ಪೇತ್ರನ ಸಂದೇಶವನ್ನು ಸ್ವಾಗತಿಸಿ ದೀಕ್ಷಾಸ್ನಾನ ಮಾಡಿಸಿಕೊಂಡರು.

- ಪೇತ್ರನು ಹುಟ್ಟು ಕುಂಟನನ್ನು ಗುಣಪಡಿಸಿದ್ದು: (ಅ.ಕೃ. 3:1-11).
- ಪೇತ್ರನು ಬೀದಿಗಳಲ್ಲಿ ಹಾದು ಹೋಗುತ್ತಿದ್ದಾಗ ಅವನ ನೆರಳು ಕೆಲವರ ಮೇಲೆ ಬೀಳಲೆಂದು ಜನರು ತಮ್ಮಲ್ಲಿ ಅಸ್ವಸ್ಥತೆಯಲ್ಲಿದ್ದವರನ್ನು ತಂದು ಬೀದಿಗಳಲ್ಲಿ ಮಲಗಿಸುತ್ತಿದ್ದರು, ಬಂದವರೇಲ್ಲರು ಸ್ವಸ್ಥರಾಗುತ್ತಿದ್ದರು.
- ಸತ್ತುಹೋಗಿದ್ದ ತಬೀಥಾಳನ್ನು ಎಬ್ಬಿಸಿದ್ದು (ಅ. ಕೃ.9:10-43).
- ಪೇತ್ರನು ಒಂದು ಪೇತ್ರ ಮತ್ತು ಎರಡು ಪೇತ್ರ ಪತ್ರಿಕೆಯನ್ನು ಬರೆದನು.

**ಪ್ರಶ್ನೆಗಳು**

1. ಪೇತ್ರನು ಯಾವ ಪ್ರಂತ್ಯದಲ್ಲಿ ಜೀವಿಸುತ್ತಿದ್ದನು?
2. ಪೇತ್ರನ ಮೋದಲನೇ ಹೆಸರೇನು? ಮತ್ತು ಅವನ ಕೆಲಸವೇನು?
3. ಪೇತ್ರನ ಪ್ರಸಂಗದಿಂದ ಸುಮಾರು ಎಷ್ಟು ಜನರು ರಕ್ಷಣೆ ಹೊಂದಿದರು?
4. ಪೇತ್ರನು ಎಷ್ಟು ಸಾರಿ ಯೇಸುವನ್ನು ಅಲ್ಲಗಳೆದನು?

ಪೇತ್ರನ ಕುರಿತಾಗಿ ಅಪೋಸ್ತಲರ ಕೃತ್ಯಗಳಲ್ಲಿ, ಗಲಾತ್ಯ ಪತ್ರಿಕೆಯಲ್ಲಿ ಹಾಗು ಸುವಾರ್ತೆಗಳಲ್ಲಿ ಉಲ್ಲೇಖಿಸಲಾಗಿದೆ.

# ಮಾರ್ಥಳು

ಮಾರ್ಥಳು ಅತಿಥಿ ಸತ್ಕಾರ ಮಾಡುವಂತ ಮಹಿಳೆ. ಈ ಮಾರ್ಥಳಿಗೆ ಮರಿಯಳು ಎಂಬ ಒಬ್ಬ ತಂಗಿ ಮತ್ತು ಲಾಜರನು ಎಂಬ ತಮ್ಮನಿದ್ದನು. ಇವರು ಯೆರುಸಲೇಮಿಗೆ ಸಮೀಪವಾದ ಭೇಥಾನ್ಯ ಎಂಬ ಊರಿನಲ್ಲಿ ಜೀವಿಸುತ್ತಿದ್ದರು. ಈ ಒಂದು ಚಿಕ್ಕ ಕುಟುಂಬವು ಯೇಸು ಪ್ರೀತಿಸಿದ ಕುಟುಂಬವಾಗಿತ್ತು.

ಒಂದು ದಿನ ಯೇಸು ಮತ್ತು ಆತನ 12 ಮಂದಿ ಶಿಷ್ಯರು ಹಳ್ಳಿಗಳಿಂದ ಹಳ್ಳಿಗೆ ಸಂಚಾರಮಾಡುತ್ತಾ ಮಾರ್ಥಳ ಊರಿಗೆ ಬಂದರು. ಆಗ ಮಾರ್ಥಳು ತನ್ನ ಮನೆಗೆ ಕರೆದುಕೊಂಡು ಹೊದಳು. ತನ್ನ ತಂಗಿಯಾದ ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತು ಆತನ ವಾಕ್ಯವನ್ನು ಕೇಳುತ್ತಿದ್ದಳು. ಆಗ ಮಾರ್ಥಳು ಬಹಳ ಕೆಲಸವಿದ್ದುದ್ದರಿಂದ ಬೇಸರಗೊಂಡು ಯೇಸುವಿನ ಬಳಿಗೆ ಬಂದು– ಕರ್ತನೇ, ಕೆಲಸ ಮಾಡುವುದಕ್ಕಾಗಿ ನನ್ನ ಸಹೋದರಿಯು ನನ್ನೊಬ್ಬಳನ್ನೆ ಬಿಟ್ಟಿರುವುದು ನಿನಗೆ ಚಿಂತೆ ಇಲ್ಲವೋ? ನನಗೆ ಸಹಾಯ ಮಾಡುವುದಕ್ಕಾಗಿ ಅವಳಿಗೆ ಹೇಳು ಅಂದಳು ಅದಕ್ಕೆ ಯೇಸು– ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯಗಳಿಗಾಗಿ ಚಿಂತಿಸು, ತೊಂದರೆಗೆ ಒಳಗಾಗಿದ್ದಿ ಆದರೆ ಅವಶ್ಯವಾದ್ದು ಒಂದೇ. ನಿನ್ನ ತಂಗಿಯಾದ ಮರಿಯಳು ಆ ಉತ್ತಮ ಭಾಗವನ್ನೇ ಆರಿಸಿಕೊಂಡಿದ್ದಾಳೆ. ಅದು ಆಕೆಯಿಂದ ತೆಗೆಯಲ್ಪಡುವುದಿಲ್ಲ ಎಂದು ಹೇಳಿದಳು.

ಮರಿಯಳು ಯೇಸುವನ್ನು ಮತ್ತು ಆತನ ಶಿಷ್ಯರನ್ನು ಒಳ್ಳೆಯ ರೀತಿಯಿಂದ ಉಪಚರಿಸಬೇಕೆಂಬ ಉದ್ದೇಶದಿಂದ ತನ್ನ ತಂಗಿಯಾದ ಮರಿಯಳನ್ನು ಕರೆದಳು ವಿನಃ ಬೇರೆ ಯಾವ ಉದ್ದೇಶಕ್ಕಾಗಿ ಅಲ್ಲ. ಕೆಲವು ದಿನಗಳಾದ ನಂತರ ತನಗಿದ್ದ ಒಬ್ಬ ಒಬ್ಬ ಪ್ರೀತಿಯ ತಮ್ಮನಾದ ಲಾಜರನು ಮರಣ ಹೊಂದಿ ಸಮಾಧಿಯಲಿಟ್ಟು ನಾಲ್ಕು ದಿನಗಳಾಗಿದ್ದಾಗ ಮಾರ್ಥಳು ಮತ್ತು ಮರಿಯಳು ಬಹಳ ದುಃಖಪಡುತ್ತಿದ್ದುದರ ನಿಮಿತ್ತ ಅನೇಕ ಯೆಹೂದ್ಯರು ಇವರನ್ನು ಸಂತೈಸುವುದಕ್ಕಾಗಿ ಬಂದಾಗ ಯೇಸು ಬರುವ ಸುದ್ದಿಯನ್ನು ಕೇಳಿ ಮಾರ್ಥಳು ಆತನನ್ನು ಎದುರುಗೊಳ್ಳುವುದಕ್ಕಾಗಿ ಹೊದಳು. ಆದರೆ ಮರಿಯಳು ಮನೆಯಲ್ಲಿಯೇ ಇದ್ದುಕೊಂಡಳು. ಮಾರ್ಥಳು ಯೇಸುವಿನ ಬಳಿಗೆ ಬಂದು ಗೋಳಾಡುತ್ತಾ ನಡೆದ ಸಂಗತಿಯನ್ನು ತಿಳಿಸಿದಳು. ನಂತರ ತನ್ನ ಪ್ರೀತಿಯ ತಮ್ಮನನ್ನು ಯೇಸುವಿನ ಮೂಲಕ ಹೊಂದಿಕೊಂಡಳು.

**ಪ್ರಶ್ನೆಗಳು**

1. ಮಾರ್ಥಳ ತಮ್ಮ ಮತ್ತು ತಂಗಿಯ ಹೆಸರೇನು?
2. ಮಾರ್ಥಳ ಕುಟುಂಬ ಯಾವ ಊರಿನಲ್ಲಿ ನೆಲೆಗೊಂಡಿತ್ತು?
3. ಮಾರ್ಥಳು ಯಾವ ವಿಷಯದಲ್ಲಿ ಪ್ರಸಿದ್ಧಿಯಾದ ಗೃಹಿಣಿಯಾಗಿದ್ದಳು?


ಮಾರ್ಥಳ ಕುರಿತಾಗಿ ಲೂಕ 10:38–42; ಯೋಹಾನ 11:17–45 ರಲ್ಲಿ ಉಲ್ಲೇಖಿಸಲಾಗಿದೆ?

# ಮತ್ತಾಯ

ಮತ್ತಾಯನು ಯೇಸು, ಪಿಲಾತನು, ಹೆರೋದನು ಇವರ ಸಮಕಾಲಿನವನು. ಇವನು ಕಪೆರ್ನೌಮ್ ಎಂಬ ಸ್ಥಲದಲ್ಲಿ ಸುಂಕ ವಸೂಲಿ ಮಾಡುತ್ತಾ ಜೀವಿಸುತ್ತಿದ್ದನು. ಇವನು ಲೇವಿಯವನಾಗಿದ್ದನು.

**ಮತ್ತಾಯನ ಕರೆ:**

ಒಂದು ದಿನ ಯೇಸು ಸ್ವಾಮಿಯು ಸಮುದ್ರ ತೀರದಲ್ಲಿ ಸೇರಿಬಂದಂತಹ ಜನರಿಗೆ ಉಪದೇಶಮಾಡಿ ಅಲ್ಲಿಂದ ಹೋಗುತ್ತಿರುವಾಗ ಸುಂಕದ ಕಟ್ಟೆಯಲ್ಲಿ ಕೂತಿದ್ದ ಅಲ್ಫಾಯನ ಮಗನಾದ ಲೇವಿಯನ್ನು ನೋಡಿ– ನನ್ನನ್ನು ಹಿಂಬಾಲಿಸು ಎಂದು ಹೇಳಿದಾಗ ಅವನು ಎದ್ದು ಮರುಮಾತನಾಡದೆ ಆತನನ್ನು ಹಿಂಬಾಲಿಸಿದನು. ಮತ್ತಾಯನು ಪರಿಸಾಯರಾದ ಧರ್ಮಶಾಸ್ತ್ರಿಗಳಿಂದ ತಿರಸ್ಕರಿಸಲ್ಪಟ್ಟವನಾಗಿದ್ದನು. ಯೇಸು ಕರೆದಾಕ್ಷಣ ಎಲ್ಲವನ್ನು ಬಿಟ್ಟು ಕೂಡಲೇ ಪ್ರತಿಕ್ರಿಯೆ ತೋರಿದನು. ಆದರಿಂದ ಯೇಸುವಿನ 12 ಮಂದಿ ಶಿಷ್ಯರಲ್ಲಿ ಒಬ್ಬನಾದನು.



**ಮತ್ತಾಯನ ಸೇವೆ;**

ಇನ್ನುಳಿದ ಶಿಷ್ಯರೊಂದಿಗೆ ಮತ್ತು ವಿಶ್ವಾಸಿಗಳೊಂದಿಗೆ ಸೇರಿ ಎಡಬಿಡದೆ ಪ್ರಾರ್ಥನೆ ವಿಜ್ಞಾಪನೆಗಳನ್ನು ಅನೇಕರನ್ನು ದೇವರ ಕಡೆಗೆ ನಡೆಸುವವನಾಗಿದ್ದನು. ಇವನು ಮತ್ತಾಯನು ಬರೆದ ಸುವಾರ್ತೆಯ ಗ್ರಂಥ ಕರ್ತನಾಗಿದ್ದಾನೆ. ತನ್ನ ಈ ಗ್ರಂಥದಲ್ಲಿ – ದೇವರು ಕಳುಹಿಸಿದ ಯೆಹೂದ್ಯರ ಅರಸನು ಹಾಗೂ ಜಗತ್ ರಕ್ಷಕನೆಂದು ಮತ್ತಾಯನು ಒತ್ತಿ ಹೇಳುತ್ತಾನೆ. ಈ ಗ್ರಂಥವನ್ನು ಯೆಹೂದ್ಯ ಓದುಗರನ್ನು ಉದ್ದೇಶಿಸಿ ಬರೆದನು.

**ಪ್ರಶ್ನೆಗಳು**

1. ಮತ್ತಾಯನ ಕೆಲಸವೇನಾಗಿತ್ತು?
2. ಇವನು ವಾಸಿಸುತ್ತಿದ್ದ ಸ್ಥಳ ಯಾವುದು?
3. ಮತ್ತಾಯನು ಯಾರ ಸಮಕಾಲಿನವನಾಗಿದ್ದನು?

ಮತ್ತಾಯನ ಕುರಿತಾಗಿ ಸುವಾರ್ತೆಗಳಲ್ಲಿಯೂ ಅ.ಕೃ 1:13 ರಲ್ಲಿ ಉಲ್ಲೇಖಿಸಲಾಗಿದೆ,

# ಮಗ್ದಲದ ಮರಿಯಳು

ಯೇಸುವನ್ನು ಹಿಂಭಾಲಿಸುತ್ತಿದ್ದ ಅನೇಕ ಮಹಿಳೆಯರಲ್ಲಿ ಈ ಮಗ್ದಲದ ಮರಿಯಳೊಬ್ಬಳು. ಈ ಮರಿಯಳಿಗೆ ಸರಳವಾದ ನಂಬಿಕೆಯಿತ್ತು. ಇವಳು ಮಗ್ದಲ ಎಂಬ ಸ್ಥಳದಲ್ಲಿ ಜೀವಿಸುವವಳಾಗಿದ್ದಳು.

ಈಕೆಯು 7 ದೆವ್ವಗಳಿಂದ ಹಿಡಿಯಲ್ಪಟ್ಟವಳಾಗಿದ್ದಳು. ಇದರಿಂದಾಗಿ ಬೇಸತ್ತುಹೋಗಿ ನಿರೀಕ್ಷೆಯಿಲ್ಲದೆ ಜೀವಿಸುತ್ತಿದ್ದಳು. ಒಂದು ದಿನ ಯೇಸುಸ್ವಾಮಿಯು ಆ ದೆವ್ವಗಳಿಂದ ಸಂಪೂರ್ಣವಾಗಿ ಬಿಡಿಸಿದನು. ಅಂದಿನಿಂದ ಆಕೆಯು ಯೇಸು ಮತ್ತು ಆತನ ಶಿಷ್ಯರು ಆಕೆಯ ಮನೆಗೆ ಬಂದಾಗೆಲ್ಲಾ ಅವರನ್ನು ಪ್ರೀತಿಯಿಂದ ಉಪಚರಿಸುತ್ತಿದ್ದಳು. ಈಕೆಯು ಯೇಸುವಿನ ಸಹಾಯವನ್ನು ಪಡೆದ ನಂತರ ಸದಾ ಯಾವಾಗಲು ಕೃತಜ್ಞತೆಯುಳ್ಳವಳಾಗಿ ಜೀವಿಸಿದಳು

**ಮರಿಯಳು ಪುನರುತ್ಥಾನವಾದ ಯೇಸುವನ್ನು ಕಂಡದ್ದು**

ಸಬ್ಬತ್ ದಿನ ಕಳೆದ ನಂತರ ಮಗ್ದಲದ ಮರಿಯಳು ಯಾಕೋಬನಾದ ತಾಯಿ ಮರಿಯಳು ಸಲೋಮೆಯಯೇಸುವಿನದೇಹಕ್ಕೆ ಹಚ್ಚುವುದಕ್ಕಾಗಿ ಸುಗಂಧ ದ್ರವ್ಯಗಳನ್ನು ಸುಗಂಧ ದ್ರವ್ಯಗಳನ್ನು ಕೊಂಡುಕೊಂಡು ಬಂದರು ವಾರದ ಮೋದಲನೆ ದಿನ ಮುಂಜಾನೆ ಸುರ್ಯೋದವಾಗಲು ಅವರು ಸಮಾಧಿಯ ಬಳಿಗೆ ಬಂದರು. ಸಮಾಧಿಗೆ ಮುಚ್ಚಿದ ಕಲ್ಲು ಬಹಳ ದೋಡ್ಡದಾಗಿದ್ದರಿಂದ ಅವರು ಸಮಾಧಿಯ ಭಾಗಿಲಿನಿಂದ ಆ ಕಲ್ಲನ್ನು ನಮಗೋಸ್ಕರ ಉರುಳಿಸುವವನು ಯಾರಿದ್ದಾರೆ ಎಂದು ತಮ್ಮ ತಮ್ಮೋಳಗೆ ಮಾತಾಡಿಕೊಳ್ಳುತ್ತಾ ಇರುವಾಗ ಅವರು ತಲೆ ಮೇಲೆತ್ತಿ ನೋಡಿ ಆ ಕಲ್ಲು ಉರುಳಿಸಲ್ಪಟ್ಟಿರುದನ್ನು ಕಂಡರು ಅವರು ಸಮಾಧಿಯೋಳಕ್ಕೆ ಹೋಗಿ ಒಬ್ಬ ದೇವದೂತನನ್ನು ನೋಡಿ ಬೇರಗಾದರು. ಅವನು ಅವರಿಗೆ– ಹೇದರಬೇಡಿರಿ ಶೀಲುಬೆಗೆ ಹಾಕಲ್ಪಟ್ಟಿದ್ದ ನಜರೇತಿನ ಯೇಸವನ್ನು ಹುಡುಕುತ್ತೀರಲ್ಲವೇ ಆತನು ಜೀವಿತನಾಗಿ ಎದ್ದಿದ್ದಾನೆ. ಇಲ್ಲಿ ಇಲ್ಲ. ಆತನನ್ನು ಇಟ್ಟಿದ್ದ ಸ್ಥಳವು ಇದೇ, ನೋಡಿರಿ, ನೀವು ಹೋಗಿ ಆತನ ಶಿಷ್ಯರಿಗೂ ಪೇತ್ರನಿಗೂ –ಆತನು ನಿಮಗೆ ಹೇಳಿದಂತೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ, ಅಲ್ಲಿ ಆತನ್ನನ್ನು ಕಾಣುವಿರಿ ಎಂದು ಹೇಳಿರಿ ಎಂದು ಹೇಳಿದನು. ಅವರು ಭ್ರಮೆ ಹಿಡಿದವರಾಗಿ ನಡುಗುತ್ತಾ ಹೊರಕ್ಕೆ ಬಂದು ಸಮಾಧಿಯ ಬಳಿಯಿಂದ ಓಡಿ ಹೋದರು. ಅವರು ಹೆದರಿಕೊಂಡದರಿಂದ ಯಾರಿಗೂ ಏನೂ ಹೇಳಲಿಲ್ಲ. ನಂತರ ವಾರದ ಮೊದಲನೆಯ ದಿನ ಬೆಳಿಗ್ಗೆ ಯೇಸು ಜೀವಿತನಾಗಿ ಎದ್ದ ಮೇಲೆ ಮಗ್ದಲದ ಮರಿಯಳಿಗೆ ಮೊದಲು ಕಾಣಿಸಿಕೊಂಡನು. ಆಕೆ ಹೋಗಿ ಕಾಣಿಸಿಕೊಂಡದ್ದನ್ನು ಮುಂಚೆ ಆತನ ಜೊತೆಯಲ್ಲಿದ್ದವರಿಗೆ ತಿಳಿಸಿದಳು.

**‘ಪುನರುತ್ಥಾನವಾದ ಕ್ರಿಸ್ತನನ್ನು ಕಂಡ ಪ್ರಥಮ ಸ್ತ್ರೀ”**

**ಪ್ರಶ್ನೆಗಳು:**

1. ಮಗ್ದಲದ ಮರಿಯಳು ವಾಸಿಸುತಿದ್ದ ಊರು ಯಾವುದು?
2. ಯೇಸುವಿನ ದೇಹಕ್ಕೆ ಸುಗಂಧ ದ್ರವ್ಯವನ್ನು ಹಚ್ಚಲು ಬಂದವರಾರು?
3. ಪುನರುತ್ಥಾನವಾದ ಕ್ರಿಸ್ತನನ್ನು ಕಂಡ ಪ್ರಥಮ ಸ್ತ್ರೀ ಯಾರು?

# ಸ್ತೆಫನ


**ಸ್ತೆಫನನು ಜೀವಿಸುತ್ತಿದ್ದ ಸ್ಥಳ:** ಯೆರುಸಲೇಮ್

**ಈತನ ಉದ್ಯೋಗ:** ಸಭೆಯ ಸೇವಕ

ಕ್ರೈಸ್ತರಲ್ಲಿ ಮೊದಲು ರಕ್ತಸಾಕ್ಷಿಯಾಗಿ ಸತ್ತವನು ಸ್ತೆಫನನು. ಇತನು ಗ್ರೀಕ್ ಭಾಷೆಯಲ್ಲಿ ಮಾತನಾಡುತ್ತಿದ್ದ ಒಬ್ಬ ಯೆಹೂಧ್ಯನು. ಆ ಸಮಯದಲ್ಲಿ ಯೆರುಸಲೇಮಿನಲ್ಲಿ ಗ್ರೀಕ್ ಬಾಷೆ ಮಾತನಾಡುತ್ತಿದ್ದ ಅನೇಕ ಕ್ರೈಸ್ತರಿದ್ದರು.

**ಸ್ತೆಫನನ ಸೇವೆ:**

ಅಪೊಸ್ತಲರ ಕೃತ್ಯಗಳು 6:5–8:12 ರವರೆಗಿರುವ ವಚನಗಳಲ್ಲಿ ಸ್ತೆಫನನ ಕುರಿತಾಗಿ ಬರೆದಿರುವುದನ್ನು ಕಾಣುತ್ತೇವೆ. ಆ ವಚನಗಳಲ್ಲಿ ಇವನ ಮನಃಪರಿವರ್ತನೆಯ ವಿಷಯವಾಗಲಿ, ಕ್ರೈಸ್ತನಾದುದರ ಬಗ್ಗೆಯಾಗಲಿ ವಿವರವಾಗಿ ಬರೆದಿರುವುದಿಲ್ಲ ಅಥಾವ ಕಾಣಲಿಕ್ಕಾಗುವುದಿಲ್ಲ. ಇತನು 70 ಮಂದಿ ಶಿಷ್ಯರಲ್ಲಿ ಒಬ್ಬನಾಗಿರಬಹುದು. ಅಪೋಲಸ್ತರು ಸಾರಿದ ಸುವಾರ್ತೆಯನ್ನು ಕೇಳಿ ಕ್ರಿಸ್ತನನ್ನು ಅಂಗಿಕರಿಸಿಕೊಂಡವರಲ್ಲಿ ಒಬ್ಬನಾಗಿರಬಹುದು. ಸ್ತೆಫನನು ಯೆರೊಸಲೇಮಿನ ಸಭೆಯಲ್ಲಿದ್ದ ಜನರಲ್ಲಿ ಐಶ್ವರ್ಯವಂತನಾಗಿದ್ದನೆಂದು ನಾವು ತಿಳಿಯುತ್ತೆವೆ. ಶಿಷ್ಯರ ಮಂಡಲಿಯಲ್ಲಿ ಆರಿಸಲ್ಪಟ್ಟ ಏಳು ಮಂದಿಯಲ್ಲಿ ಇತನು ಒಬ್ಬನಾಗಿದ್ದನು (ಅ.ಕೃ. 6:5).



ಗ್ರೀಕ್ ವಿಧವೆಯರನ್ನು ಉಪಚರಿಸುವುದಕ್ಕಾಗಿ ಆರಿಸಲ್ಪಟ್ಟ ಶಿಷ್ಯರಲ್ಲಿ ಒಬ್ಬನಾಗಿದ್ದನು. ಸ್ತೆಪನನು ನಂಬಿಕೆಯಲ್ಲಿಯೂ ಬಲದಲ್ಲಿಯು ತುಂಬಲ್ಪಟ್ಟವನಾಗಿದ್ದನು, ಪರಿಶುದ್ಧಾತ್ಮನ ಅಭಿಷೇಕವನ್ನು ಹೊಂದಿದವನು ಆಗಿದ್ದನು. ವಿಧೆವೆಯರನ್ನು ಉಪಚರಿಸುವ ಕಾರ್ಯವನ್ನಷ್ಟೇ ಮಾಡುವವನಾಗಿರದೆ ಆತ್ಮನಿಂದ ತುಂಬಲ್ಪಟ್ಟು ಸುವಾರ್ತೆಯನ್ನು ಸಾರುತ್ತಿದ್ದನು (ಅ.ಕೃ 6:10). ಅದ್ಬುತಕಾರ್ಯಗಳನ್ನು, ಸೂಚಕ ಕಾರ್ಯಗಳನ್ನು ಮಾಡಿದನು.

**ಸ್ತೆಫನನನ್ನು ಸೆರೆಮನೆಗೆ ಹಾಕಲ್ಪಟ್ಟದ್ದು**

ಗ್ರೀಕ್ ಭಾಷೆಮಾತನಾಡುವ ಯೆಹೂದ್ಯರ ಆಲಯಗಳಲ್ಲಿ ಸ್ತೆಫನನ ಕುರಿತಾಗಿ ಸಾಕ್ಷಿ ಹೇಳುತ್ತಿದ್ದನು. ಇದರಿಂದಾಗಿ ಕೆಲವರು ತರ್ಕಮಾಡುತ್ತಿದ್ದರು. ಇವನ ಮಾತಿನಲ್ಲಿ ಕಂಡುಬಂದ ಜ್ಞಾನವನ್ನು ಪವಿತ್ರಾತ್ಮನ ಶಕ್ತಿಯನ್ನು ಎದುರಿಸಲಾರದೆ ಹೋದರು. ಇದರಿಂದ ಉದ್ರಿಕ್ತಗೊಂಡ ಕೆಲವು ಯೆಹೂದ್ಯರು ಸುಳ್ಳು ಸಾಕ್ಷಿಗಳನ್ನು ಕರೆತಂದು ನಿಲ್ಲಿಸಿದರು. ಅವರ ಮೂಲಕ ಈ ಮನುಷ್ಯನು ಈ ಪರಿಶುದ್ದವಾದ ಸ್ತಳಕ್ಕೆ ವಿರೋದವಾಗಿಯೂ, ಧರ್ಮಶಾಸ್ತ್ರಕ್ಕೆ ವಿರೋದವಾಗಿಯೂ ಮಾತನಾಡುತ್ತಾನೆ ಎಂಬುದಾಗಿ ತಪ್ಪು ಹೊರಿಸಿದರು. ದೇವದೂಷಣೆ ಮಾಡುವವರನ್ನು ಮರಣದಂಡನೆಗೆ ಒಪ್ಪಿಸಬೇಕಾದುದ್ದರಿಂದ (ಯಾಜಕಕಾಂಡ 26:65) ಸ್ತೆಫನನನ್ನು ಕೊಲೆ ಮಾಡಲು ಸಂಚುಮಾಡಿದರು. ಕ್ರಿಸ್ತನ ಮೇಲೂ ಇದೇ ದೂಷಣೆ ಮಾಡಿ ತಪ್ಪು ಹೊರಿಸಿದರು (ಮತ್ತಾಯ 26:65). ಕ್ರಿಸ್ತನಿಗೆ ವಿರೋಧವಾಗಿಯು ಸುಳ್ಳುಸಾಕ್ಷಿಯನ್ನು ನುಡಿದರು(ಮಾರ್ಕ 14:58).

ಕ್ರೈಸ್ತರು ಅಂದರೆ "ಕ್ರಿಸ್ತನ ಹಿಂಬಾಲಕರು" ಮೋಶೆ ನಮಗೆ ನೇಮಿಸಿದ ಆಚಾರಗಳನ್ನು ಬೇರೆ ಮಾಡುವರೆಂದಾಗಿ ಯೆಹೂದ್ಯರು ಇವರ ಮೇಲೆ ತಪ್ಪು ಹೊರಿಸಿದರು. ಹೀಗೆ ಸುಳ್ಳು ಸಾಕ್ಷಿ ಹೇಳುವಾಗ ಹಿರೀ ಸಭೆಯಲ್ಲಿ ಕೂತಿದ್ದವರೇಲ್ಲರೂ ಸ್ತೆಫನನನ್ನು ದೃಷ್ಟಿಸಿ ನೋಡಿದಾಗ ಅವನ ಮುಖವು ದೇವದೂತನ ಮುಖದಂತೆ ಇರುವುದನ್ನು ಕಂಡರು (ಅಪೋ 6:15) ಆದಾಗ್ಯೂ ಅವರು ತಮ್ಮ ಹೃದಯಗಳನ್ನು ಕಠಿಣಪಡಿಸಿಕೊಂಡರು.

**ರಕ್ತ ಸಾಕ್ಷಿಯಾದದ್ದು**

ಸ್ತೆಫನನು ಹಿರೀ ಸಭೆಯ ಮುಂದೆ ಧೈರ್ಯವಾಗಿ ಕ್ರಿಸ್ತನು ಯಾರು? ಈ ಲೋಕಕ್ಕೆ ಯಾಕೆ ಬಂದನು? ಮತ್ತು ಏನು ಮಾಡಿದನು ಎಂಬುದಾಗಿ ತಿಳಿಸಿದನು (ಅ.ಕೃ.7:51–53). ಸ್ತೆಫನನು ಹೇಳಿದ ಈ ಮಾತುಗಳನ್ನು ಕೇಳಿ ಅವರು ರೌದ್ರ ಮನಸ್ಸುಳ್ಳವರಾಗಿ ಅವನ ಮೇಲೆ ಹಲ್ಲು ಕಡಿದರು (ಅ.ಕೃ.7:54). ಇದನ್ನು ನೋಡಿದಾಗಲು ಕೂಡ ಸ್ತೆಫನನು ಭಯಪಡಲೇ ಇಲ್ಲ. ತಾನು ನಂಬಿದ್ದ ಕ್ರಿಸ್ತನನ್ನು ನೋಡಿ ಈ ಮಾತುಗಳನ್ನು ಅರಿಕೆ ಮಾಡಿದನು. "ಆಗೋ ಆಕಾಶವು ತೆರೆದಿರುವುದನ್ನು ಮನುಷ್ಯ ಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವುದನ್ನು ಕಾಣುತ್ತೇನೆ" ಎಂದು ಹೇಳಿದನು(ಅ.ಪೊ.7:56). ಕ್ರಿಸ್ತನು ಸ್ತೆಫನನನ್ನು ಕೈಬಿಡಲಿಲ್ಲ. ಆ ಸಮಯದಲ್ಲಿ ಸ್ತೆಫನನಿಗಾಗಿ ವಿಜ್ಞಾಪನೆ ಮಾಡಲು ತಂದೆಯಾದ ದೇವರ ಬಲಗಡೆಯಲ್ಲಿ ನಿಂತಿದ್ದನು.

ಇದನ್ನು ಕೇಳಿದ ಯೆಹೂದ್ಯ ಮುಖಂಡರ ಕೋಪವು ಭುಗಿಲೆದ್ದಿತು. ಎಲ್ಲರೂ ಒಟ್ಟಾಗಿ ಅವನ ಮೇಲೆ ಬಿದ್ದು ಊರ ಹೊರಕ್ಕೆ ನೂಕಿಕೊಂಡು ಹೋಗಿ ಕೊಲ್ಲುವುದಕ್ಕೆ ಕಲ್ಲೆಸೆದರು. ನಿಶ್ಚಯವಾಗಿಯೂ ಸಾಯುತ್ತೇನೆ ಎಂಬ ಅರಿವು ಸ್ತೆಫನನಿಗಿದ್ದರೂ ಕೂಡ ಅವನು ನಂಬಿಕೆಯಲ್ಲಿ ಬಿದ್ದು ಹೋಗಲಿಲ್ಲ. "ಕರ್ತನಾಗಿರುವ ಯೇಸುವೇ ನನ್ನಾತ್ಮವನ್ನು ಸೇರಿಸಿಕೋ" ಎಂದು ಪ್ರಾರ್ಥಿಸಿದನು (ಅ.ಕೃ. 7:59). ಮರಣದ ಕೊನೆಗಳಿಗೆಯಲ್ಲಿಯೂ ಅವರಿಗಾಗಿ ಪ್ರಾರ್ಥಿಸಿದನು. ಅವನ ಬಾಯಲ್ಲಿ ಯೇಸುವಿನ ಮಾತುಗಳೇ ತುಂಬಿದ್ದವು. ಕರ್ತನೇ, ಈ ಪಾಪವನ್ನು ಅವರ ಮೇಲೆ ಹೊರಿಸಬೇಡ ಎಂದು ಹೇಳುತ್ತಾ ಮರಣಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು.

**ಪ್ರಶ್ನೆಗಳು**

1. ಸ್ತೆಫನನು ಯಾವ ಸ್ಥಳದಲ್ಲಿ ಜೀವಿಸುತ್ತಿದ್ದನು?
2. ಸ್ತೆಫನನ ಕೆಲಸ ಯಾವುದಾಗಿತ್ತು?
3. ಸ್ತೆಫನನು ಯಾವ ಭಾಷೆಯನ್ನು ಮಾತನಾಡುವವನಾಗಿದ್ದನು?
4. ಯೆಹೂದ್ಯ ಜನರು ಸ್ತೆಫನನ್ನು ಯಾರ ಬಳಿಗೆ ಕರೆತಂದು ಸುಳ್ಳು ಅಪಾದನೆ ಹೊರಿಸಿದರು?
5. ಯೆಹೂದ್ಯ ಜನರಿಗೆ ಸ್ತೆಫನನ ಮುಖವು ಯಾರ ಮುಖದಂತೆ ಕಾಣಿಸುತ್ತಿತ್ತು?

**ಸ್ತೆಫನನ ಜೀವಿತದಿಂದ ಕಲಿಯುವಂತ ಪಾಠಗಳು**

- ಅನುದಿನದ ಜೀವಿತದಲ್ಲಿ ಸಂಬಿಗಸ್ತರಾಗಿರುವವರನ್ನು ದೇವರು ಬಲವಾಗಿ ಉಪಯೋಗಿಸಿಕೊಳ್ಳುತ್ತಾನೆ.
- ನಾವು ಕ್ರಿಸ್ತನಿಗಾಗಿ ನಮ್ಮ ಜೀವಿತವನ್ನು ಮುಡುಪಾಗಿಡಬೇಕು.
- ಪ್ರಾಯೋಗಿಕ ಕೆಲಸವಿದ್ದರೂ, ಆತ್ಮೀಕ ಯೋಗ್ಯತೆಗಳಿರಬೇಕು.
- ದೇವರು ಕೊಟ್ಟ ಕೆಲಸದಲ್ಲಿ ಪೂರ್ಣ ನಂಬಿಗಸ್ತರಾಗಿರಬೇಕು.

ಸ್ತೆಫನನ ಕುರಿತಾಗಿ ಅ.ಕೃ. 6:3–8:2 ರ ವರೆಗೆ ತಿಳಿಸಲ್ಪಟ್ಟಿದೆ.

***"ಹೊಲವೆಂಬ ಈ ಲೋಕದಲ್ಲಿ***
***ರಕ್ತವೆಂಬ ಬೀಜ ಚೆಲ್ಲಿ***
***ಫಲವೆಂಬ ಸಾವಿರಾರು ಆತ್ಮಗಳನ್ನು***
***ಆದಾಯಮಾಡಿಕೊಳ್ಳಲಿಕ್ಕೆ ಆಧಾರನಾದ,***
***ದೇವಭಕ್ತನಾದ ಸ್ತೆಫನನಿಗೆ ನಾನು ಯೇಸುವಿನ***
***ಹೆಸರಿನಲ್ಲಿ ಅನಂತ ಅನಂತ ವಂದನೆಗಳನ್ನು ಸಲ್ಲಿಸುತ್ತೇನೆ"***

## ಬಾರ್ನಬನು

ಬಾರ್ನಬನು ಯೆರುಸಲೇಮ್, ಕುಪ್ರ, ಅಂತಿಯೋಕ್ಯ ಈ ಸ್ಥಳಗಳಲ್ಲಿ ಜೀವಿಸಿದವನು. ಕಾರಣ ಇತನೊಬ್ಬ ಸುವಾರ್ತಾ ಪ್ರಯಾಣಿಕನಾಗಿದ್ದನು. ಬಾರ್ನಬನು ಒಳ್ಳೆಯವನು ಪವಿತ್ರಾತ್ಮಭರಿತನು, ನಂಬಿಕೆಯಿಂದ ತುಂಬಿದವನೂ ಆಗಿದ್ದನು (ಅ.ಕೃ. 11:24,25).


ಬಾರ್ನಬನ ಗುಣಾತಿಶಯಗಳನ್ನು ಆತನ ಸೇವೆಯ ಫಲದ ಕುರಿತಾಗಿ ಚುಟುಕಾಗಿ ವಿವರಿಸುವ ವಾಕ್ಯವಿದು. ಅಪೊಸ್ತಲನಾದ ಪೌಲನಿಗೆ ಸಹಾಯಕನಾಗಿ ಹೋದಾಗಲೂ ಕೂಡ ಬಾರ್ನಬನು ಸಹ ಸೇವೆಯನ್ನು ಶಕ್ತಿಯುತನಾಗಿ ಮಾಡಿದನೆಂದು ಈ ವಾಕ್ಯದಿಂದ ತಿಳಿಯಬಹುದು. ಅ.ಕೃ. 4:36,37 ರ ವಚನಗಳು ಬಾರ್ನಬನ ಪರಿಚಯವನ್ನು ಮಾಡುತ್ತದೆ. ಕುಪ್ರದ್ವೀಪದಲ್ಲಿ ಹುಟ್ಟಿದ ಲೇವಿಯನಾಗಿದ್ದ ಯೋಸೇಫನೆಂಬ ಅವನಿಗೆ ಅಪೊಸ್ತಲರು, ಬಾರ್ನಬ ಅಂದರೆ ಧೈರ್ಯದಾಯಕ ಎಂದು ಹೆಸರಿಟ್ಟಿದ್ದರು. ಅವನು ತನಗಿದ್ದ ಭೂಮಿಯನ್ನು ಮಾರಿ ಬಂದ ಹಣವನ್ನು ಅಪೊಸ್ತಲರ ಪಾದಗಳ ಬಳಿಯಲ್ಲಿಟ್ಟನು.

ಬಾರ್ನಬನ ಉದಾರ ಗುಣವನ್ನು ಕೂಡ ಇದು ತಿಳಿಸುತ್ತದೆ. ಬಾರ್ನಬನ ಮೊದಲಿನ ಹೆಸರು ಯೋಸೇಫ ಸೇವೆಯ ಭಾರದಿಂದ ಕುಗ್ಗಿ ಹೋಗಿರುವಾಗ ಅವರನ್ನು ಅಂದರೆ ಅಪೋಸ್ತಲರನ್ನು ಆಧರಿಸಿದಾಗ ಇವನು ಆ ಹೆಸರನ್ನು ಪಡೆದನು. ಮುಂದೆ ಅವನ ಸೇವೆಯನ್ನು ನೊಡುವಾಗ ಅನಾಥರು, ಬಡವರು ಆದ ಜನರಿಗೆ ಸಹಾಯ ಮಾಡಿ ಸಂತೈಸುವುದರಲ್ಲಿ ಇವನು ನಿರತನಾಗಿದ್ದನೆಂದು ತಿಳೀಯಬಹುದು. ಬರಗಾ ಲದಿಂದ ಕಷ್ಟಪಡುತ್ತಿರುವವರಿಗಾಗಿ ಹಣ ಸಂಗ್ರಹಿಸಿ ಸಹಾಯ ಮಾಡುತ್ತಿದ್ದನೆಂದು (ಅ. ಕೃ. 11:29) ತಿಳಿಯಬಹುದು.

ತಾಳ್ಮೆಯುಳ್ಳವನು ಸಂದೇಹ ಗುಣವಿಲ್ಲದ ಕೃಪೆಯಿಂದ ತುಂಬಿದ ಮನುಷ್ಯನಾಗಿದ್ದನು. ಇವನು ಹುಟ್ಟಿದಿನದಿಂದಲೇ ಕ್ಷಮಿಸುವ ಗುಣವುಳ್ಳವನು. ಇತರರ ತಪ್ಪುಗಳನ್ನು ಹುಡುಕುವುದಕ್ಕಿಂತಲೂ ಅವರಲ್ಲಿದ್ದ ಜ್ಞಾನಕ್ಕೆ ತಿಳಿದವನಾಗಿ ಇನ್ನೂ ಉತ್ತಮರನ್ನಾಗಿ ಮಾಡುತ್ತಿದ್ದನು. 12 ಮಂದಿ ಶಿಷ್ಯರಲ್ಲಿ ಒಬ್ಬನಾಗಿರದಿದ್ದರು ಹಲವು ನಗರಗಳಲ್ಲಿ ಸುವಾರ್ತೆಯು ಬೇರೂರುವುದಕ್ಕೆ ಇವನ ಸೇವೆಯು ಸಹಾಯವಾಯಿತು. ಇದು ಆತನಲ್ಲಿದ್ದ ವಿಶ್ವಾಸ ದಾಯಾದಿಯಾಗಿದ್ದನೆಂದು ಹೇಳುತ್ತಾರೆ(ಕೊಲೊ: 4:10). ಯೆರೂಸಲೇಮಿನಲ್ಲಿದ್ದ ಮಾರ್ಕನ ಮನೆಯಲ್ಲಿ ಅಪೋಸ್ತಲರು ಸೇರಿ ಪ್ರಾರ್ಥಿಸುತ್ತಿದ್ದರು(ಅ.ಕೃ. 12:12). ಇದರಿಂದ ಬಾರ್ನಬನಿಗೆ ಎಲ್ಲರೊಂದಿಗೆ ಅನ್ಯೋನ್ಯತೆ ಪಡೆಯುವ ಅವಕಾಶವಿತ್ತು. ಯೆರೂಸಲೇಮಿನ ಸಭೆಯಲ್ಲಿ ಬಾರ್ನಬನು ಒಬ್ಬ ಮುಖ್ಯ ಸೇವಕನಾಗಿ ಪ್ರಕಾಶಿಸಿದನು.

ಕ್ರಿಸ್ತನಿಂದ ಕರೆಯಲ್ಪಟ್ಟ ಸೌಲನು ದೇವರ ಕಡೆಗೆ ತಿರುಗಿಕೊಂಡಾಗ ಸೌಲನನ್ನು ಅಪೋಸ್ತಲರಿಗೆ ಪರಿಚಯಪಡಿಸಿದವನೂ ಕೂಡ ಬಾರ್ನಬನೇ (ಅ.ಕೃ. 9:22). ಕ್ರಿಸ್ತನು ಸೌಲನನ್ನು ಕರೆದದ್ದಕ್ಕೂ ಸೌಲನಲ್ಲಿದ್ದ ಸೇವಾಕಾಂಕ್ಷೆಗೂ ಬಾರ್ನಬನು ಸಾಕ್ಷಿಯಾಗಿದ್ದನು. ಆತನ ಮಾತುಗಳು ಯೆರೂಸಲೇಮಿನ ಸಭೆಯವರಿಂದ ಅಂಗಿಕರಿಸಲ್ಪಟ್ಟಿತು. ಸೌಲನು ಪೌಲನಾಗಿ ಸೇವೆ ಮಾಡುವುದಕ್ಕೆ ಬಾರ್ನಬನು ಸಹಾಯ ಮಾಡಿದನು.

**ಮೊಟ್ಟಮೊದಲು ಸಾವಾರ್ತಾ ಸೇವೆಗೆ ಕರೆ:**



ಸಭೆಯಾಗಿ ಪ್ರಾರ್ಥಿಸುತ್ತಿರುವಾಗ ದೇವರಾತ್ಮನು – ನಾನು ಬಾರ್ನಬ ಸೌಲರನ್ನು ಕರೆದ ಕೆಲಸಕ್ಕಾಗಿ ಪ್ರತ್ಯೇಕಿಸಿರಿ ಎಂದು ಹೇಳಿದನು (ಅ.ಕೃ. 13;2). ಸಭೆಯ ಹಿರಿಯರು ಇವರಿಬ್ಬರ ಮೇಲೆ ಹಸ್ತಾರ್ಪಣ ಮಾಡಿ ಇವರನ್ನು ಕಳುಹಿಸಿದರು (ಅ.ಕೃ. 13:3). ಕ್ರಿ.ಪೂ 45ರಲ್ಲಿ ಇವರ ಮೊದಲ ಪ್ರಯಾಣ ಆರಂಭವಾಯಿತು. ಬಾರ್ನಬ ಸೌಲರು ಅಪೋಸ್ತಲರೆಂದು ಕರೆಯಲ್ಪಟ್ಟರು. ಅದೇರೀತಿಯಾಗಿ ಎರಡನೇ ಸೇವಾ ಪ್ರಯಾಣದಲ್ಲಿದ್ದು ಅನೇಕ ಸ್ಥಳಗಳಿಗೆ ಸುವಾರ್ತೆ ಸಾರಿದರು.

ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ (ಹಿಬ್ರಿಯ 11:6).

**ಪ್ರಶ್ನೆಗಳು**

1. ಬಾರ್ನಬನು ಯಾವ ಯಾವ ಪ್ರಾಂತ್ಯಗಳಲ್ಲಿ ಜೀವಿಸಿದನು?

2. ಬಾರ್ನಬನು ತನಗಿದ್ದ ಭೂಮಿಯನ್ನು ಮಾರಿ ಬಂದ ಹಣವನ್ನು ಯಾರ ಬಳಿಗೆ ತಂದುಕೊಟ್ಟನು?\

3. ಬಾರ್ನಬನ ಮೊದಲನೇಯ ಹೆಸರು ಏನು?

4. ಹಿಂಸಕನಾದ ಸೌಲನು ಪೌಲನಾಗಿ ಮಾರ್ಪಟ್ಟಾಗ ಅಪೋಸ್ತಲರಿಗೆ ಪರಿಚಯಿಸಿದವನು ಯಾರು?

5. ಬಾರ್ನಬ ಈ ಹೆಸರಿನ ಅರ್ಥವೇನು? ಅಥವಾ ಈ ಹೆಸರು ಅವನಿಗೆ ಬರಲು ಕಾರಣವೇನು?

**ಬಾರ್ನಬನ ಜೀವಿತದಿಂದ ಕಲಿಯುವಂತ ಪಾಠಗಳು**

- ಆದರಣೆ ನೀಡುವುದು ಪರಿಣಾಮಕಾರಿಯಾದ ಸಹಾಯ.
- ಅನೇಕರು ಆದರಣೆಯನ್ನು ಅಪೇಕ್ಷಿಸುವವರು ಲೋಕದಲ್ಲಿ ಇದ್ದಾರೆ.
- ಸಹಾಯ ಮನೋಭಾವನೆಯನ್ನು ಬೆಳೆಯಿಸಿಕೊಳ್ಳಬೇಕು.
- ದೇವರು ಕೊಟ್ಟ ಕೆಲಸ ಯಾವುದೇ ಎಂಥದ್ದೇ ಆಗಿರಲಿ ಅದರಲ್ಲಿ ನಂಬಿಗಸ್ತರಾಗಿರಬೇಕು.
- ದೇವರ ರಾಜ್ಯಕ್ಕಾಗಿ ಸಮರ್ಪಣೆಯುಳ್ಳವರಾಗಿರಬೇಕು.

**ಬಾರ್ನಬನ ಕುರಿತಾಗಿ :** ಅ.ಕೃ. 9:27–15:39, ಮತ್ತು 1ಕೊರಿ 9:6, ಗಲಾತ್ಯ 2:1,9,13.

# ಫಿಲಿಪ್ಪನು

ಇವನು ಕ್ರಿಸ್ತನ ಶಿಷ್ಯರಲ್ಲಿ ಒಬ್ಬನಾಗಿದ್ದ ಫಿಲಿಪ್ಪನಲ್ಲ. ಇವನು ಸ್ತೆಫನನ ಹಾಗೆ ಲೌಕಿಕ ಕಾರ್ಯಗಳನ್ನು ನಡೆಸುವುದಕ್ಕೆಂದು ಆರಿಸಲ್ಪಟ್ಟ ಏಳು ಮಂದಿಯಲ್ಲಿ ಒಬ್ಬನು (ಅ.ಕೃ. 6:5). ಇವನು ಯೇರೂಸಲೇಮಿನ ಸಭೆಯಲ್ಲಿ ಶ್ರೀಮಂತನಗಿದ್ದನು. ಸಂಭಾವಿತನು, ಪವಿತ್ರಾತ್ಮಭರಿತನು ಜ್ಞಾನವರ ಸಂಪನ್ನನು ಆಗಿದ್ದನು (ಅ.ಕೃ. 6:3). ಫಿಲಿಪ್ಪನೆಂದರೆ ಗ್ರೀಕ್ ಭಾಷೆಯಲ್ಲಿ "ಕುದುರೆಗಳನ್ನು ಪ್ರೀತಿಸುವವನು" ಎಂದರ್ಥ. ಫಿಲಿಪ್ಪನು ಗ್ರೀಕ್ ಭಾಷೆಯನ್ನು ಮಾತನಾಡುತಿದ್ದ ಒಬ್ಬ ಯೆಹೂದ್ಯನು.

ಗ್ರೀಕ್ ಭಾಷೆ ಮಾತನಾಡುತ್ತಿದ್ದ ವಿಧವೆಯರ ಉಪಚಾರಕ್ಕಾಗಿ ನೇಮಿಸಲ್ಪಟ್ಟ ಏಳು ಮಂದಿಯಲ್ಲಿಯೂ, ಕ್ರಿಸ್ತನಿಗಾಗಿ ಸಾಕ್ಷಿಕೊಡುವುವವರಾಗಿದ್ದನು. ಇವರು ತಮ್ಮ ಸೇವೆಯನ್ನು ನಂಬಿಕೆಯಿಂದ ಮಾಡುತ್ತಿದ್ದುದ್ದರಿಂದ ದೇವರ ವಾಕ್ಯವು ಪ್ರಬಲವಾಯಿತು. ಶಿಷ್ಯರ ಸಂಖ್ಯೆಯು ಯೆರೋಸಲೇಮಿನಲ್ಲಿ ಹೆಚ್ಚುತ್ತಾ ಬಂತು. ಯಾಜಕರಲ್ಲಿಯೂ ಬಹು ಜನರು ಕ್ರಿಸ್ತನ ನಂಬಿಕೆಗೆ ಒಳಗಾಗುತ್ತಾ ಬಂದರು (ಅ.ಕೃ. 6:7).

**ಸಮಾರ್ಯದಲ್ಲಿ ಫಿಲಿಪ್ಪನು:**

ಜೋತೆ ಸೇವಕನಾದ ಸ್ತೆಫನನ ಮರಣದ ನಂತರ ಯೆರೂಸಲೇಮಿನಲ್ಲಿದ್ದ ಸಭೇಯವರಿಗೆ ಕಷ್ಟವು ಅನಿರ್ವಾಯವಾಯಿತು. ಅಪೋಸ್ತಲರನ್ನು ಬಿಟ್ಟು ಉಳಿದವರು ಯೂದಾಯ, ಸಮಾರ್ಯ ದೇಶಗಳಲ್ಲಿ ಚದುರಿ ಹೋದರು. ಈ ಇಕ್ಕಟ್ಟಿನ ಪರಿಸ್ಥಿತಿಯಲ್ಲಿಯೂ ಫಿಲಿಪ್ಪನು ಸುವಾರ್ತಾ ಸೇವೆಯನ್ನು ಮಾಡಿದನು. ಯೇಹೂದ್ಯರಲ್ಲದವರನ್ನು ಸಭೆಯಲ್ಲಿ ಸೇರಿಸಿಕೊಂಡವರಲ್ಲಿ ಮೋದಲನೇಯವನೇ ಫಿಲಿಪ್ಪನು. ಸಮಾರ್ಯದವರನ್ನು ಯೆಹೂದ್ಯರು ಬಹಳ ಕೀಳಾಗಿ ನೋಡುತ್ತಿದ್ದರು.



**<u>ಫಿಲಿಪ್ಪನು ಪ್ರಸಂಗಿಸಿದ್ದು ಹಾಗೂ ದೇವರ ಬಲದಿಂದ ಅನೇಕ ಬಿಡುಗಡೆಮಾಡಿದ್ದು ಮತ್ತು ಮಂತ್ರವಾದಿ ಸೀಮೋನನು ರಕ್ಷಣೆ ಹೊಂದಿದ್ದು.</u>**

ಫಿಲಿಪ್ಪನು ಸಮಾರ್ಯದಲ್ಲಿ ಬಂದು ಪಟ್ಟಣದಲ್ಲಿ ಕ್ರಿಸ್ತನ ಕುರಿತು ಪ್ರಸಂಗಿಸಿದನು (ಅ.ಕೃ. 8:5). ಅಶುದ್ದಾತ್ಮಗಳನ್ನು ಓಡಿಸಿದನು, ವ್ಯಾಧಿಗಳನ್ನು ಗುಣಪಡಿಸಿದನು (ಪಾರ್ಶ್ವವಾಯು ರೋಗಿಗಳನ್ನು, ಕುಂಟರನ್ನು ಮತ್ತು ದೆವ್ವ ಪಿಡಿತರನ್ನು ಬಿಡಿಸಿದನು. ಆದುದ್ದರಿಂದ ಆ ಪಟ್ಟಣದಲ್ಲಿ ಬಹಳ ಸಂತೋಷ ಉಂಟಾಯಿತು.

ಆ ಪಟ್ಟಣದಲ್ಲಿ ಸಿಮೋನನೆಂಬ ಮಂತ್ರವಾದಿಯು ಸಮಾರ್ಯ ಪಟ್ಟಣದ ಜನರನ್ನು ತನ್ನ ಮಂತ್ರ ವಿಧ್ಯೆಗಳಿಂದ ಮೊಸಗೊಳಿಸುತ್ತಿದ್ದನು. ಒಂದು ದಿನ ಫಿಲಿಪ್ಪನು ದೇವರ ವಾಕ್ಯವನ್ನು ಪ್ರಸಂಗಿಸುವಾಗ ಇದನ್ನು ಕೇಳಿದ ಜನರು ಮಂತ್ರದ ಬಂದನಗಳಿಂದ ಬಿಡುಗಡೆಹೊಂದಿದರು ಮತ್ತು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು (ಅ.ಕೃ. 8:12). ಸೀಮೋನನು ಕೂಡ ಯೇಸುಕ್ರಿಸ್ತನನ್ನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರೂ ಅವನ ಉದ್ದೇಶವೆಲ್ಲವೂ ಫಿಲಿಪ್ಪನು ಮಾಡಿದ ಅಧ್ಬುತಗಳ ಮೇಲೆಯೇ ಇತ್ತು. ಸಮಾರ್ಯದಲ್ಲಿ ಉಂಟಾದ ಉಜ್ಜೀವನದ ಬಗ್ಗೆ ಕೇಳಿದ ಅಪೂಸ್ತಲರು ಪೇತ್ರನನ್ನು, ಯೊಹಾನನ್ನು ಅಲ್ಲಿಗೆ ಕಳುಹಿಸಿದರು. ಅವರು ಪ್ರಾರ್ಥಿಸಿ ವಿಸ್ವಾಸಿಗಳ ಮೇಲೆ ಕೈಗಳನ್ನಿಡುವಾಗ ವಿಶ್ವಾಸಿಗಳು ಪರಿಶುದ್ದಾತ್ಮನ ವರವನ್ನು, ಅಭಿಷೇಕವನ್ನು ಹೊಂದುವುದನ್ನು ಕಂಡ ಸೀಮೋನನು ಹಣವನ್ನು ಕೊಟ್ಟು ಆ ವರವನ್ನು ಕೊಂಡುಕೊಳ್ಳಲು ಬಯಸಿದನು (ಅ. ಕೃ. 8:19). ಇನ್ನೂ ಕೂಡ ಅವನಲ್ಲಿದ್ದ ಮಂತ್ರವಿಧ್ಯೆ ಅವನನ್ನು ಬಿಟ್ಟು ಹೋಗಿರಲಿಲ್ಲ. ಆದರೆ ಪೇತ್ರನು ಅವನನ್ನು

ಗದರಿಸಿದಾಗ ಅವನು ತನ್ನ ತಪ್ಪನ್ನು ಅರಿತು ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡನು. ಫಿಲಿಪ್ಪನು ಸಮಾರ್ಯದಲ್ಲಿ ಮಾಡಿದ ಸೇವೆ ಫಲದಾಯಕವಾಗಿತ್ತು.

**ಫಿಲಿಪ್ಪನು ಐಥಿಯೋಪ್ಯದ ಮಂತ್ರಿಗೆ ದೀಕ್ಷಾಸ್ನಾನ ಮಾಡಿಸಿದ್ದು.**

ದೇವರು ತನಗಾಗಿ ಒಬ್ಬನನ್ನು ಆರಿಸಿ ತೆಗೆದುಕೊಂಡಾಗ ಅದಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮೊದಲೇ ಮಾಡಿರುತ್ತಾನೆಂಬುದು ಇದರಿಂದ ತಿಳಿದು ಬರುತ್ತದೆ. ನಾವು ಮಾಡಬೇಕಾಗಿರುವುದು ಎನೆಂದರೆ ಆತನ ಸ್ವರಕ್ಕೆ (ಧ್ವನಿಗೆ) ಕಿವಿಗೊಡುವುದಾಗಿದೆ.

ಫಿಲಿಪ್ಪನು ದೇವರಾತ್ಮನುಸಾರವಾಗಿ ಆ ಮಾರ್ಗದಲ್ಲಿ ಹಾದು ಹೋಗುವಾಗ ಐಥಿಯೋಪ್ಯದ ಮಂತ್ರಿಯೊಬ್ಬನು ಯೆರೂಸಲೇಮಿನಿಂದ ತನ್ನ ರಥದಲ್ಲಿ ಊರಿಗೆ ಹಿಂತಿರುಗಿ ಹೋಗುತ್ತಿದ್ದನು. ಆತನು ಐಶ್ವರ್ಯವಂತನು. ಕಂದಾಕೆ ಎನ್ನುವುದು ಅವನಿಗಿದ್ದ ಅಧಿಕಾರದ ಹೆಸರು. ಅದರ ಅರ್ಥ ರಾಣೀ ಮಾತ ಎಂದು ಆ ಸಮಯದಲ್ಲಿ ಬೆರೋಯ ಪಟ್ಟಣದ ರಾಣಿಯ ಹೆಸರನ್ನು ಅಲ್ಲಿ ಸೂಚಿಸಲಾಗಿದೆ. ಫಿಲಿಪ್ಪನು ಸಂದಿಸಿದ ಆ ವ್ಯಕ್ತಿ ಮಂತ್ರಿಯಾಗಿದ್ದು ಮಾತ್ರವಲ್ಲ. ಅವನು ಬೊಕ್ಕಸದ ಅಧಿಕಾರಿಯಾಗಿದ್ದನು. ಅವನು ದೇವಾರಾಧನೆಗೊಸ್ಕರ ಯೆರೂಸಲೇಮಿಗೆ ಬಂದು ಹಿಂತಿರುಗಿ ಹೋಗುವಾಗ ತನ್ನ ರಥದಲ್ಲಿ ಕೂತುಕೊಂಡು ಯೇಶಾಯ ಪ್ರವಾದನೆ ಗ್ರಂಥವನ್ನು ಓದುತ್ತಿದ್ದನು. (ಅ.ಕೃ. 8:22). ಇದರಿಂದ ಒಬ್ಬನೇ ದೇವರನ್ನು ನಂಬಿದನೆಂದು ತಿಳಿದು ಬರುತ್ತದೆ. ಆದರೆ ಮಾನವರನ್ನು ಅಧಿಕಾರದ ದೊರೆತನದಿಂದ ಬಿಡಿಸುವುದಕ್ಕಾಗಿಯೂ ರಕ್ಷಣೆಯನ್ನು ಕೊಡುವುದಕ್ಕಾಗಿ ಕ್ರಿಸ್ತನು ಈ ಲೋಕಕ್ಕೆ ಬಂದನೆಂಬುದು ಕಂಚುಕಿಗೆ ತಿಳಿದಿರಲಿಲ್ಲ. ಫಿಲಿಪ್ಪನು ಯೇಸುವಿನ ಬಗ್ಗೆ ತಿಳಿಯಪಡಿಸಿದಾಗ ಆತನು ತಕ್ಷಣವೇ ನಂಬಿ ದೀಕ್ಷಾಸ್ನಾನ ಹೊಂದಿದನು.

**ಫಿಲಿಪ್ಪನ ನಂತರದ ಸೇವೆ:**

ಇದಾದ ನಂತರ ಫಿಲಿಪ್ಪನು ಅಜೋತಿನಲ್ಲಿ ಕಾಣಿಸಿಕೊಂಡು ಅಲ್ಲಿಂದ ಕೈಸರೈಯದ ತನಕ ಎಲ್ಲಾ ಊರುಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ಹೋದನು (ಅ.ಕೃ. 8:40). ಫಿಲಿಪ್ಪನಿ ಕೈಸರೈಯಲ್ಲಿಯೇ ಇದ್ದು ತನ್ನ ಸೇವೆಯನ್ನು ಮುಂದುವೆರೆಸಿದನೆಂದು ತಿಳಿದು ಬರುತ್ತದೆ. ಕೆಲವು ವರ್ಷಗಳ ನಂತರ ಅಪೋಸ್ತಲನಾದ ಪೌಲನು ಕೈಸೆರೈಯಕ್ಕೆ ಬಂದು ಫಿಲಿಪ್ಪನ ಮನೆಯಲ್ಲಿ ಇಳಿದುಕೊಂಡನು (ಅ.ಕೃ. 21:8). ಫಿಲಿಪ್ಪನಿಗೆ 4 ಜನ ಹೆಣ್ಣು ಮಕ್ಕಳು ಇದ್ದರು ಅವರು ಕೂಡ ಪ್ರವಾದಿಸುವವರಾಗಿದ್ದರು (ಅ. ಕೃ. 21:9).

**ಪ್ರಶ್ನೆಗಳು**

1. ಫಿಲಿಪ್ಪ ಈ ಹೆಸರಿನ ಅರ್ಥವೇನು?
2. ಸಿಮೋನನು ಯಾರಾಗಿದ್ದನು?
3. ಐಥಿಯೋಪ್ಯದ ಮಂತ್ರಿಯು ಯಾವ ಪ್ರವಾದನಾ ಗ್ರಂಥವನ್ನು ಓದುತ್ತಿದ್ದನು?
4. ಫಿಲಿಪ್ಪನ್ನು ಎಷ್ಟು ಜನ ಮಕ್ಕಳಿದ್ದರು?

# ಪೌಲನು


ಪೌಲನು ತಾರ್ಸದಲ್ಲಿ ಜೀವಿಸುವವನಾಗಿದ್ದನು. ಇವನು ಗುಡಾರ ಸಿದ್ದಮಾಡುವ ಅಥಾವ ಹೆಣೆಯುವ ಕೆಲಸವನ್ನು ಮಾಡುವವನಾಗಿದ್ದನು.ಇವರು ಲೂಕ ಬಾರ್ನಬ, ತಿಮೋಥಿ ಹಾಗೂ ಸ್ತೆಫಾನನು ಇವರು ಜೀವಿಸುವಂತ ಕಾಲದಲ್ಲಿ ಜೀವಿಸುವವನಾಗಿದ್ದನು. (ಇವನ ಸಮಕಾಲಿಕರ) ಇವನು ಸತ್ಯವೇದದಲ್ಲಿ ಕಂಡುಬರುವ ಎಲ್ಲಾ ವ್ಯಕ್ತಿಗಳಿಗಿಂತ ವಿಭಿನ್ನ ರಿತಿಯನ್ನೆಲೆಯನ್ನು ಹೋಂದಿದವನಾಗಿದ್ದನು. ಯಾಕಂದರೆ ಸತ್ಯವೇದವು ಇವನ ಕುರಿತಾಗಿ ಕೇಲವು ಹಿನ್ನೇಲೆಗಳನ್ನು ತಿಳಿಯಪಡಿಸುವಂತಾಗಿದೆ ಹಿನ್ನೆಲೆ ಬೆರೆಯಾದರು ವ್ಯಕ್ತಿ ಮಾತ್ರ ಒಬ್ಬನಾಗಿನಾಗಿದ್ದಾನೆ. ಯೇಸುಕ್ರೀಸ್ತನ ನಂತರ ಚರಿತ್ರೆಯನ್ನು ರೂಪಿಸಿದವರಲ್ಲಿ ಪೌಲನಿಗೆ ಸಮಾರು ಯಾರು ಇಲ್ಲ.

**ಪೌಲನ ಮೊದಲನೆಯ ಜೀವಿತ**

ಪೌಲನು ಪರಿವರ್ತನೆಯಾಗುವುದಕ್ಕಿಂತ (ರಕ್ಷಣೆ ಹೋಂದುವದಕ್ಕಿಂತ) ಮುಂಚೆ ಸೌಲನು ಎಂಬುದಾಗಿ ಕರೆಯಲ್ಪಟ್ಟವನಾಗಿದ್ದನು. ಇವನೊಬ್ಬ ಕ್ರೈಸ್ತ ಸಭೆಯ ಹಿಂಸಕನಾಗಿದ್ದನು ತನ್ನ ದಿನಮಾನಗಳಲ್ಲಿ ಯಾರಾರು ಕ್ರಿಸ್ತನ್ನನ್ನು ಸ್ವಂತ ರಕ್ಷಕನ್ನನಾಗಿ ಅಂಗಿಕರಿಸಿಕೊಂಡು ಜೀವಿಸುತ್ತಿದ್ದರು ಅಂತವರು ಸಿಕ್ಕಿದರೆ ಅವರು ಗಂಡಸರಾದರೂ ಸರಿಯೆ ಹೆಂಗಸರಾದರು ಸರಿಯೆ ವಿಚಿತ್ರವಾದ ಹಿಂಸೆಯನ್ನು ಕೊಟ್ಟು ಆ ಮಾರ್ಗದಿಂದ ತಪ್ಪಿಸಲು ಪ್ರಯತ್ನಿಸುವಂತವನಾಗಿದ್ದನು. ಅನೇಕ ರಿತಿಯಾದಂತಹ ಹಿಂಸತ್ಮಾಕ ಕಾರ್ಯಗಳನ್ನು ನಡೆಸುತ್ತಾ ತಾನು ಮತಾಭಿಮಾನಿಯಾಗಿ ಜೀವಿಸಿದನು. ಒಟ್ಟಾರೆಯಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ ಕ್ರಿಸ್ತನ ಭಕ್ತರನ್ನು ಹಿಂಸೆಪಡಿಸುತ್ತಿದ್ದನು.

**ಪೌಲನು ಪರಿವರ್ತನೆ ಹೊಂದಿದ್ದು(ರಕ್ಷಣೆ ಹೊಂದಿದ್ದು):**

ಸೌಲನು (ಪೌಲ) ದೇವರ ಮಕ್ಕಳ ಮೇಲೆ ಆಕ್ರೋಶಗೊಂಡು ಬೆದರಿಕೆಯ ಮಾತುಗಳನ್ನಾಡುತ್ತಾ, ಅವರನ್ನು ಸಂಹರಿಸಬೇಕೆಂದು ಬಯಸಿ ಮಹಾಯಾಜಕನ ಬಳಿಗೆ ಹೋಗಿ– ಕ್ರಿಸ್ತನ ಮಾರ್ಗವನ್ನು ಅನುಸರಿಸುವವರು ಯಾರಾದರು ಸಿಕ್ಕರೆ ,ಅವರು ಯಾರೆಯಾಗಿರಲಿ ನಾನು ಅವರಿಗೆ ಬೇಡಿಹಾಕಿಸಿ ಯೆರೊಸಲೇಮಿಗೆ ತರುವಂತೆ ದಮಸ್ಕದಲ್ಲಿರುವ ಆಯಾ ಸಭಾಮಂದಿರದವರಿಗೆ ನೀನು ಕಾಗದವನ್ನು ಕೊಡಬೇಕೆಂದು ಅವನನ್ನು ಬೇಡಿಕೊಂಡನು. ನಂತರ ಅವನು ಪ್ರಯಾಣ ಮಾಡುತ್ತಾ ದಮಸ್ಕದ ಹತ್ತಿರಕ್ಕೆ ಬರಲು ಪಕ್ಕನೆ ಆಕಾಶದೊಳಗಿಂದ ಒಂದು ಬೆಳಕು ಅವನ ಸುತ್ತಲು ಮಿಂಚಿತು. ಅವನು ನೆಲಕ್ಕೆ ಬಿದ್ದು– ಸೌಲನೇ, ಸೌಲನೇ, ನನ್ನನ್ನು ಯಾಕೆ ಹಿಂಸೆ ಪಡಿಸುತ್ತೀ ಎಂದು ಹೇಳುವ ವಾಣಿಯನ್ನು ಕೇಳಿದನು. ಅವನು– ಕರ್ತನೇ,ನೀನು ಯಾರು ಎಂದು ಕೇಳಿದ್ದಕ್ಕೆ, ಕರ್ತನು– ನೀನು ಹಿಂಸೆಪಡಿಸುವ ಯೇಸುವೇ ನಾನು. ನೀನೆದ್ದು ಊರೊಳಕ್ಕೆ ಹೋಗು, ನೀನು ಮಾಡಬೇಕಾದದ್ದು ಅಲ್ಲಿ ನಿನಗೆ ತಿಳಿಸಲ್ಪಡುವದು ಎಂದು ಹೇಳಿದನು. ಅವನ ಜೊತೆಯಲ್ಲಿ ಪ್ರಯಾಣಮಾಡುತ್ತಿದ್ದವರು, ಧ್ವನಿಯನ್ನು ಮಾತ್ರ ಕೇಳಿ ಯಾರನ್ನು ಕಾಣದೆ ಮೂಕರಂತೆ ನಿಂತರು. ಸೌಲನು (ಪೌಲನು) ಎದ್ದು ಕಣ್ಣುತೆರೆದಾಗ ಏನೂ ಕಾಣಲಿಲ್ಲ. ಆಗ ಅವರು ಅವನನ್ನು ಕೈಹಿಡಿದು ದಮಸ್ಕದೊಳಕ್ಕೆ ಕರೆದುಕೊಂಡು ಹೋದರು. ಅವನು ಮೂರು ದಿವಸ ಕಣ್ಣುಕಾಣದೆ ಏನೂ ತಿನ್ನಲಿಲ್ಲ, ಏನೂ ಕುಡಿಯಲಿಲ್ಲ.



ನಂತರ ಕರ್ತನು ದಮಸ್ಕದಲ್ಲಿ ಅನನೀಯನೆಂಬ ಒಬ್ಬ ಶಿಷ್ಯನ ಮೂಲಕ ಪೌಲನಿಗೆ ಪ್ರಾರ್ಥಿಸುವಂತೆ ಮಾಡಿದನು. ಆಗ ಕೂಡಲೆ ಪೌಲನ ಕಣ್ಣುಗಳಿಂದ ಪರೆಗಳಂತೆ ಏನೋ ಬಿದ್ದು ಅವನ ಕಣ್ಣುಗಳು ಕಾಣಿಸಲ್ಪಟ್ಟವು. ಅವನು ಎದ್ದು ದೀಕ್ಷಸ್ನಾನವನ್ನು ಮಾಡಿಸಿಕೊಂಡನು.

**ಪೌಲನ ಸೇವೆ:**

ನಂತರ ಅವನು ದಮಸ್ಕದಲ್ಲಿದ್ದ ಶಿಷ್ಯರ ಸಂಗಡ ಕೆಲವು ದಿವಸ ಇದ್ದು ತಡಮಾಡದೆ ಸಭಾಮಂದಿರಗಳಲ್ಲಿ ಯೇಸುವಿನ ಕುರಿತಾಗಿ ಯೇಸುವೇ ದೇವಕುಮಾರನೆಂದು ಸಾರುವುದಕ್ಕೆ ಪ್ರಾರಂಭಮಾಡಿದನು. ತಾನು ಸತ್ಯವನ್ನು ತಿಳಿದುಕೊಂಡ ನಂತರ ಪೌಲನು ಸ್ವರ್ಥಕ್ಕಾಗಿ ಜೀವಿಸದೆ ಲೋಕಕ್ಕಾಗಿ ಜೀವಿಸದೆ ದೇವರಿಗಾಗಿ ಜೀವಿಸುಂತ ವ್ಯಕ್ತಿಯಾಗಿದ್ದ. ಆತನು ತಾನೆ ಹೇಳುತ್ತಾನೆ ನನಗಂತು ಬದುಕುವುದೆಂದರೆ ಕ್ರಿಸ್ತನೆ ಸಾಯಿವುದು ಲಾಭವೆ ಫಿಲಿಪ್ಪಿ: 1:21 ನನಗೆ ಲಾಭಾವಾಗಿದ್ದಂತವುಗಳನ್ನು ಕ್ರಿಸ್ತನ ನಿಮಿತ್ತ ನಷ್ಟವೆಂದೆಣೆಸುತ್ತೆನೆ. ಇಷ್ಟೇ ಅಲ್ಲದೆ ನನ್ನ ಕರ್ತನಾದ ಕ್ರಿಸ್ತಯೇಸುವನ್ನು ನಂಬುದೇ ಅತಿಶ್ರೆಷ್ಟ ವಾದುದ್ದೆಂದು ತಿಳಿದು ನಾನು ಎಲ್ಲಾವನ್ನು  ನಷ್ಟವೆಂದೆಣೆಸುತ್ತೆನೆ. ಆತನ ನಿಮಿತ್ತಾ ನಾನು ಕಳಕೊಂಡು ಅದನ್ನು ಕಸವೆಂದೆಣೆಸುತ್ತೆನೆ.(ಫಿಲಿಪ್ಪಿ: 3:7,8) ಈತನು ಅಪೋಸ್ತಲನಾಗಿ ಕರೆಯಲ್ಪಟ್ಟನು.

ಪೌಲನು ಇತರರಿಗಿಂತ ಹೆಚ್ಚು ಪ್ರಯಾಸಪಟ್ಟನು.

ಪೌಲನು ಇತರರಿಗಿಂತ ಹೆಚ್ಚು ಸಂಕಟಪಟ್ಟನು.

ಪೌಲನು ಇತರರಿಗಿಂತ ಹೆಚ್ಚು ಸಭೆಗಳನ್ನು ಸ್ಥಾಪಿಸಿದನು.

ಸುವಾರ್ತೆಯನ್ನು ಸಾರುವುದಕ್ಕಾಗಿ ಪೌಲನು 3 ಸಾರಿ ಲೋಕ ಸಂಚಾರವನ್ನು ಮಾಡಿದನು. ಅನೇಕ ಸಭೆಗಳನ್ನು ಸ್ಥಾಪಿಸಿದನು. ದೇವರ ಸಹಾಂಯದಮೇರಿಗೆ ಅನೇಕ ಅದ್ಭುತ ಕಾರ್ಯಗಳನ್ನು, ಸೂಚಕ ಕಾರ್ಯಗಳನ್ನು ಮಾಡಿದನು. ಅನೇಕ ಸಮಸ್ಯಗಳ ಮಧ್ಯದಲೂ,ಹೊರಾಟದ ಮಧ್ಯದಲೂ, ಸಂಕಟದ ಮಧ್ಯದಲೂ ಕ್ರಿಸ್ತನನ್ನು ಹಿಂಬಾಲಿಸುತ್ತಾ ದೇವರ ಸಂದೇಶವನ್ನು ಅನೇಕ ಕಡೆಗೆ ತಗೆದುಕೊಂಡು ಹೋದನು. ಈತನು 13 ಪತ್ರಿಕೆಗಳ ಲೇಖಕನಾಗಿದ್ದನೆ. ಅವುಗಳೆಂದರೆ:–

1. ರೋಮಾಪುರದವರಿಗೆ
2. 1ಕೊರಿಂಥದವರಿಗೆ
3. 2ಕೊರಿಂಥದವರಿಗೆ
4. ಗಲಾತ್ಯದವರಿಗೆ
5. ಎಫೆಸದವರಿಗೆ
6. ಫಿಲಿಪ್ಪಿಯವರಿಗೆ
7. ಕೊಲೊಸ್ಸೆಯರಿಗೆ
8. 1ಥೆಸಲೋನಿಕದವರಿಗೆ
9. 2ಥೆಸಲೋನಿಕದವರಿಗೆ
10. 1ತಿಮೊಥೆಯನಿಗೆ
11. 2ತಿಮೊಥೆಯನಿಗೆ
12. ತೀತನಿಗೆ
13. ಫಿಲೆಮೋನನಿಗೆ

**ಪೌಲನ ಜೀವಿತದಿಂದ ನಾವು ಕಲಿಯುವಂತ ಪಾಠಗಳು:**

- ದೇವರ ರಾಜ್ಯವನ್ನು ಕಟ್ಟುವುದರಲ್ಲಿ ಪ್ರಯಾಸಪಡುವವರಾಗಿರಬೇಕು.
- ಸ್ವರ್ಥಕ್ಕಾಗಿ, ಲೋಕಕ್ಕಾಗಿ ಜೀವಿಸದೆ,ದೇವರಿಗಾಗಿ ಜೀವಿಸುವವರಾಗಿರಬೇಕು.
- ಸೇವಾ ಮನೋಭಾವನೆಯನ್ನು ಬೆಳಸಿಕೊಳ್ಳಬೇಕು.

● ದೇವರ ಚಿತ್ತಾನುಸಾರವಾಗಿ ಸೇವೆಮಾಡುವವರಾಗಿರಬೇಕು.

● ಎಲ್ಲ ಇಕ್ಕಟ್ಟಿನ ಪರಿಸ್ಥಿತಿಗಳ ಮಧ್ಯದಲ್ಲೂ ದೇವರನ್ನು ಹಿಂಬಾಲಿಸುವವರಾಗಿರಬೇಕು.

**ಪ್ರಶ್ನೆಗಳು**

1. ಪೌಲನ ಮೊದಲ ಜೀವಿತದ ಕುರಿತಾಗಿ ಎರಡು ಮೂರು ವಾಕ್ಯಗಳಲ್ಲಿ ವಿವರಿಸಿ.
2. ಪೌಲನನ್ನು ದೇವರು ಸಂಧಿಸಿದರ ಕುರಿತಾಗಿ ಎರಡು ಮೂರು ವಾಕ್ಯಗಳಲ್ಲಿ ವಿವರಿಸಿ.
3. ಪೌಲನು ಎಷ್ಟು ಪತ್ರಿಕೆಗಳನ್ನು ಬರೆದನು?
4. ಪೌಲನು ಎಷ್ಟು ಪ್ರಯಾಣಗಳನ್ನು ಕೈಗೊಂಡನು?

ಪೌಲನ ಕುರಿತು ಅಪೊಸ್ತಲರ ಕೃತ್ಯಗಳಲ್ಲಿ ಮತ್ತು ಆತನ 13 ಪತ್ರಿಕೆಗಳಲ್ಲಿ ಉಲ್ಲೇಖಿಸಲಾಗಿದೆ.